

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಡಿಸೆಂಬರ್ 25 ಬುಧವಾರ 2024

ಸಂಪುಟ: 45 | ಸಂಚಿಕೆ: 248 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ವಿಧಾನಪರಿಷತ್‌ನಲ್ಲಿ ಅಶ್ಲೀಲ ಪದ ಬಳಕೆ

ಸಿಐಡಿ ತನಿಖೆ

● ಸಿ.ಟಿ.ರವಿ ಕೊಲೆ ಪ್ರಯತ್ನ ಹೇಳಿಕೆಯ ಬಗ್ಗೆಯೂ ತನಿಖೆ ● ಮೂರು ತಿಂಗಳಲ್ಲಿ ವರದಿ ನೀಡಲು ಸೂಚನೆ ● ಗೃಹ ಸಚಿವ ಡಾ.ಪರಮೇಶ್ವರ್ ಮಾಹಿತಿ

ಬೆಂಗಳೂರು, ಡಿ.24(ಕೆಎಂಶಿ)– ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಬಿಜೆಪಿ ಶಾಸಕ ಸಿ.ಟಿ.ರವಿ ಅಶ್ಲೀಲ ಪದ ಬಳಕೆ ಮಾಡಿದ್ದಾರೆ ಎಂಬ ಆರೋಪ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ವಹಿಸಿದೆ.

ಅಶ್ಲೀಲ ಪದ ಬಳಕೆ ಆರೋಪದ ಜೊತೆಗೆ, ವಿಧಾನ ಪರಿಷತ್ ಆವರಣದಲ್ಲೇ ತಮ್ಮ ಕೊಲೆಗೆ ಪ್ರಯತ್ನ ನಡೆದಿತ್ತು ಎಂದು ರವಿ ಅವರು ನೀಡಿರುವ ದೂರಿನ ಬಗ್ಗೆಯೂ ತನಿಖೆ ಆಗಲಿದೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕ ರವಿ ಅವರು ಸಚಿವೆ ವಿರುದ್ಧ ಅಶ್ಲೀಲ ಪದ ಬಳಸಿದ್ದಾರೆ ಎಂಬ ವಿಷಯದ ಮೇಲೆ ಈಗಾಗಲೇ ರೂಲಿಂಗ್ ನೀಡಲಾಗಿದೆ, ಪೊಲೀಸ್‌ನವರು, ಪರಿಷತ್ ಅಂಗಳಕ್ಕೆ ಪ್ರವೇಶ ಮಾಡಿದ್ದಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಮಾಹಿತಿ



ನೀಡಿದ್ದೇನೆ ಎಂದು ವಿಷಯಕ್ಕೆ ತೆರೆ ಎಳೆದಿದ್ದರು. ಸಭಾಪತಿ ಅವರ ನಿರ್ಧಾರ ಪ್ರಕಟವಾಗುತ್ತಿದ್ದಂತೆ ಸರ್ಕಾರ ಪ್ರಕರಣವನ್ನು ಸಿಐಡಿಗೆ ವಹಿಸಿ ಮೂರು ತಿಂಗಳೊಳಗಾಗಿ ತನಿಖಾ ವರದಿ ನೀಡುವಂತೆ ಸೂಚಿಸಿದೆ. ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಚಿವರ ವಿರುದ್ಧ ರವಿ ಅವರು ಬಳಸಿದ ಪದಕ್ಕೆ ಸಂಬಂಧಿಸಿದಂತೆ ಹಲವು ವ್ಯಾಖ್ಯಾನ ಗಳು ಕೇಳಿಬರುತ್ತಿವೆ. ಇಬ್ಬರೂ ಒಬ್ಬರ ಮೇಲೊಬ್ಬರು ಆರೋಪ ಮಾಡಿದ್ದಾರೆ. ಠಾಣೆಯಲ್ಲಿ ದೂರು ದಾಖಲಾಗಿದೆ. ಹೀಗಾಗಿ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರ ತನಿಖೆಗೆ ಆದೇಶಿಸಿದೆ ಎಂದರು. ಲಕ್ಷ್ಮೀ ಹೆಬ್ಬಾಳ್ಕರ್ ಅವರು ನಿನ್ನೆ ಪತ್ರಿಕಾಗೋಷ್ಠಿ ನಡೆಸಿ, ರವಿ ಅವರಿಗೆ ಶಿಕ್ಷೆ ಆಗುವವರೆಗೂ ತಾವು

■ 6ನೇ ಪುಟಕ್ಕೆ

> ಸಿಐಡಿ ತನಿಖೆ ಸದನಕ್ಕೆ ಸಂಬಂಧಿಸಿದ್ದಲ್ಲ. ಸದನದ ನಿರ್ಣಯವನ್ನು ಯಾರೂ ಪ್ರಶ್ನಿಸುತ್ತಿಲ್ಲ. ಪ್ರಕರಣದ ಮತ್ತೊಂದು ಸಂಗತಿಯನ್ನು ಸಿಐಡಿ ತನಿಖೆ ನಡೆಸುತ್ತೆ.
> –ಬಸವರಾಜ ಹೊರಟ್ಟಿ, ವಿಧಾನಪರಿಷತ್ ಸಭಾಪತಿ

> ಯಾವ ತನಿಖೆಯಿಂದಲಾದರೂ ನ್ಯಾಯ ಸಿಗುತ್ತೆ. ಸತ್ಯಾ ಹೊರ ಬರಲಿ ಬಿಡಿ.
> –ಲಕ್ಷ್ಮಿ ಹೆಬ್ಬಾಳ್ಕರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ಸಚಿವೆ

> ಪ್ರಕರಣದ ಬಗ್ಗೆ ಸರಕಾರ ಸಿಐಡಿ ತನಿಖೆ ಮಾಡುವುದಾದರೇ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ಮತ್ತು ಅವರ ನಿರ್ದೇಶನದಲ್ಲಿ ತನಿಖೆ ನಡೆಯಲಿ, ನಿಷ್ಪಕ್ಷಪಾತ ತನಿಖೆ ಪೊಲೀಸ್ ಪೇದೆ ಕೂಡ ಮಾಡುತ್ತಾನೆ. ಒತ್ತಡ ಇದ್ದರೇ ಏನು ಮಾಡುತ್ತಾರೆ. ಒತ್ತಡ ಇಲ್ಲದಿದ್ದರೇ ಹಿರೇಬಾಗೇವಾಡಿ ಪೊಲೀಸರೇ ಒಳ್ಳೆಯ ತನಿಖೆ ಮಾಡಬಹುದು. ಒತ್ತಡ ಇರುವ ಕಾರಣ ಹಾಲಿ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ಸಿಐಡಿ ತನಿಖೆ ಮಾಡಿ.
> –ಸಿ.ಟಿ.ರವಿ, ವಿಧಾನಪರಿಷತ್ ಸದಸ್ಯ

ಕಮರಿಗೆ ಉರುಳಿದ ಸೇನಾ ವಾಹನ; ಐವರು ಯೋಧರು ಸಾವು

ಶ್ರೀನಗರ, ಡಿ.24– ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯ(ಎಲ್‌ಒಸಿ) ಬಳಿ ಮಂಗಳವಾರ ಸಂಜೆ ಸೇನಾ ವಾಹನ ಪಲ್ಟಿಯಾಗಿ ಕಮರಿಗೆ ಉರುಳಿ ಬಿದ್ದಿದ್ದು, ಭೀಕರ ಅಪಘಾತದಲ್ಲಿ ಐದು ಯೋಧರು ಸಾವನ್ನಪ್ಪಿದ್ದಾರೆ ಮತ್ತು ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ವೈಟ್ ನೈಟ್ ಕಾರ್ಪ್ಸ್ ತನ್ನ X ಖಾತೆಯ ಮೂಲಕ ಸಾವುನೋವುಗಳನ್ನು ಖಚಿತ ಪಡಿಸಿದ್ದು, ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ. ಗಾಯಗೊಂಡಿರುವ ಸೇನಾ ಸಿಬ್ಬಂದಿಗೆ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ. ವರದಿಗಳ ಪ್ರಕಾರ, ಇಂದು ಸಂಜೆ 5:40ರ ಸುಮಾರಿಗೆ 11 ಮರಾಠಾ ಲಘು ಪದಾತಿ ದಳದ ಸೇನಾ ವಾಹನವು ನಿಲಂ ಪ್ರಧಾನ ಕಛೇರಿಯಿಂದ ಎಲ್‌ಒಸಿ ಮೂಲಕ ಬಲ್ನೋಯಿ ಘೋರಾ ಪೋಸ್ಟ್‌ಗೆ ಪ್ರಯಾಣಿಸುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ಘೋರಾ ಪೋಸ್ಟ್ ಬಳಿಯ ಕಮರಿಗೆ ಬಿದ್ದಿದೆ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.



ಶ್ರೀ ಧರ್ಮಸ್ಥಳಕ್ಕೆ ಬಂದು ಆಣೆ–ಪ್ರಮಾಣ ಮಾಡಲಿ

ನಾನೂ ಕುಟುಂಬ ಸಮೇತ ಬರ್ತೀನಿ: ಲಕ್ಷ್ಮಿ ಹೆಬ್ಬಾಳ್ಕರ್

ಬೆಂಗಳೂರು, ಡಿ.24– ಬಿಜೆಪಿ ನಾಯಕ ಸಿ.ಟಿ.ರವಿಯವರು ನನ್ನ ಬಗ್ಗೆ ಅವಾಚ್ಯ ಶಬ್ದ ಬಳಸಿಲ್ಲವೆಂದಾದರೆ ಧರ್ಮಸ್ಥಳಕ್ಕೆ ಬಂದು ಆಣೆ ಪ್ರಮಾಣ ಮಾಡಲಿ ನೋಡೋಣ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸವಾಲು ಹಾಕಿದ್ದಾರೆ.

ಮಾಧ್ಯಮಗಳಿಗೆ ನೀಡಿದ ಸಂದರ್ಶನ ವೇಳೆ ಮಾತನಾಡಿದ ಅವರು, ರಾಮಾಯಣ, ಮಹಾಭಾರತ ಆಗಿದ್ದು, ಮಹಿಳೆಯನ್ನು ಅಪಮಾನ ಮಾಡಿದ್ದಕ್ಕೆ ಅಲ್ಲಿ ಅಪಮಾನ ಮಾಡಿದ ಎಲ್ಲರಿಗೂ ಶಿಕ್ಷೆ ಆಗಿದೆ. ಇಲ್ಲಿಯೂ ಆಗುತ್ತೆ. ಸಿ.ಟಿ ರವಿ ಅವರು ಆ ರೀತಿ ಹೇಳಿಲ್ಲ ಅನ್ನೋದಾದ್ರೆ, ಧರ್ಮಸ್ಥಳಕ್ಕೆ ಬಂದು ಆಣೆ, ಪ್ರಮಾಣ ಮಾಡಲಿ. ಆಣೆ ಮಾಡಲಿಕ್ಕೆ ನಾನೂ ನನ್ನ ಕುಟುಂಬ ಸಮೇತವಾಗಿ ಬರ್ತೀನಿ ಎಂದರು.

ಡಿ.19ರಂದು ಬೆಳಗಾವಿ ಸುವರ್ಣಸೌಧದ ಪರಿಷತ್ ಕಲಾಪದಲ್ಲಿ ಎಂಎಲ್‌ಸಿ ಸಿ.ಟಿ ರವಿ ಅವರು ಅಸಂವಿಧಾನಿಕ ಪದ ಬಳಸಿ ನಿಂದಿಸಿದ್ದಾರೆ ಎಂದು ನಾನು ನಾಟಕ ಮಾಡೋದಕ್ಕೆ ಆಗುತ್ತಾ. ಸದನದಲ್ಲಿ ನಿಂತು ಸುಳ್ಳು ಆರೋಪ ಮಾಡೋದಕ್ಕೆ ಆಗುತ್ತಾ. ಸುಳ್ಳು ಹೇಳೋದಕ್ಕೆ ನನಗೇನು ಹುಚ್ಚಾ. ನಾಟಕವಾಡಿ ರಾಜಕಾರಣದಲ್ಲಿ ನಾನು ಏನಾದ್ರೂ ಗಳಿಸೋದು ಇದ್ಯಾ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಪ್ರಶ್ನಿಸಿದರು. ಫ್ರಸ್ಟ್ರೇಟ್ (Frustrate) ಎಂದು ಉಚ್ಚಾರ ಮಾಡಿರುವುದಾಗಿ ಸಿ.ಟಿ.ರವಿ ಹೇಳುತ್ತಾರೆ ಎಂಬ ಪ್ರಶ್ನೆಗೆ, ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಫ್ರಸ್ಟ್ರೇಟ್ ಅನ್ನೋದಕ್ಕೂ ಆ ಪದಕ್ಕೂ ವ್ಯತ್ಯಾಸ ಇರಲ್ವಾ ಅವರು ಹೇಳಿರೋದಕ್ಕೆ ಆಡಿಯೋ, ವಿಡಿಯೋ ಎಲ್ಲವೂ

■ 6ನೇ ಪುಟಕ್ಕೆ



ಕಲೆಕ್ಷನ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ

ಮೈಸೂರು ಜಿಲ್ಲಾ ಹಾಗೂ ನಗರ ಪ್ರದೇಶಗಳಾದ ರಾಜೀವನಗರ, ಉದಯಗಿರಿ, ಶಾಂತಿನಗರ ಮತ್ತು ರಾಜೇಂದ್ರನಗರ ಸುತ್ತಮುತ್ತಲ ಪ್ರದೇಶಗಳಗೂ ಹಾಗೂ ಮಂಡ್ಯ, ಚಾಮರಾಜನಗರ ಜಿಲ್ಲಾದ್ಯಂತ ದ್ವಿಚಕ್ರ ವಾಹನ ಸಾಲ ವಸೂಲಾತಿ ಕೆಲಸ ಮಾಡಲು ಕಮಿಷನ್ ಆಧಾರದ ಮೇಲೆ ಅನುಭವವುಳ್ಳ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂದರ್ಶನಕ್ಕಾಗಿ ಸಂಪರ್ಕಿಸಿ

6364891413

M. Srinivas International Public School
Hanakere, Mandya - 571404.

WE ARE HIRING TEACHERS !
From Kindergarten to 10th Standard

Mother Teacher
Any Degree with D.Ed / B.Ed

Kannada Teacher
MA & B.Ed.,

Hindi Teacher
BA, MA & Hindi B.Ed.,

Class Teacher: Any Degree / N.S.T

HOSTEL FACILITIES AVAILABLE
98450 41912 / 72042 41020 / 63644 58508
E-mail: msinternationalpublicschool2@gmail.com

ಮೈಸೂರಲ್ಲಿ ಸಡಗರ, ಭಕ್ತಿಭಾವದ ಕ್ರಿಸ್‌ಮಸ್ ಆಚರಣೆ

ವಿಶೇಷ ಪ್ರಾರ್ಥನೆ; ಶುಭಾಶಯ ವಿನಿಮಯ

ಮೈಸೂರು, ಡಿ.24(ಆರ್‌ಕೆ, ಎಸ್‌ಪಿಎನ್)–ಯೇಸು ಕ್ರಿಸ್ತನ ಜನ್ಮದಿನದ ಹಿನ್ನೆಲೆಯಲ್ಲಿ ವಿಶ್ವದೆಲ್ಲೆಡೆ ಕ್ರಿಸ್‌ಮಸ್ ಹಬ್ಬವನ್ನು ಆಚರಿಸಲಾಗುತ್ತಿದ್ದು, ಮೈಸೂರು ನಗರದಲ್ಲೂ ಸಂಭ್ರಮ ಮನೆಮಾಡಿದೆ.

ಮೈಸೂರಿನ ಲಷ್ಕರ್ ಮೊಹಲ್ಲಾದ ಅಶೋಕ ರಸ್ತೆಯಲ್ಲಿರುವ ಸಂತ ಫಿಲೋಮಿನಾ ಚರ್ಚ್ ಸೇರಿದಂತೆ ನಗರದ ವಿವಿಧ ಚರ್ಚ್‌ಗಳಲ್ಲಿ ಮಂಗಳವಾರ ರಾತ್ರಿಯಿಂದಲೇ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ವಿದ್ಯುತ್ ದೀಪಾಲಂಕಾರದಲ್ಲಿ ಕಂಗೊಳಿಸುತ್ತಿದ್ದ ಸಂತ ಫಿಲೋಮಿನಾ ಚರ್ಚ್‌ನಲ್ಲಿ ನಿವೃತ್ತ ಮಹಾಧರ್ಮಾಧ್ಯಕ್ಷರೂ ಆದ ಮೈಸೂರು ಧರ್ಮ ಕ್ಷೇತ್ರದ ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾರ್ಡ್ ಮೊರಾಸ್ ನೇತೃತ್ವದಲ್ಲಿ ಪೂಜಾ ವಿಧಿವಿಧಾನಗಳು ಜರುಗಿದ ನಂತರ ಮಧ್ಯರಾತ್ರಿ 12ಕ್ಕೆ ಬಲಿಪೂಜೆ ನಡೆಯಿತು. ಈ ವೇಳೆ ಚರ್ಚ್‌ನಲ್ಲಿ ಯೇಸುಕ್ರಿಸ್ತನ ಸ್ಮರಿಸುವ ಗೀತೆಗಳೊಂದಿಗೆ ಭಕ್ತರು ಪ್ರಾರ್ಥನೆ ಸಲ್ಲಿಸಿದರು. ಬಳಿಕ ಡಾ.ಬರ್ನಾರ್ಡ್ ಮೊರಾಸ್ ನೇತೃತ್ವದಲ್ಲಿ ಚರ್ಚ್‌ನ



ನಿವೃತ್ತ ಮಹಾಧರ್ಮಾಧ್ಯಕ್ಷರೂ ಆದ ಮೈಸೂರು ಧರ್ಮ ಕ್ಷೇತ್ರದ ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾರ್ಡ್ ಮೊರಾಸ್ ಅವರು ಸಂತ ಫಿಲೋಮಿನಾ ಚರ್ಚ್ ಆವರಣದಲ್ಲಿನ ಗೋದಲಿಗೆ ಬಾಲ ಯೇಸುವಿನ ವಿಗ್ರಹ ಪ್ರತಿಷ್ಠಾಪಿಸಲು ತೆರಳುತ್ತಿರುವುದು.

ಹೊರಾವರಣದಲ್ಲಿ ನಿರ್ಮಿಸಿರುವ ವಿಶಿಷ್ಟ ಗೋದಲಿಯಲ್ಲಿ ಬಾಲ ಯೇಸುವಿನ ವಿಗ್ರಹವನ್ನು ಪ್ರತಿಷ್ಠಾಪಿಸಲಾಯಿತು. ಈ ವೇಳೆ ದೀಪ ಬೆಳಗುವ ಮೂಲಕ ಪೂಜೆ ಸಲ್ಲಿಸಿ, ಕ್ರಿಸ್‌ಮಸ್ ವಿಶೇಷ ಸಂದೇಶವನ್ನು ನೀಡಿದರು. ಚರ್ಚ್‌ನ ಪ್ರಧಾನ ಧರ್ಮಗುರು ರೆವ್ ಫಾ.ಸ್ಟಾನಿ ಡಿ'ಅಲ್ಮೇಡಾ ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.

ಬೃಹತ್ ಪ್ರತಿಬಿಂಬ: ಕ್ರಿಸ್‌ಮಸ್ ಅಂಗವಾಗಿ ಸೇಂಟ್ ಫಿಲೋಮಿನಾ ಚರ್ಚ್ ಆವರಣದಲ್ಲಿ ಕಲಾವಿದರಾದ ಪುನೀತ್, ಲಕ್ಷ್ಮೀಚಂದನ್, ಸಂಪ್ರೀತ್ ಚಂದನ್, ಆದಿತ್ಯ, ರಾಘವೇಂದ್ರ ಆರ್. ಅರಳಿಕಟ್ಟಿ, ಪುನೀತ್ ರಾಯಣ್ಣ ಮತ್ತು ತಂಡದವರಿಂದ 80x40 ಅಡಿ (4160 ಚದರಡಿ) ವಿಸ್ತಾರದ ಬಣ್ಣಬಣ್ಣದ ರಂಗೋಲಿಯಿಂದ ಯೇಸು ಕ್ರಿಸ್ತರ ಬೃಹತ್ ಪ್ರತಿಬಿಂಬ ಸೃಷ್ಟಿಸಲಾಗಿದೆ.

■ 6ನೇ ಪುಟಕ್ಕೆ


ಸ್ಕೂಟರ್‌ಗೆ ಕಂಟೇನರ್ ಡಿಕ್ಕಿ; ಮದುವೆಗೆ ಹೋಗುತ್ತಿದ್ದ ದಂಪತಿ ಸಾವು

ಮಡಿಕೇರಿ, ಡಿ.24–ಸಂಬಂಧಿಕರ ಮದುವೆ ಕಾರ್ಯಕ್ರಮಕ್ಕೆ ಸ್ಕೂಟರ್‌ನಲ್ಲಿ ಹೋಗುತ್ತಿದ್ದ ದಂಪತಿಗೆ ಕಂಟೇನರ್ ಡಿಕ್ಕಿ ಹೊಡೆದ ಪರಿಣಾಮ ಅವರು ದುರ್ಮರಣಕ್ಕೀಡಾಗಿದ್ದಾರೆ. ಈ ದುರಂತ ಕೊಯನಾಡು ಬಳಿ ಮಂಗಳವಾರ ನಡೆದಿದೆ.

ಸಿದ್ದಾಪುರ ಸಮೀಪದ ನೆಲ್ಲಿಹುದಿಕೇರಿ ನಿವಾಸಿ ಎಂ.ಚಿದಾನಂದ ಆಚಾರ್ಯ (46) ಮತ್ತು ಅವರ ಪತ್ನಿ ನಳಿನಿ(40) ಮೃತಪಟ್ಟ ದಂಪತಿ. ಕಂಟೇನರ್ ಚಾಲಕ ಅಸ್ಸಾಂ ಮೂಲದ ರಾಜುವನ್ನು ಪೊಲೀಸರು ಬಂಧಿಸಿದ್ದಾರೆ. ದಂಪತಿ ಮದುವೆ ಕಾರ್ಯಕ್ಕೆ ಮಡಿಕೇರಿಯಿಂದ ಪುತ್ತೂರು ಕಡೆಗೆ ಸ್ಕೂಟರ್‌ನಲ್ಲಿ ಹೋಗುತ್ತಿದ್ದರು. ಈ ವೇಳೆ ಸುಳ್ಯದಿಂದ ಸಂಪಾಜೆ ಕಡೆಗೆ ಬರುತ್ತಿದ್ದ ಕಂಟೇನರ್ ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಕೊಯನಾಡು ಚೆಡಾವು ಬಳಿಯ ತಿರುವಿನಲ್ಲಿ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಪತಿ ಎಂ.ಚಿದಾನಂದ ಆಚಾರ್ಯ ಸ್ಥಳದಲ್ಲೇ ಮೃತಪಟ್ಟಿದ್ದು, ಗಂಭೀರವಾಗಿ ಗಾಯಗೊಂಡಿದ್ದ ಪತ್ನಿ ನಳಿನಿ ಸುಳ್ಯ ಖಾಸಗಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ಸ್ಕೂಟರ್ ಸಂಪೂರ್ಣ ಪುಡಿ ಪುಡಿಯಾಗಿದ್ದು, ಸ್ಥಳಕ್ಕೆ ಸಂಪಾಜೆ ಉಪಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಈ ಸಂಬಂಧ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಂಟೇನರ್ ಡಿಕ್ಕಿ ಹೊಡೆದು ಸ್ಕೂಟರ್ ಪುಡಿ ಪುಡಿಯಾಗಿರುವುದು.



ಮುಡಾ ನಿವೇಶನ ಹಂಚಿಕೆ ಹಗರಣ

ಜ.30ಕ್ಕೆ ಅಂತಿಮ ವರದಿ ಸಲ್ಲಿಸಲು ಜನಪ್ರತಿನಿಧಿಗಳ ನ್ಯಾಯಾಲಯ ಸೂಚನೆ

ಬೆಂಗಳೂರು, ಡಿ.24(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಲೋಕಾಯುಕ್ತ ತನಿಖೆಯ ಅಂತಿಮ ವರದಿಯನ್ನು ಜನವರಿ 30, 2025 ರಂದು ಸಲ್ಲಿಸುವಂತೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸೂಚನೆ ನೀಡಿದೆ.

ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣದ ಬಗ್ಗೆ ತನಿಖೆ ನಡೆಸಿ ಡಿ.24ರಂದು ಅಂತಿಮ ವರದಿ ಸಲ್ಲಿಸುವಂತೆ ಜನಪ್ರತಿನಿಧಿಗಳ ನ್ಯಾಯಾಲಯ ಕಳೆದ ಮೂರು ತಿಂಗಳ ಹಿಂದೆ ಮೈಸೂರು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರಿಗೆ ನಿರ್ದೇಶನ ನೀಡಿತ್ತು.

ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ನೇತೃತ್ವದ ತಂಡ ಕಳೆದ ಮೂರು ತಿಂಗಳಿಂದ ತನಿಖೆ ನಡೆಸುತ್ತಿದ್ದು, ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಬಾಮೈದ ಮಲ್ಲಿಕಾರ್ಜುನ ಸ್ವಾಮಿ, ಭೂಮಿ ಮಾಲೀಕ ದೇವರಾಜು ಸೇರಿದಂತೆ ಮುಡಾ ಆಯುಕ್ತರು, ಅಧಿಕಾರಿಗಳು ಹಾಗೂ ನಿವೃತ್ತ ಅಧಿಕಾರಿಗಳನ್ನು ವಿಚಾರಣೆ ಮಾಡಿದೆ.

ಇಂದು ಲೋಕಾಯುಕ್ತ ಎಸ್ಪಿ ಟಿ.ಜೆ. ಉದೇಶ್, ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಹಾಜರಾದರು. ಈ ಸಂದರ್ಭದಲ್ಲಿ ದೂರುದಾರ ಸ್ನೇಹಮಯಿ ಕೃಷ್ಣ ಪರ ವಕೀಲ ವಸಂತ್‌ಕುಮಾರ್ ಅವರು, ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣವನ್ನು ಸಿಬಿಐಗೆ ವಹಿಸುವ ಸಂಬಂಧ ನ್ಯಾಯಮೂರ್ತಿ ನಾಗಪ್ರಸನ್ನ ಅವರಿರುವ

■ 6ನೇ ಪುಟಕ್ಕೆ

IndusInd Bank
BHARAT FINANCIAL INCLUSION LIMITED


ಉದ್ಯೋಗಾವಕಾಶ
(ನೇರ ಸಂದರ್ಶನ ನಡೆಸಲಾಗುತ್ತದೆ.)

ವಿದ್ಯಾರ್ಹತೆ : SSLC/PUC/Any ಡಿಗ್ರಿ.
ವಯೋಮಿತಿ 18 - 32 ವರ್ಷಗಳು (ಪುರುಷ ಅಭ್ಯರ್ಥಿಗಳು ಮಾತ್ರ)

ವೇತನ ಮತ್ತು ಪ್ರೋತ್ಸಾಹಧನ ತರಬೇತಿ ನಂತರ ತಿಂಗಳಿಗೆ 18,000/– ರಿಂದ 36000/– ರೂ.	OTHER BENEFITS ಇ.ಎಸ್.ಐ / ಪಿ.ಎಫ್, ಗ್ರಾಚ್ಯುಟಿ, ಇನ್ಸೂರೆನ್ಸ್, ಟ್ರಾವೆಲ್ ಚಾರ್ಜ್, ಮೆಡಿಕ್ಲೈಮ್ ಮತ್ತು ರೂಮ್ ವ್ಯವಸ್ಥೆ ಇರುತ್ತದೆ

ದಾಖಲಾತಿಗಳು: ಆಧಾರ್, ಪಾನ್‌ಕಾರ್ಡ್, ಡಿ.ಎಲ್, (DL) ಅಥವಾ ಎಲ್.ಎಲ್.ಆರ್.(LLR)

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಕಿರಣ್ ಮೊ: 9741577700 | ಮಧು ಮೊ: 9900067858
ರಾಘು ಮೊ: 9741307723 | ಪ್ರಸಾದ್ ಮೊ: 9008289402



ಡಾ.ಅಂಬೇಡ್ಕರ್ ಹೆಸರೇಳುವ ನೈತಿಕತೆ ಕಾಂಗ್ರೆಸ್‌ಗೆ ಇಲ್ಲವೇ ಇಲ್ಲ

ರಾಜ್ಯ ಬಿಜೆಪಿ ಸಹ ಉಸ್ತುವಾರಿ ಡಾ.ಸುಧಾಕರ ರೆಡ್ಡಿ ವಾಗ್ದಾಳಿ



ಸುಧಾಕರ ರೆಡ್ಡಿ

ಬೆಂಗಳೂರು,ಡಿ.24(ಕೆಎಂಶಿ)–ಕಾಂಗ್ರೆಸ್ ಸರ್ಕಾರ ಪಂಚ ಗ್ಯಾರಂಟಿಗಳನ್ನು ಸರಿಯಾಗಿ ಜಾರಿಗೊಳಿಸದೆ, ಅಧಿಕೃತ ಮತ್ತು ಅನಧಿಕೃತ ತೆರಿಗೆ ಹೇರುತ್ತಿದೆ ಎಂದು ರಾಜ್ಯ ಬಿಜೆಪಿ ಸಹ ಉಸ್ತುವಾರಿ ಡಾ.ಪಿ. ಸುಧಾಕರ ರೆಡ್ಡಿ ಟೀಕಿಸಿದ್ದಾರೆ.

ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರನ್ನು ನಿರಂತರವಾಗಿ ಅಪಮಾನ ಮಾಡಿದ ಕಾಂಗ್ರೆಸ್ಸಿಗರಿಗೆ ಅವರ ಹೆಸರು ಹೇಳುವ ನೈತಿಕ ಹಕ್ಕೇ ಇಲ್ಲ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಾ.ಅಂಬೇಡ್ಕರ್ ಅವರನ್ನು ಲೋಕಸಭಾ ಚುನಾವಣೆಯಲ್ಲಿ 2 ಬಾರಿ ಸೋಲಿಸಿ ಅವಮಾನಿಸಿದ್ದ ಕಾಂಗ್ರೆಸ್ ಪಕ್ಷ ಇದೀಗ ತಮ್ಮ ನಾಯಕರನ್ನು ಉಳಿಸಿಕೊಳ್ಳಲು ಬಾಬಾಸಾಹೇಬರ ಹೆಸರು ಬಳಸಿಕೊಳ್ಳುತ್ತಿದೆ ಎಂದರು.

ಸಂವಿಧಾನ ಶಿಲ್ಪಿ ಅಂಬೇಡ್ಕರ್ ದೇಶ ವಿಭಜನೆ ಹಾಗೂ 370ನೇ ವಿಧಿ ಹೇರುವುದನ್ನೂ ವಿರೋಧಿಸಿದ್ದರು. ತುರ್ತು ಪರಿಸ್ಥಿತಿ ಹೇರಿದ್ದ ಕಾಂಗ್ರೆಸ್ ದೇಶವನ್ನೇ ಜೈಲಾಗಿ ಪರಿವರ್ತಿಸಿತ್ತು, ಈಗ ಆ ಪಕ್ಷದ ಮುಖಂಡರು ಮತಬ್ಯಾಂಕ್ ರಾಜಕಾರಣ ಮಾಡುತ್ತಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಮೇಲೆ ಕೆಸರೆರಚುವ ಕಾರ್ಯವನ್ನು ಕಾಂಗ್ರೆಸ್ ಮಾಡುತ್ತಿದೆ. ದೇಶದ ಜನತೆ ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಮೇಲೆ ವಿಶ್ವಾಸ ಹೊಂದಿದ್ದಾರೆ.

ಜನರಿಗೆ ಕಾಂಗ್ರೆಸ್ಸಿಗರ ನೈಜ ಬಣ್ಣ ತಿಳಿದಿದೆ, ಅವರ ತಪ್ಪು ನೀತಿಗಳನ್ನು ಅಮಿತ್ ಶಾ ಜನರ ಮುಂದೆ ಅನಾವರಣಗೊಳಿಸಿದ್ದಾರೆ. ಮೋದಿ ಅವರು ಸ್ವಾವಲಂಬಿ, ಆತ್ಮನಿರ್ಭರ ಭಾರತ ಮಾಡುವಲ್ಲಿ ನಿರಂತರ ಶ್ರಮಿಸುತ್ತಿದ್ದಾರೆ. ಬಡ ಕುಟುಂಬದಿಂದ ಬಂದ ವ್ಯಕ್ತಿ 10 ವರ್ಷಕ್ಕೂ ಹೆಚ್ಚು ಕಾಲದಿಂದ ಪ್ರಧಾನಿ ಆಗಿರುವುದನ್ನು ಕಾಂಗ್ರೆಸ್ಸಿಗರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ, ಯುಪಿಎ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರನ್ನು ರಾಹುಲ್ ಗಾಂಧಿ ಅವಮಾನಿಸಿದ್ದರು. ಮಾಜಿ ಸಚಿವ ಜನಾರ್ದನ ರೆಡ್ಡಿ ಮಾತನಾಡಿ, ಡಾ.ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಪಕ್ಷ ಅವಮಾನ ಮಾಡಿ ಅಗೌರವದಿಂದ ನಡೆಸಿಕೊಂಡಿದ್ದು, ಇಂದು ಅವರ ಜಪ ಮಾಡುತ್ತಿದೆ ಎಂಬುದನ್ನು ಸಂಸತ್ತಿನಲ್ಲಿ ಅಮಿತ್ ಶಾ ತಿಳಿಸಿ ಟೀಕಿಸಿದ್ದರು ಎಂದರು.

ಸಾಧಕರಿಗೆ ನಿವೇಶನ ವಿತರಿಸಲು ಮುಡಾ ಸಭೆಯಲ್ಲಿ ಪ್ರಸ್ತಾಪ ಮಂಡನೆ

ಮುಡಾ ಆಯುಕ್ತ ರಘುನಂದನ್ ಭರವಸೆ



ರಘುನಂದನ್

ಮೈಸೂರು, ಡಿ.24(ಬಿಎಲ್‌ಯು)– ಕ್ರೀಡೆಯೂ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಸಾಧಕರಿಗೆ ನಿವೇಶನ ನೀಡುವ ಸಂಬಂಧ ಮುಂದಿನ ಮುಡಾ ಸಭೆಯಲ್ಲಿ ಪ್ರಸ್ತಾಪ ಮಂಡಿಸಿ ಅನುಮೋದನೆ ಪಡೆಯಲಾಗುವುದು ಎಂದು ಮುಡಾ ಆಯುಕ್ತ ರಘುನಂದನ್ ಭರವಸೆ ನೀಡಿದರು.


ಸಾಧಕರ ಕೋಟಾದಲ್ಲಿ ನಿವೇಶನ ಹಂಚಿಕೆಗೆ ಮುಡಾ ಅರ್ಜಿ ಆಹ್ವಾನಿಸಿತ್ತು. ಈ ಸಂದರ್ಭದಲ್ಲಿ 488 ಅರ್ಜಿ ಸಲ್ಲಿಕೆಯಾಗಿತ್ತು. ಇದರಲ್ಲಿ 188 ಅರ್ಜಿ ಕ್ರಮಬದ್ಧವಾಗಿತ್ತು. ಇವರಿಗೆ ಮೈಸೂರಿನ ದೇವನೂರು ಬಡಾವಣೆ 3ನೇ ಹಂತದಲ್ಲಿ ನಿವೇಶನ ಹಂಚಿಕೆಗೆ ಮುಂಗಡ ಹಣ ಕೂಡ ಪಡೆಯಲಾಗಿತ್ತು.

ಆದರೆ ಹಣ ಪಾವತಿ ಮಾಡಿ 22 ತಿಂಗಳಾದರೂ ನಿವೇಶನ ವಿತರಣೆ ಮಾಡಿಲ್ಲ. ಈ ಸಂಬಂಧ ಚೆಸ್ ತರಬೇತುದಾರ ಎಂ.ಪಿ.ಅಜಿತ್ ಸೇರಿದಂತೆ ಹಲವು ಕ್ರೀಡಾಪಟುಗಳು ಅಸಮಾಧಾನ ವ್ಯಕ್ತಪಡಿಸಿದ್ದರು.

ಈ ಸಂಬಂಧ ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮುಡಾ ಆಯುಕ್ತ ರಘುನಂದನ್, ಸಾಧಕರು ಅರ್ಜಿ ಸಲ್ಲಿಸಿರುವ ವಿಚಾರ ನನ್ನ ಗಮನಕ್ಕೆ ಬಂದಿರಲಿಲ್ಲ. ಈಗ ಈ ಬಗ್ಗೆ ಮಾಹಿತಿ ಪಡೆದಿದ್ದೇನೆ ಎಂದರು.

ಮುಂದಿನ ಮುಡಾ ಸಭೆಯಲ್ಲಿ ಈ ವಿಚಾರವನ್ನು ಮಂಡಿಸಿ ಅನುಮೋದನೆ ಪಡೆಯಲಾಗುವುದು. ತರುವಾಯ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ರಘುನಂದನ್ ಸ್ಪಷ್ಟಪಡಿಸಿದರು.

ಶ್ರೀ ಮಹಾಲಕ್ಷ್ಮಿ ಸ್ವೀಟ್ಸ್‌ಗೆ 'ಟ್ರೆಂಡ್‌ಸೆಟ್ಟರ್ ಆಫ್ ದಿ ಇಂಡಸ್ಟ್ರಿ' ಪ್ರಶಸ್ತಿ



ಡಿ.18ರಂದು ದೆಹಲಿಯ ದ್ವಾರಕದ ಯಶೋಭೂಮಿ–ಇಂಡಿಯಾ ಇಂಟರ್ ನ್ಯಾಷನಲ್ ಕನ್ವೆನ್ಷನ್ ಮತ್ತು ಎಕ್ಸ್‌ಪೋ ಸೆಂಟರ್‌ನಲ್ಲಿ ನಡೆದ 7ನೇ ವರ್ಲ್ಡ್ ಮಿಠಾಲ್ ಅಂಡ್ ನಮ್‌ಕೀನ್ ಕನ್ವೆನ್ಷನ್ ಅಂಡ್ ಎಕ್ಸ್‌ಪೋ–2024ರಲ್ಲಿ ಶ್ರೀ ಮಹಾಲಕ್ಷ್ಮಿ ಸ್ವೀಟ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ನಿತಿನ್ ಶಿವಕುಮಾರ್ (ಎಡಗಡೆ) 'ಟ್ರೆಂಡ್‌ಸೆಟ್ಟರ್ ಆಫ್ ದಿ ಇಂಡಸ್ಟ್ರಿ' ಪ್ರಶಸ್ತಿಯನ್ನು ಸ್ವೀಕರಿಸಿದರು. ಮಹಾಲಕ್ಷ್ಮೀ ಸ್ವೀಟ್ಸ್ ಸಂಸ್ಥೆಯ ಸಮರ್ಥ ನಾಯಕತ್ವ, ದೃಢ ಸಮರ್ಪಣೆ, ಮಿಠಾಲ್ ಮತ್ತು ನಮ್‌ಕೀನ್ ಉದ್ಯಮದಲ್ಲಿನ ಉತ್ಕೃಷ್ಟತೆ ಜೊತೆಗೆ ನಾವೀನ್ಯತೆ, ಬೆಳವಣಿಗೆಯ ಹೊಸ ಮಾನದಂಡ ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಯಿತು.

ನಾಳೆಯಿಂದ ಮೂರು ದಿನ ಡಾ.ರಾಜ್, ವಿಷ್ಣು, ಶಂಕರ್ ಸ್ಮರಣೆ; ಕುವೆಂಪುಗೆ ನುಡಿ ನಮನ

ಈ ಮೂರು ದಿನ ಸಂಗೀತ ಕಾರ್ಯಕ್ರಮ



ಮೈಸೂರು,ಡಿ.24(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಡಿ.26 ರಿಂದ 28ರವರೆಗೆ ಡಾ.ರಾಜ್, ವಿಷ್ಣು ಸ್ಮರಣೆ, ಕುವೆಂಪು ಅವರಿಗೆ ನುಡಿ ನಮನ ಹಾಗೂ ಶಂಕರ್ ನೆನಪಿನೊಂದಿಗೆ ಚಲನ ಚಿತ್ರಗೀತೆ, ಸುಗಮ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವಿದ್ಯುಲ್ಲಹರಿ ಸಂಸ್ಥೆಯ ವ್ಯವಸ್ಥಾಪಕ ಡಾ.ಎ.ಡಿ. ಶ್ರೀನಿವಾಸನ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಾನ–ನಂದನ ಸಂಸ್ಥೆ, ಕರ್ನಾಟಕ ಸುಗಮ ಸಂಗೀತ ಪರಿಷತ್ ಮೈಸೂರು ಘಟಕ ಹಾಗೂ ವಿದ್ಯುಲ್ಲಹರಿ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಮೂರು ದಿನಗಳ ಗೀತಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ. ಮೂರು ದಿನ ಪ್ರತ್ಯೇಕ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.

ವಿದ್ಯುಲ್ಲಹರಿ ಸಂಸ್ಥೆ ವತಿಯಿಂದ ಡಿ.26ರಂದು ಸಂಜೆ 5ಕ್ಕೆ ಡಾ.ರಾಜ್ ಮತ್ತು ಡಾ.ವಿಷ್ಣುವರ್ಧನ್ ಅವರ ಚಲನ ಚಿತ್ರಗೀತೆಗಳ ಗೀತೋತ್ಸವ ಜರುಗಲಿದೆ ಎಂದು ತಿಳಿಸಿದರು.

ಗಾನ–ನಂದನ ಸಂಸ್ಥೆಯ ಅಧ್ಯಕ್ಷ ಎನ್.ಬೆಟ್ಟೇಗೌಡ ಮಾತನಾಡಿ, ಗಾನ–ನಂದನ ಸಂಸ್ಥೆ ವತಿಯಿಂದ ಡಿ.27ರ ಸಂಜೆ 4.30ಕ್ಕೆ ಶಂಕರ್ ನೆನಪು–ಶಂಕರ್‌ನಾಗ್ ಚಲನಚಿತ್ರ ಗೀತೆಗಳ ಗೀತೋತ್ಸವ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಶಂಕರ್‌ನಾಗ್ ಅಭಿನಯಿಸಿರುವ ಪ್ರಸಿದ್ಧ ಗೀತೆಗಳ ಗಾಯನ ನಡೆಯಲಿದೆ ಎಂದರು.

ಕರ್ನಾಟಕ ಸುಗಮ ಸಂಗೀತ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ನಾಗರಾಜು ವಿ.ಬೈರಿ ಮಾತನಾಡಿ, ಕರ್ನಾಟಕ ಸುಗಮ ಸಂಗೀತ ಪರಿಷತ್ ಮೈಸೂರು ಘಟಕದ ವತಿಯಿಂದ ಡಿ.28ರಂದು ಸಂಜೆ 5ಕ್ಕೆ ರಾಷ್ಟ್ರಕವಿ ಕುವೆಂಪು ಹಾಗೂ ಡಾ.ಸಿ. ಅಶ್ವಥ್ ಅವರ ಜನ್ಮದಿನ ಪ್ರಯುಕ್ತ ಗೀತ ನಮನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಈ ಮೂರೂ ದಿನಗಳ ಮ್ಯಾರಥಾನ್ ಕಾರ್ಯಕ್ರಮಕ್ಕೆ ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸಿರಿಬಾಲು, ಎಂ.ಡಿ.ಪಾರ್ಥ ಸಾರಥಿ ಹಾಗೂ ಇನ್ನಿತರರು ಇದ್ದರು.

ವ್ಯಸನಗಳಿಗೆ ಒಳಗಾಗಿ ಜೀವನ ಹಾಳು ಮಾಡಿಕೊಳ್ಳಬೇಡಿ

ಅಭಿವಿನ್ಯಾಸ ಕಾರ್ಯಕ್ರಮ ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಕಿವಿಮಾತು

- ಸೋಷಿಯಲ್ ಮೀಡಿಯಾದಿಂದ ಅನಾನುಕೂಲತೆಯೇ ಹೆಚ್ಚು
- ಪ್ರತಿದಿನ 500 ದೂರು ದಾಖಲು
- ದಿನಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಳ್ಳಿ
- ಒಳ್ಳೆಯ ಗುರಿ ಇದ್ದರೆ, ಉತ್ತಮ ಭವಿಷ್ಯ ಸಾಧ್ಯ

ಮೈಸೂರು, ಡಿ.24(ಬಿಎಲ್‌ಯು)– ವಿದ್ಯಾರ್ಥಿಗಳು ಯಾವುದೇ ಚಟ ಅಥವಾ ವ್ಯಸನಗಳಿಗೆ ಒಳಗಾಗಿ ಜೀವನ ಹಾಳು ಮಾಡಿಕೊಳ್ಳಬಾರದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಕಿವಿಮಾತು ಹೇಳಿದ್ದಾರೆ.

ನಗರದ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಇಂದು ಮೈಸೂರು ವಿಶ್ವವಿದ್ಯಾನಿಲಯದ ಪ್ರಥಮ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಭಿವಿನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸ್ನಾತಕೋತ್ತರ ಪದವಿಗಾಗಿ ಬೇರೆ ಬೇರೆ ಊರುಗಳಿಂದ ಇಲ್ಲಿಗೆ ಬಂದಿರುತ್ತೀರಾ. ತಂದೆ–ತಾಯಿ ಜೊತೆಯಲ್ಲಿ ಇಲ್ಲದ ಕಾರಣ ಸ್ವೇಚ್ಛೆ ಇರುತ್ತದೆ. ಈ ಸಂದರ್ಭದಲ್ಲಿ ವ್ಯಸನಗಳಿಗೆ ಒಳಗಾಗಿ ಜೀವನ ಹಾಳು ಮಾಡಿಕೊಳ್ಳಬೇಡಿ ಎಂದು ಸಲಹೆ ನೀಡಿದರು.

ಹಲವರ ಪಾಲಿಗೆ ಸ್ನಾತಕೋತ್ತರ ಪದವಿ ಪಡೆಯುವುದು ಜೀವನದ ಪ್ರಥಮ ಸ್ವಾತಂತ್ರ್ಯವಾಗಿರುತ್ತದೆ. ಈ ಮೂಲಕ ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳುವ ಅವಕಾಶ ಇರುತ್ತದೆ. ಇಲ್ಲಿ ನಿಮ್ಮ ಭವಿಷ್ಯ ನಿರ್ಧಾರವಾಗಲಿದ್ದು, ಹೇಗೆ ಬದುಕಬೇಕು ಎಂದು ಅರಿವಾಗುತ್ತದೆ ಎಂದು ಲಕ್ಷ್ಮಿಕಾಂತ ರೆಡ್ಡಿ ಹೇಳಿದರು.

ಈ ವೇಳೆ ಮಾತನಾಡಿದ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ವಿದ್ಯಾರ್ಥಿ ಜೀವನ ನಿಮ್ಮ ಪಾಲಿಗೆ ಸ್ವರ್ಣ ಯುಗ. ತಂದೆ ತಾಯಿ ತಮಗೆ ಎಷ್ಟೆ ಕಷ್ಟವಿದ್ದರೂ ಮೊಬೈಲ್ ಸೇರಿದಂತೆ ಹಲವು ಸೌಲಭ್ಯ ಕಲ್ಪಿಸಿರುತ್ತಾರೆ. ಆದರೆ ಇದನ್ನು ದುರುಪಯೋಗ ಮಾಡಿಕೊಳ್ಳಬೇಡಿ ಎಂದು ಸಲಹೆ ನೀಡಿದರು.



ಮೈಸೂರಿನ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಮಂಗಳವಾರ ಮೈಸೂರು ವಿಶ್ವವಿದ್ಯಾನಿಲಯದ ಪ್ರಥಮ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಅಭಿವಿನ್ಯಾಸ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಉದ್ಘಾಟಿಸಿದರು. ಚಿತ್ರದಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವೆ ವಿ.ಆರ್.ಶೈಲಜ ಇನ್ನಿತರರಿದ್ದಾರೆ.

ಸೋಷಿಯಲ್ ಮೀಡಿಯಾದಿಂದ ಅನಾನುಕೂಲತೆಗಳು ಹೆಚ್ಚಿರುತ್ತದೆ. ಸಾಮಾಜಿಕ ಜಾಲತಾಣದಿಂದ ವಂಚನೆ, ಅಪಪ್ರಚಾರ ಹಾಗೂ ದುರ್ಬಳಕೆ ಮಾಡಿಕೊಳ್ಳುವ ಬಗ್ಗೆ ದಿನಕ್ಕೆ ಕನಿಷ್ಠ 500 ದೂರುಗಳು ಪೊಲೀಸ್ ಠಾಣೆಯಲ್ಲಿ ದಾಖಲಾಗುತ್ತಿದೆ. ಅಪರಾಧ ಕೃತ್ಯ ಎಸಗುವವರು ಯುವ ಸಮೂಹವನ್ನು ಗುರಿಯಾಗಿಸಿಕೊಂಡಿರುತ್ತಾರೆ. ಆದ ಕಾರಣ ವಿದ್ಯಾರ್ಥಿಗಳು ಎಚ್ಚರಿಕೆಯಿಂದ ಇರಬೇಕು ಎಂದು ಹೇಳಿದರು.

ಓದಿನ ಸಂದರ್ಭದಲ್ಲಿ ಒಂದು ನಿಮಿಷ ಮಾತ್ರ ಫೇಸ್‌ಬುಕ್ ನೋಡಿ ತರುವಾಯ ಓದುತ್ತೇನೆ ಎಂಬ ನಿರ್ಧಾರ ಮಾಡಿಕೊಳ್ಳುತ್ತೀರಾ. ಆದರೆ ಒಂದು ನಿಮಿಷದ ಫೇಸ್‌ಬುಕ್ ವೀಕ್ಷಣೆ ಒಂದು ಗಂಟೆಯಾಗುತ್ತದೆ. ಇದರಿಂದ ಓದಿನ ನಿಮ್ಮ ಅಮೂಲ್ಯ ಸಮಯ ಹಾಳಾಗುತ್ತದೆ. ಆದ ಕಾರಣ ಓದುವುದು ಬಿಟ್ಟರೆ ಬೇರೆ ವಿಚಾರಗಳ ಬಗ್ಗೆ ಗಮನ ನೀಡಬಾರದು ಎಂದು ತಿಳಿಸಿದರು.

ನಾವು ವ್ಯಾಸಂಗ ಮಾಡುವಾಗ ತಂತ್ರಜ್ಞಾನ ಅಷ್ಟಾಗಿ ಅಭಿವೃದ್ಧಿಯಾಗಿರಲಿಲ್ಲ. ಆದರೆ ಈಗ ಚಾಟ್ ಜಿಟಿಪಿ ಸೇರಿದಂತೆ ಹಲವು ರೀತಿಯ ತಂತ್ರಜ್ಞಾನವಿದೆ. ಇದನ್ನು ಒಳ್ಳೆಯದಕ್ಕೆ ಬಳಸಿಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಿ ಎಂದು ಸೀಮಾ ಲಾಟ್ಕರ್ ಕಿವಿಮಾತು ಹೇಳಿದರು.

ಪ್ರತಿಯೊಬ್ಬ ವಿದ್ಯಾರ್ಥಿ ಶಿಸ್ತು ಮೈಗೂಡಿಸಿಕೊಳ್ಳಬೇಕು. ಶಿಸ್ತು ಇಲ್ಲದಿದ್ದರೆ ಓದು ಸೇರಿದಂತೆ ಎಲ್ಲಾ ವಿಚಾರಗಳು ನಗಣ್ಯವಾಗಲಿದೆ. ಪ್ರತಿ ದಿನ ಇಂತಿಷ್ಟು ಓದಿ ಮುಗಿಸುತ್ತೇನೆ ಎಂಬ ಗುರಿ ಹೊಂದಿರಬೇಕು. ಕೆಲವು ವಿಚಾರ ತಲೆಗೆ ಹತ್ತುವುದಿಲ್ಲ ಎಂದು ಬಿಡಬಾರದು. ಆಸಕ್ತಿಯಿಂದ ಓದಿದರೆ ಮನದಟ್ಟು ಮಾಡಿಕೊಳ್ಳಬಹುದು ಎಂದು ತಿಳಿಸಿದರು.

ಪ್ರತಿದಿನ ದಿನಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ನಿಮ್ಮಲ್ಲಿರುವ ದೌರ್ಬಲ್ಯ ಮತ್ತು ಸಾಮರ್ಥ್ಯ ಎರಡು ನಿಮಗೆ ತಿಳಿದಿರುತ್ತದೆ. ಇದರ ಆಧಾರದ ಮೇಲೆ ಬದುಕಿನಲ್ಲಿ ಒಳ್ಳೆಯ ಬದಲಾವಣೆ ತಂದುಕೊಳ್ಳಬೇಕು. ಓದುವ ರೀತಿಯಲ್ಲಿ ತೊಂದರೆ ಆಗುತ್ತಿದ್ದರೆ ಲೋಪದ ಮೂಲ ಹುಡುಕಿ ಅದನ್ನು ಸರಿಪಡಿಸಿಕೊಳ್ಳಬೇಕು ಎಂದು ಸೀಮಾ ಲಾಟ್ಕರ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಕುಲಸಚಿವೆ ವಿ.ಆರ್.ಶೈಲಜ, ಆಡಳಿತಾಧಿಕಾರಿ ಪ್ರೊ.ಎಸ್.ಟಿ.ರಾಮಚಂದ್ರ, ಹಣಕಾಸು ಅಧಿಕಾರಿ ರೇಖಾ, ಐಕ್ಯೂಎಸಿ ನಿರ್ದೇಶಕ ಪ್ರೊ.ಕೆ.ಎನ್. ಅಮೃತೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಡಾ.ಅಂಬೇಡ್ಕರ್ ಕುರಿತು ಕೇಂದ್ರ ಗೃಹ ಸಚಿವ

ಅಮಿತ್ ಶಾ ಹೇಳಿಕೆ ಖಂಡಿಸಿ ಇಲವಾಲದಲ್ಲಿ ಪ್ರತಿಭಟನೆ

ಮೈಸೂರು, ಡಿ.24(ಪಿಎಂ)– ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಕುರಿತಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಖಂಡಿಸಿ ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ವತಿಯಿಂದ ಇಲವಾಲದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಅಮಿತ್ ಶಾ ಅವರು ರಾಜ್ಯಸಭೆಯಲ್ಲಿ ಅವಹೇಳನಕಾರಿಯಾಗಿ ಮಾತನಾಡಿರುವುದು ಖಂಡನೀಯ. ನಮ್ಮ ದೇಶವು ಯಾವುದೇ ದೇವರು ಅಥವಾ ಧರ್ಮದಿಂದ ನಡೆಯುತ್ತಿಲ್ಲ. ಬದಲಿಗೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನದಡಿಯಲ್ಲಿ ಮುನ್ನಡೆಯುತ್ತಿದೆ. ಅಂಬೇಡ್ಕರ್ ಅವರನ್ನು ದಲಿತರು, ಶೋಷಿತರು ಸೇರಿದಂತೆ ಅವರ ಸಿದ್ಧಾಂತಗಳನ್ನು ಒಪ್ಪುವ ಎಲ್ಲಾ ವರ್ಗದವರು ದೇವರೆಂದು ಪೂಜಿಸುತ್ತಿದ್ದು, ಅಂತಹ ಮಹಾನಾಯಕರನ್ನು ಖಂಡಿಸುವ ಅಧಿಕಾರ ಇವರಿಗೆ ಕೊಟ್ಟವರ್ಯಾರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಹಿಂದೆ ಸುಪ್ರಿಂಕೋರ್ಟ್‌ನ ಆದೇಶದಂತೆ ಅಮಿತ್ ಶಾ ತಮ್ಮ ತವರು ರಾಜ್ಯ ಗುಜರಾತ್‌ನಿಂದ ಗಡಿಪಾರು ಆಗಿದ್ದರು. ಈಗ ಕೇಂದ್ರ ಗೃಹ ಸಚಿವರಾಗಿದ್ದು, ಈ ಎಲ್ಲದಕ್ಕೂ ಮೂಲಕಾರಣ ಈ ದೇಶದ ಸಂವಿಧಾನ. ಅಂಬೇಡ್ಕರ್ ಅವರಂತಹ ಮಹಾ ನಾಯಕರ ಬಗ್ಗೆ ಮಾತನಾಡುವಷ್ಟು ಯೋಗ್ಯತೆ ಅಮಿತ್ ಶಾಗೆ ಇಲ್ಲ ಎಂದು ಕಿಡಿಕಾರಿದರು.



ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ವತಿಯಿಂದ ಇಲವಾಲದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ ಅಮಿತ್ ಶಾರನ್ನು ಸಚಿವ ಸಂಪುಟದಿಂದ ಅಮಾನತುಗೊಳಿಸಿ ದೇಶ ದ್ರೋಹ ಪ್ರಕರಣ ದಾಖಲಿಸಿ ದೇಶದಿಂದ ಗಡಿಪಾರು ಮಾಡಬೇಕೆಂದು ರಾಷ್ಟ್ರಪತಿಗಳನ್ನು ಒತ್ತಾಯಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನರೇಂದ್ರ, ಜೆಡಿಎಸ್ ಮುಖಂಡ ಹುಯಿಲಾಳು ರಾಮಸ್ವಾಮಿ, ಮೈಸೂರು ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವು, ಮಾಜಿ ಸದಸ್ಯ ಅರುಣ್ ಕುಮಾರ್, ಇಲವಾಲ ಗ್ರಾಪಂ ಅಧ್ಯಕ್ಷೆ ಭಾಗ್ಯ ಶಿವಣ್ಣ, ಅಂಬೇಡ್ಕರ್ ಸಂಘದ ಅಧ್ಯಕ್ಷ ಚೆಲುವ ರಾಜ್, ಮುಖಂಡರಾದ ಮೈಕ್ ಗೋವಿಂದ, ಚೆಲುವರಾಜು, ರವಿ, ಪಾಷಾ, ರಾಜು, ಚಟ್ನಳ್ಳಿ ಸಂತೋಷ್, ಕೃಷ್ಣಮೂರ್ತಿ, ಗ್ರಾಪಂ ಮಾಜಿ ಅಧ್ಯಕ್ಷ ಶಿವಸ್ವಾಮಿ, ಮಾಜಿ ಸದಸ್ಯರಾದ ಕರೀಗೌಡ, ಶಿವೇಗೌಡ, ಬೆಟ್ಟಪ್ಪ, ವಕೀಲರಾದ ಗಂಗಾಧರ್, ಬೊಮ್ಮೇನಹಳ್ಳಿ ಕುಮಾರ್, ಡಿಎಸ್‌ಎಸ್ ಮುಖಂಡರಾದ ಬೊಮ್ಮೇನಹಳ್ಳಿ ಈಶ್ವರ್, ಕೋಳಿ ಸೂರಿ, ತಾಂಡವಮೂರ್ತಿ, ಚಿಕ್ಕಚೆಲುವ, ಮಾದೇವ್, ಶಿವರಾಜ್, ಶಿವಣ್ಣ, ಕಮ್ಮರಳ್ಳಿ ಸಂತೋಷ್, ಚಂದ್ರಗುಪ್ತ, ಗ್ರಾಪಂ ಮಾಜಿ ಅಧ್ಯಕ್ಷ ಶಿವಸ್ವಾಮಿ, ಮೇಗಳಾಪುರ ಮಾದೇವ್ ಮತ್ತಿತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.12.2024 ಬುಧವಾರ, ಮಳೆ ನಕ್ಷತ್ರ: ಮೂಲ, 16.12.2024 ರಿಂದ 28.12.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಧರ್ನುಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ (ಶ್ರೀ ಅಯ್ಯಪ್ಪ ಸ್ವಾಮಿ ಮತ್ತು ಶ್ರೀ ಗುರುವಾಯೂರಪ್ಪನ್ ದೇವಾಲಯ) :** 64ನೇ ವಾರ್ಷಿಕ ಪೂಜಾ ಮಹೋತ್ಸವ, ಬೆಳಗ್ಗೆ 5.30 ರಿಂದ ಮಹಾ ಗಣಪತಿ ಹೋಮ, ಉಷ ಪೂಜಾ, ಶೀವೇಲಿ ವಾದ್ಯದೊಂದಿಗೆ, ಮಧ್ಯಾಹ್ನ 12 ರಿಂದ ಶ್ರೀ ಅಯ್ಯಪ್ಪನಿಗೆ ನವಗಂ, ಪಂಚಗವ್ಯಂ ಅಭಿಷೇಕ, ಶ್ರೀ ಸುಬ್ರಹ್ಮಣ್ಯಸ್ವಾಮಿ ಮತ್ತು ಶ್ರೀ ಭುವನೇಶ್ವರಿ ದೇವರಿಗೆ ನವಗಂ, ಪಂಚಗವ್ಯಂ, ಉಚ್ಚಪೂಜಾ, ಮಧ್ಯಾಹ್ನ 12.30 ರಿಂದ ಮಹಾ ಅನ್ನದಾನ, ಸಂಜೆ 4 ರಿಂದ ದೀಪಾರಾಧನೆ, ಯಾತ್ರೆ ಬಲಿ, ಯಾತ್ರೆ ಹೋಮ, ದೇವರಿಗೆ ವಾದ್ಯದೊಂದಿಗೆ ಉತ್ಸವ, ದೀಪಾರಾಧನೆ, ತಾಲಪೊಲಿ ಸಮೇತ ಆರಾಟ್ಟು, ಉತ್ಸವ, ಆರಾಟ್ಟು ಪೂಜಾ, ಧ್ವಜಾವರೋಹಣ, ಬಾಣ ಬಿರುಸು ಕಾರ್ಯಕ್ರಮ, ಅತ್ತಾಳ ಪೂಜಾ, ಕಳಶಾಭಿಷೇಕಂ, ಶೀವೇಲಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ ಪ್ರಾಂಗಣ, ಚಾಮುಂಡಿಬೆಟ್ಟ ಪಾದ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್. ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ

■ **ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರ :** ಜ್ಯೋತಿಷ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣಾ ಸಮಾರಂಭ, ಸಾನ್ನಿಧ್ಯ : ಡಾ. ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಉದ್ಘಾಟನೆ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಪ್ರಮಾಣ ಪತ್ರ ಪ್ರದಾನ : ತುಮಕೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ವೈ.ಎಸ್. ಸಿದ್ದೇಗೌಡ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಉಪಸ್ಥಿತರು : ಆರಾಧ್ಯ ಮಹಾಸಭಾ ಅಧ್ಯಕ್ಷ ಪಿ. ನಾಗಭೂಷಣಾರಾಧ್ಯ, ಅಧ್ಯಕ್ಷತೆ : ಕೇಂದ್ರದ ಅಧ್ಯಕ್ಷ ಸಿದ್ಧಾಂತಿ ಕೆ.ಜಿ. ಪುಟ್ಟಹೊನ್ನಯ್ಯ, ಸ್ಥಳ: ಆರಾಧ್ಯ ಮಹಾಸಭಾ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ :** ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ, ಪ್ರತಿಭಾ ಪುರಸ್ಕಾರ, ಸಾನ್ನಿಧ್ಯ : ಶ್ರೀ ಗುರುಲಿಂಗ ಸ್ವಾಮಿಗಳು, ಉದ್ಘಾಟನೆ : ಜೆಎಸ್‌ಎಸ್ ಮುಕ್ತ ವಿವಿ ನಿರ್ದೇಶಕ ಸಿ.ಎಸ್. ಶಿವಸ್ವಾಮಿ, ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಉಪನಿರ್ದೇಶಕ ಎಸ್. ಸ್ವಾಮಿ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಆಲೂರು ಬಸವರಾಜು, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 10.30ಕ್ಕೆ.

■ **ಯಶು ಚಿಲ್ಡ್ರನ್ ಅಂಡ್ ಕಲ್ಚರಲ್ ಅಕಾಡೆಮಿ, ಅರೋರ ಎಜುಕೇಷನಲ್ ಟ್ರಸ್ಟ್ :** ಸಾಧನರತ್ನ, ಮೈಸೂರು ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಎಸ್.ಪಿ. ಸುರೇಶ್, ಉಪಸ್ಥಿತರು: ಶಿಕ್ಷಣ ಇಲಾಖೆಯ ಬಿ.ಬಾಲಕೃಷ್ಣಯ್ಯ, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ಯಶೋದ ನಾರಾಯಣ್, ಸ್ಥಳ: ಗೋಪಾಲಸ್ವಾಮಿ ವಿದ್ಯಾಸಂಸ್ಥೆ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ವಾದ್ಯ ವೈಭವ–ಸಂಗೀತ ವಾದ್ಯಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಚೈತ್ರಿಕಾ. ಎಸ್., 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ.ಪಿ.ರೇವತಿ, ವ್ಯಾಖ್ಯಾನ–ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗದರ್ಶನ : ಲಾಜಿಸ್ಟಿಕ್ಸ್ ಅಂದರೆ ಸರಕು ಸಾಗಣೆ ವಿಷಯದಲ್ಲಿ ಇರುವ ಉದ್ಯೋಗ ಅವಕಾಶಗಳು. ಭಾಗವಹಿಸುತ್ತಾರೆ–ಹೆಚ್. ಜಿ. ವಿಠ್ಠಲ, ಲಾಜಿಸ್ಟಿಕ್ಸ್ ಉದ್ಯಮಿ ನಡೆಸಿಕೊಡುತ್ತಾರೆ–ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಉಲ್ಲಾಸ್ ಬಾಪಟ್–ಸಂತೂರ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.35 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ–ಎಂ. ಎಸ್. ಸುಬ್ಬುಲಕ್ಷ್ಮಿ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಹೆಚ್. ಆರ್. ವಿಜಯ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ನಾರಾಯಣ ಅಯ್ಯರ್–ಗೋಟು ವಾದ್ಯ, 4.00 ಮಹಿಳಾರಂಗ, 4.45 ಹಿಂದಿ ಪಾಠ–ಶಾಂತಾ. ಡಿ. ಕಿಣಿ, 6.50 ಕೃಷಿರಂಗ : ಮೇವು, ಮೆಲುಕು–ಮೇವಿನ ಬೆಳೆಗಳ ಬೇಸಾಯ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ. ದಕ್ಷಿಣ ಒಣ ಪ್ರದೇಶದಲ್ಲಿ ಬೆಳೆಯಬಹುದಾದ ಪ್ರಮುಖ ಮೇವಿನ ಬೆಳೆಗಳು. ಈ ಕುರಿತು ಮಂಡ್ಯದ ವಿ. ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹ ಸಂಶೋಧನಾ ನಿರ್ದೇಶಕರಾದ ಡಾ. ಎನ್. ಶಿವಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

■ **ಮೈಸೂರು ಅರಮನೆ ಮಂಡಳಿ:** ಅರಮನೆ ಫಲಪುಷ್ಪ ಪ್ರದರ್ಶನ–2024, ಸಂಜೆ 5.45 ರಿಂದ ಶ್ರೀ ನಾಹರ್ ಗುರುದತ್ತ ಮತ್ತು ತಂಡದವರಿಂದ ಶಾಸ್ತ್ರೀಯ ಸಂಗೀತ, ರಾತ್ರಿ 6.30 ರಿಂದ ಸಂಗೀತ ವಿದ್ವಾನ್ ಪ್ರೊ. ಸಿ.ಎ. ಶ್ರೀಧರ, ವಿದ್ವಾನ್ ಸಿ.ಎಸ್. ಕೇಶವಚಂದ್ರ ಮತ್ತು ವೃಂದದವರಿಂದ ಕರ್ನಾಟಕ ಶಾಸ್ತ್ರೀಯ ದ್ವಂದ್ವ ವೇಣುವಾದನ, ರಾತ್ರಿ 7.30 ರಿಂದ ಜೀ ಕನ್ನಡ ರಿಯಾಲಿಟಿ ಶೋ ಖ್ಯಾತಿಯ ಗಾಯಕರಾದ ದರ್ಶನ್ ನಾರಾಯಣ್, ಐಶ್ವರ್ಯ ರಂಗರಾಜನ್, ಸುನೀಲ್ ಗುಜಗೊಂಡ್, ವಸುಶ್ರೀ ಹಳೆಮನೆ, ಜ್ಞಾನಗುರುರಾಜ್ ಮತ್ತು ತಂಡದವರಿಂದ ಸಂಗೀತಯಾನ, ಸ್ಥಳ: ಮೈಸೂರು ಅರಮನೆ ಆವರಣ.

■ **ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ :** ನಾಡಪ್ರೇಮಿ ಎಸ್.ಹೆಚ್. ಲಿಂಗೇಗೌಡ ಅವರ ಶ್ರದ್ಧಾಂಜಲಿ ಕಾರ್ಯಕ್ರಮ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣ, ಮೈಸೂರು ಅರಮನೆ, ಸಂಜೆ 4ಕ್ಕೆ.

■ **ಜನಮನ ಸಾಂಸ್ಕೃತಿಕ ಸಂಘಟನೆ :** ಡಾ.ಎ.ಆರ್. ರಾಧಾಕೃಷ್ಣರವರ ಕೃತಿ ಅವಸಾನದತ್ತ ನೀಲಗಿರಿ ಕನ್ನಡಿಗರು ಪುಸ್ತಕ ಬಿಡುಗಡೆ ಸಮಾರಂಭ, ಉದ್ಘಾಟನೆ : ಪ್ರಗತಿಪರ ಚಿಂತಕ ಡಾ. ಮುಜಾಫರ್ ಅಸ್ಸಾದಿ, ಪುಸ್ತಕ ಬಿಡುಗಡೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪ್ರಾಸ್ತಾವಿಕ ನುಡಿ : ಲೇಖಕ ಪರಮಶಿವ ನಡುಬೆಟ್ಟ, ಪುಸ್ತಕ ಕುರಿತು : ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ : ಮಹಿಳಾ ಹೋರಾಟಗಾರ್ತಿ ಡಾ. ರತಿರಾವ್, ಉಪಸ್ಥಿತರು: ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ರಂಗಾಯಣ ಮಾಜಿ ನಿರ್ದೇಶಕರಾದ ಸಿ. ಬಸವಲಿಂಗಯ್ಯ, ಹೆಚ್. ಜನಾರ್ಧನ್, ನಿವೃತ್ತ ಅಭಿಯಂತರ ಟಿ.ಆರ್. ಸ್ವಾಮಿ, ಅಹಿಂದ ಹೋರಾಟಗಾರ ಜವರಪ್ಪ, ಸ್ಥಳ: ಬಿ.ವಿ. ಕಾರಂತರ ರಂಗಚಾವಡಿ, ರಂಗಾಯಣ, ಸಂಜೆ 4.30ಕ್ಕೆ.

■ **ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ :** ಸಂಘದ ವಾರ್ಷಿಕೋತ್ಸವ, ಗ್ರಾಹಕರ ಸಮಾವೇಶ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಸೊಸೈಟಿ ಅಧ್ಯಕ್ಷ ಎಂ.ಡಿ. ಗೋಪಿನಾಥ್, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ, ಸಂಜೆ 5ಕ್ಕೆ.

■ **ನಿರಂತರ ಫೌಂಡೇಷನ್ :** ನಿರಂತರ ರಂಗ ಉತ್ಸವ, ಸಮತೆಂತೋ ಮೈಸೂರು ಪ್ರಸ್ತುತಿಯ ಏಕವ್ಯಕ್ತಿ ರಂಗ ಪ್ರಯೋಗ ನೀರ್ಮಾದಳ ಹೂವಿನೊಂದಿಗೆ... ನಾಟಕ ಪ್ರದರ್ಶನ, ಅಭಿನಯ : ಇಂದಿರಾ ನಾಯರ್, ನಿರ್ದೇಶನ : ಡಾ. ಶ್ರೀಪಾದ ಭಟ್, ಸ್ಥಳ: ಕಿರುರಂಗ ಮಂದಿರ, ಸಂಜೆ 7ಕ್ಕೆ.

ನಟ ಶಿವರಾಜ್‌ಕುಮಾರ್ ಅಮೆರಿಕ ಆಸ್ಪತ್ರೆಗೆ ದಾಖಲು

ಚೇತರಿಕೆಗೆ ಹಾರೈಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಡಿ.24– ನಟ ಶಿವರಾಜ್ ಕುಮಾರ್ ಅಮೆರಿಕದಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಮಿಯಾಮಿ ಕ್ಯಾನ್ಸರ್ ಇನ್ಸಿಟಿಟ್ಯೂಟ್‌ನಲ್ಲಿ ಚಿಕಿತ್ಸೆಗೆ ಅವರು ದಾಖಲಾಗಿದ್ದು, ವೈದ್ಯರು ಶಿವಣ್ಣರಿಗೆ ಶಸ್ತ್ರಚಿಕಿತ್ಸೆ ನೆರವೇರಿಸಲಿದ್ದಾರೆ.



ಅಮೆರಿಕದ ಫ್ಲೋರಿಡಾದಲ್ಲಿರುವ ಮಿಯಾಮಿ ಕ್ಯಾನ್ಸರ್ ಇನ್ಸಿಟಿಟ್ಯೂಟ್ ಆಸ್ಪತ್ರೆಗೆ ದಾಖಲಾಗಿರುವ ಅವರು ಶಸ್ತ್ರಚಿಕಿತ್ಸೆಯ ನಂತರ ಅಲ್ಲೇ ವಿಶ್ರಾಂತಿ ಪಡೆದುಕೊಳ್ಳಲಿದ್ದಾರೆ. ಶಿವರಾಜ್ ಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಕರೆ ಮಾಡಿ ಆರೋಗ್ಯ ವಿಚಾರಿಸಿದ್ದೇನೆ. ಜೊತೆಗೆ ಶೀಘ್ರ ಗುಣಮುಖರಾಗುವಂತೆ ಹಾರೈಸಿದ್ದೇನೆ.



ನನಗೆ ತಿಳಿದಂತೆ ಶಿವರಾಜ್ ಕುಮಾರ್ ಅವರ ಆತ್ಮವಿಶ್ವಾಸ, ಧೈರ್ಯ ಮತ್ತು ಸಹೃದಯತೆ ಅವರನ್ನು ಈ ಹೋರಾಟದಲ್ಲಿ ಗೆಲ್ಲಿಸಿಕೊಂಡು ಬರಲಿದೆ ಎಂಬ ವಿಶ್ವಾಸವಿದೆ.

ಬದುಕಿನ ದಾರಿಯಲ್ಲಿ ಎದುರಾಗಿರುವ ಈ ಸಣ್ಣ ಸಂಕಷ್ಟವನ್ನು ನಿವಾರಿಸಿಕೊಂಡು ಆರೋಗ್ಯವಂತರಾಗಿ ಬರಲಿರುವ ಶಿವರಾಜ ಕುಮಾರ್ ಅವರ ಆಗಮನವನ್ನು ಎದುರು ನೋಡುತ್ತಿರುವ ಅವರ ಹಿತೈಷಿಗಳಲ್ಲಿ ನಾನೂ ಒಬ್ಬ. ನಾಡಿನ ಹಿರಿಯರ ಆಶೀರ್ವಾದ ಮತ್ತು ಕಿರಿಯರ ಶುಭಹಾರೈಕೆ ಶಿವರಾಜ ಕುಮಾರ್ ಅವರ ಜೊತೆಗಿದ್ದು, ಅವರನ್ನು ಕಾಪಾಡಲಿದೆ ಎಂದು ಸಿಎಂ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು: ಮಹಾನಗರ ಪಾಲಿಕೆಯ ವತಿಯಿಂದ ಅಮೃತ್ 2.0 ಯೋಜನೆಯಡಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ಸಮರ್ಪಕ ವಸೂಲಾತಿಗಾಗಿ ಡೇ– ನಾಲ್ಮ್ ಯೋಜನೆಯಡಿ ರಚಿಸಲ್ಪಟ್ಟ ಮಹಿಳಾ ಸ್ವ–ಸಹಾಯ ಗುಂಪುಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಸದರಿ ಸ್ವ–ಸಹಾಯ ಗುಂಪುಗಳಿಗೆ ವಸೂಲಾದ ಮೊತ್ತದಲ್ಲಿ ಶೇ.5ರಷ್ಟು ಪ್ರೋತ್ಸಾಹ ಧನವನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ.

AFFIDAVIT

I, Somshekhar Umadi, residing at No. G-5, MF13, MF14, Paramount Prime Apartment, Opp. Sankalp Central Apartment, Jawa Main Road, Yadavagiri Industrial Area, Mysuru-570 020, in my son's Birth Certificate his name mentioned as **Aditya Umadi**, but in his Aadhar card & school certificates his name is mentioned as **Aditya S Umadi.** I swear that **Aditya Umadi and Aditya S Umadi** both the names belongs to my son only, sworn in before Notary **H.N. Varija vide affidavit dated 23-12-2024.**

Sd/- **Somshekhar Umadi**

PUBLIC NOTICE/ INTIMATION OF COURT ORDER

The general public is hereby notified that CSI Holdsworth Memorial (Mission) Hospital had preferred a suit for injunction along with an Interim application seeking an ex-parte ad-interim order of temporary injunction against the following persons:

1. Daya Prakash
2. Joseph Manuel R
3. Wilson Prabhakar A
4. Shankar C
5. Paul David
6. Prakash Babu
7. Sunder Premkumar

The said suit bearing O.S. No. 2105/2024 and IA filed therein were heard by **the Hon'ble Court of IX Additional Civil Judge & JMFC, at Mysuru. The Hon'ble Court was pleased to grant an ex-parte ad-interim order of temporary injunction against the above named restraining them from interfering with the peaceful management and administration of CSI Holdsworth Memorial (Mission) Hospital's property** pending the disposal of the suit vide its order dated 13.12.2024 and the said order is in force till date.

Hence, the above named are hereby restrained from interfering with the peaceful management and administration of CSI Holdsworth Memorial (Mission) Hospital's property.

By Order of the Court
PRL Civil Judge and JMFC, Mysore

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ, ಮನೆ ನಂ. 4414, ಬಜಾರ್ ರಸ್ತೆ, ಎನ್.ಆರ್. ಮೊಹಲ್ಲಾ, ಮೈಸೂರು ಇಲ್ಲಿ ವಾಸವಾಗಿರುವ ಶ್ರೀ. ಎಂ. ಪುಟ್ಟಯ್ಯ ನವರ ಧರ್ಮಪತ್ನಿಯಾದ ಶ್ರೀಮತಿ. ಪದ್ಮ .ಸಿ ರವರು ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ದೊಡ್ಡಕವಲಂದೆ ಹೋಬಳಿ, ಹೆಡತಲೆ ಗ್ರಾಮದಲ್ಲಿರುವ ಶ್ರೀ. ಮಣಿಕಂಠ ಹೆಚ್.ಎಸ್ ರವರಿಗೆ ಸೇರಿದ ಸರ್ವೆ ನಂ. 774/5 ರಲ್ಲಿ ಇರುವ 0.23.8 ಗುಂಟೆ ಜಮೀನನ್ನು ಖರೀದಿಸುತ್ತಿದ್ದು, ಹಾಗೂ ಸರ್ವೆ ನಂ. 774/2 ರಲ್ಲಿ 0.06 ಗುಂಟೆ ಜಮೀನನ್ನು ರಸ್ತೆಯ ಉದ್ದೇಶಕ್ಕಾಗಿ ಖರೀದಿಸುತ್ತಿದ್ದು ಈ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರು ಹಕ್ಕು ಇದೆ ಎಂದಾದಲ್ಲಿ, ಯಾವುದಾದರು ಸಿವಿಲ್ ವ್ಯಾಜ್ಯಗಳಿದ್ದಲ್ಲಿ, ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ ಒಂದು ವಾರದೊಳಗೆ ಮೌಖಿಕವಾಗಿ ಎಲ್ಲಾ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಕೆಳಕಂಡ ವಿಳಾಸದಲ್ಲಿ ಸಂಪರ್ಕಿಸುವುದು. ಒಂದು ವೇಳೆ ಮೇಲೆ ತಿಳಿಸಿದ ಅವಧಿಯೊಳಗಾಗಿ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದಿದ್ದಲ್ಲಿ ಆಕ್ಷೇಪಣೆಗಳು ಏನು ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಸಂಬಂಧಪಟ್ಟ ನೋಂದಣಿ ಕಛೇರಿಯಲ್ಲಿ ನೋಂದಣಿ ಪ್ರಕ್ರಿಯೆಯ ಮೂಲಕ ಕ್ರಯಪತ್ರವನ್ನು ಶ್ರೀ.ಮಣಿಕಂಠ ಹೆಚ್.ಎಸ್ ರವರಿಂದ ಬರೆಸಿಕೊಳ್ಳಲಾಗುತ್ತದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ದೊಡ್ಡಕವಲಂದೆ ಹೋಬಳಿ, ಹೆಡತಲೆ ಗ್ರಾಮದಲ್ಲಿರುವ ಸರ್ವೆ ನಂ. 774/5 ರಲ್ಲಿ ಇರುವ 0.23.8 ಗುಂಟೆ ಜಮೀನನ್ನು ಖರೀದಿಸುತ್ತಿದ್ದು, ಹಾಗೂ ಸರ್ವೆ ನಂ. 774/2 ರಲ್ಲಿ 0.06 ಗುಂಟೆ ಜಮೀನಿಗೆ ಚಕ್ಕುಬಂದಿ:–

ಪೂರ್ವಕ್ಕೆ : ದಾಸಪ್ಪನವರ ಜಮೀನು

ಪಶ್ಚಿಮಕ್ಕೆ : ರಾಜು ಹೊಸಮಾಳ ರವರ ಜಮೀನು

ಉತ್ತರಕ್ಕೆ : ಶ್ರೀನಿವಾಸ ರವರ ಜಮೀನು

ದಕ್ಷಿಣಕ್ಕೆ : ಲಕ್ಷ್ಮಣ್ ನಾಯಕ ರವರ ಜಮೀನು ಮತ್ತು ಸರ್ವೆ ನಂ. 774/2 ರಲ್ಲಿ ತಿರುಗಾಡಲು ಬಿಟ್ಟಿರುವ 0.06 ಗುಂಟೆ ರಸ್ತೆ.

ಸಂಪರ್ಕಿಸಬೇಕಾದವರ ವಿವರ:

ನಾಗರಾಜು ಪಿ . : 8095007476

ಯೋಗೇಶ್ ಎಲ್.ಎಸ್. : 9945357443

ಸಹಿ/– **ಎಸ್.ಕಮಲ,** BAL., LL.B, KAR-2420/03
ವಕೀಲರು, #25, ಮುಡಾ ಕಾಂಪ್ಲೆಕ್ಸ್, ಆಂದೋಲನ ಸರ್ಕಲ್ ಹತ್ತಿರ, ರಾಮಕೃಷ್ಣನಗರ, ಮೈಸೂರು–570012, ಮೊ:9845568157

ಶ್ರೀ ವಿಷ್ಣೇಶ್ವರ ಕಲಾ ಸಂಘ, ಮೈಸೂರು

ಪುನೀತ್ ರಾಜ್‌ಕುಮಾರ್ ರವರ 3ನೇ ವರ್ಷದ ಪುಣ್ಯಸಂಸ್ಮರಣೆ ಪ್ರಯುಕ್ತ **ದಕ್ಷಯಜ್ಞ** ಎಂಬ ಪೌರಾಣಿಕ ನಾಟಕ ಅಭಿನಯಿಸುತ್ತಿದ್ದಾರೆ. ಸ್ಥಳ: **ಪುರಭವನ** ದಿ:25/12/2024 ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಶಸ್ವಿಗೊಳಿಸಬೇಕಾಗಿ ಸಂಘದ ಪ್ರಾರ್ಥನೆ

ಪ್ರಕಟಣೆ: ಭಾಸ್ಕರ್ ಬಿಳಿಕೆರೆ & ರವಿ

15ನೇ ವರ್ಷದ ಸವಿನೆನಪು



ಹೆಚ್.ಬಿ.ಕಾರ್ತೀಕ್
(ಅಜಯ್)
19.4.1991–25.12.2009

ಪಾಪು ನೀನು ನಮ್ಮನ್ನಗಲಿ ಇಂದಿಗೆ 15 ವರ್ಷಗಳೇ ಕಳೆದರೂ ನಿನ್ನ ಸವಿನೆನಪು ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ ನಿನಗಾಗಿ ಕಾದಿರುವೆವು ಮತ್ತೊಮ್ಮೆ ಹುಟ್ಟಿಬಾ, ಪಾಪು ಭಗವಂತನು ನಿನ್ನ ಆತ್ಮಕ್ಕೆ ಶಾಂತಿ ನೀಡಲೆಂದು ಸದಾ ಪ್ರಾರ್ಥಿಸುವ ದುಃಖತಪ್ತರು ತಂದೆ: ಸಿ.ಬಸವಯ್ಯ ದೊಡ್ಡಪ್ಪ, ತಾಯಿ: ವಿಶಾಲಾಕ್ಷಿ, ಅಕ್ಕ ಅಣ್ಣ ಹಾಗು ಬಂಧುಬಳಗದವರು

ಕಳೆದಿದೆ

ಗೀತಾ.ಕೆ, ಧನಗಳ್ಳಿ ಗ್ರಾಮ ಪಂಚಾಯತ್, ರಾಯನಕೆರೆ ಪೋಸ್ಟ್, ಕೋಟೆಹುಂಡಿ, ಮೈಸೂರು ಇಲ್ಲಿ ವಾಸವಿದ್ದು, ಇವರಿಗೆ ಸೇರಿದ ದಿನಾಂಕ: 07.08.2011ರ ನೋಂದಾಯಿತ ಕ್ರಯಪತ್ರದ ದಸ್ತಾವೇಜು ಸಂಖ್ಯೆ ಎಂವೈಎನ್ –02955– 2021–22 ಸಿ.ಡಿ ನಂ ಎಂವೈಎನ್‌ಡಿ 1037 ದಿನಾಂಕ 23/12/2024ರಂದು ಕಳೆದಿದ್ದು, ಯಾರಿಗಾದರೂ ಸಿಕ್ಕಲ್ಲಿ ಸಂಪರ್ಕಿಸಿ:

9900661352

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಕಾರ್ಯದರ್ಶಿಯವರ ಕಛೇರಿ, ಮೈಸೂರು

ಸಂಖ್ಯೆ: ಮೈನಪ್ರಾ/ಆಆಸಶಾ/ಪ.ಪ್ರ–2/ತು.ಜಾ/2024–25 ದಿನಾಂಕ: 23.12.2024

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ರಚಿಸಲಾದ ಬಡಾವಣೆಗಳಲ್ಲಿ ತುಂಡುಭೂಮಿ ಅಥವಾ ಉಳಿದಿರುವ ಭೂಮಿಯನ್ನು ವಿಲೇವಾರಿ ಮಾಡುವ ಸಂಬಂಧ ಮಾನ್ಯ ಸರ್ಕಾರವು ಸಂಖ್ಯೆ ನಅಇ **2 ಎಂಐಬಿ 2022, ದಿನಾಂಕ 22.11.2024** ರಂದು ಮಾರ್ಗಸೂಚಿಗಳನ್ನು ತಿಳಿಸಿ ತುಂಡುಭೂಮಿ ಅಥವಾ ಉಳಿದ ಭೂಮಿಯನ್ನು ವಿಲೇವಾರಿ ಮಾಡಲು ಸೂಚಿಸಿರುತ್ತದೆ. ಅದರಂತೆ ಪ್ರಾಧಿಕಾರದಿಂದ ರಚಿತವಾದ ಬಡಾವಣೆಗಳಲ್ಲಿ ಮಂಜೂರಾತಿ ಪಡೆದಿರುವ ಸಾರ್ವಜನಿಕರು ತಮ್ಮ ನಿವೇಶನ/ಮನೆಗಳಿಗೆ ಹೊಂದಿಕೊಂಡಂತೆ ತುಂಡುಜಾಗ ಲಭ್ಯವಿದ್ದಲ್ಲಿ ಅಂತಹ ತುಂಡುಜಾಗವನ್ನು ಮಂಜೂರು ಮಾಡುವ ಸಂಬಂಧ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಿ ದಿನಾಂಕ 30.11.2024 ರಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿತ್ತು, ಮುಂದುವರೆದು, ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತೊಮ್ಮೆ ಸಾರ್ವಜನಿಕರು ತಮ್ಮ ನಿವೇಶನ/ಮನೆಗಳಿಗೆ ಹೊಂದಿಕೊಂಡಂತೆ ತುಂಡುಜಾಗ ಲಭ್ಯವಿದ್ದಲ್ಲಿ ಅಂತಹ ತುಂಡುಜಾಗವನ್ನು ಕೋರಿ ಅರ್ಜಿಯನ್ನು ಸಲ್ಲಿಸಲು **ದಿನಾಂಕ 26.12.2024 ರಿಂದ 25.01.2025** ರವರೆಗೆ ಕಾಲಾವಕಾಶವನ್ನು ವಿಸ್ತರಿಸಿದೆ. ನಂತರ ಸರ್ಕಾರದ ಮಾರ್ಗಸೂಚಿಯಂತೆ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/– ವಿ.ಕೆ.ಪ್ರಸನ್ನ ಕುಮಾರ್, ಕೆ.ಎ.ಎಸ್ (ಹಿ.ಶ್ರೇ)
ಕಾರ್ಯದರ್ಶಿ,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

DIPR/MYS/KAVITA/999/2024-25

ಬಿಳಿಗೆರೆ ಗ್ರಾಮ ಪಂಚಾಯಿತಿ ಕಾರ್ಯಾಲಯ

ಜಿಲ್ಲಾ ಪಂಚಾಯಿತಿ ಮೈಸೂರು — ತಾಲ್ಲೂಕು ಪಂಚಾಯಿತಿ ಹುಣಸೂರು

ಬಿಳಿಗೆರೆ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

ಇಮೇಲ್: biligere.hun.mys@gmail.com ಫೋನ್ ನಂ.: 9480873245

ಪ.ಸಂ: ಬಿ.ಗ್ರಾ.ಪಂ/ ಮನ.ಟೆ.ಪ್ರ/2024- 25

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಬಿಳಿಗೆರೆ ಗ್ರಾಮ ಪಂಚಾಯಿತಿಯ 2024–25ನೇ ಸಾಲಿನ ಮನರೇಗಾ ಲೆಕ್ಕಶೀರ್ಷಿಕೆಯಡಿ "ಮಂಚಬಾಯನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಾಂಪೌಂಡ್ ನಿರ್ಮಾಣ" ಕಾಮಗಾರಿಯ ಸಾಮಗ್ರಿ ಮೊತ್ತ ರೂ. 6,32,110.32/- (ಆರು ಲಕ್ಷದ ಮೂವತ್ತೆರಡು ಸಾವಿರದ ನೂರಹತ್ತು ರೂಗಳು)/- ಗಳಿಗೆ ಸಾಮಗ್ರಿ ಪೂರೈಸುವ ಸಂಬಂಧ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು ಆಸಕ್ತ ನೋಂದಾಯಿತ ಅರ್ಹ ಸಾಮಗ್ರಿ ಸರಬರಾಜುದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ನಿಯಮ/ಷರತ್ತುಗಳು: ಮೇಲಿನ ಕಾಮಗಾರಿಗೆ ದಿನಾಂಕ:- 24/12/2024 ರಿಂದ 03/01/2025 ಸಂಜೆ 4.00 ಗಂಟೆಯೊಳಗೆ ಟೆಂಡರ್‌ಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ.ಸದರಿ ಟೆಂಡರ್‌ನಲ್ಲಿ ತಾಂತ್ರಿಕವಾಗಿ ಅರ್ಹರಾದ ಬಿಡ್‌ದಾರರ ಆರ್ಥಿಕ ಬಿಡ್ ಅನ್ನು 04/01/2025ರ ದಿನದಂದು 5.00 ಗಂಟೆಗೆ ತೆರೆಯಲಾಗುವುದು. ಸದರಿ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಟೆಂಡರ್ ದಾಖಲಾತಿಗಳಿಗಾಗಿ ಮತ್ತು ಷರತ್ತುಗಳಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಕೆಪಿಪಿಪಿ) ಮೂಲಕ ನೋಡಬಹುದಾಗಿರುತ್ತದೆ. http://kppp.karnataka.gov.in ನಲ್ಲಿ ಲಾಗಿನ್ ಆಗಿ ಟೆಂಡರ್ ಭರ್ತಿ ಮಾಡುವುದು. ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಹೆಚ್ಚಿನ ಮಾಹಿತಿಗೆ ಮೇಲ್ಕಂಡ ಮೊಬೈಲ್ ಅಥವಾ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/- ಅಧ್ಯಕ್ಷರು	ಸಹಿ/- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಬಿಳಿಗೆರೆ ಗ್ರಾಮ ಪಂಚಾಯಿತಿ	ಬಿಳಿಗೆರೆ ಗ್ರಾಮ ಪಂಚಾಯಿತಿ

17ನೇ ವರ್ಷದ ಸವಿನೆನಪು



ಶ್ರೀ ಆರ್.ರಾಮಚಂದ್ರ

ನೀವು ನಮ್ಮನ್ನಗಲಿ ಇಂದಿಗೆ 17 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು : ಪತ್ನಿ ಮಹದೇವಮ್ಮ, ಮತ್ತು ಮಕ್ಕಳು.

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ನಕ್ಕರೆ ಅದೇ ಸ್ವರ್ಗ

ಗುಂಡ : (ಕನ್ನಡಕದ ಅಂಗಡಿಗೆ ಹೋಗಿ) ಅಂಕಲ್ ನಮ್ಮ ಟೀಚರ್‌ಗೆ ಒಂದು ಕನ್ನಡಕ ಮಾಡಿಕೊಡಿ.

ಅಂಗಡಿಯಾತ: ನೀನ್ಯಾಕೆ ಅವರಿಗೆ ಕನ್ನಡಕ ಮಾಡಿಸಿಕೊಡಬೇಕು.

ಗುಂಡ : ಯಾಕಂದ್ರೆ ಅವರಿಗೆ ನಾನು ಯಾವಾಗಲೂ ಕತ್ತೆ ತರ ಕಾಣಿಸ್ತಿನಂತೆ!

ಮೈಸೂರು ಮಿತ್ರ

ಬುಧವಾರ, 25 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಕಳವು ಮಾಡಲೂ ಅವಕಾಶ ಸಿಗುವವರೆಲ್ಲರೂ ಅನಿವಾರ್ಯ ಪ್ರಾಮಾಣಿಕರು. –ಮುನಿಶ್ರೀ ತರುಣ್ ಸಾಗರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಪತ್ತಿಗಾದವನೇ ನಿಜವಾದ ಗೆಳೆಯ.

ನಿಮ್ಮ ಪತ್ರಗಳು

ರಾಜಕೀಯದಲ್ಲಿ ಟೀಕೆ ಟಿಪ್ಪಣಿಗಳು ತಾತ್ಕಾಲಿಕ

ಮಾನ್ಯರೆ,

ಜನಪ್ರತಿನಿಧಿ ಎನಿಸಿಕೊಂಡಿರುವ ರಾಜಕಾರಣಿಗಳು ಜನರ ಸೇವೆಯನ್ನು ಮಾಡಲು ರಾಜಕೀಯಕ್ಕೆ ಬಂದವರು. ಜನರ ಕಷ್ಟ, ಸಮಸ್ಯೆಗಳನ್ನು ಕಾನೂನಿನ ಪ್ರಕಾರ ಸರಿಪಡಿಸಲು ಯಾವ ರೀತಿ ಸಾಧ್ಯತೆ ಇದೆ. ಅದನ್ನು ಜಾರಿಗೆ ತರಲು ರಾಜಕಾರಣಿಗಳು ಪ್ರಯತ್ನಿಸಿದ್ದಾರೆ. ಆದರೆ ಇತ್ತೀಚಿನ ರಾಜಕೀಯದಲ್ಲಿ ಜನಪ್ರತಿನಿಧಿಗಳ ಬೆಳವಣಿಗೆ ಜನರ ಸಮಸ್ಯೆ, ರಾಜ್ಯದ ಸಮಸ್ಯೆಗಳನ್ನೆಲ್ಲ ಬದಿಗೊತ್ತಿ, ಪರಸ್ಪರ ರಾಜಕೀಯ ನಾಯಕರ ಕಿತ್ತಾಟ. ಆರೋಪ–ಪ್ರತ್ಯಾರೋಪ, ಜಾತಿ, ಧರ್ಮದಲ್ಲಿ ರಾಜಕೀಯ, ನೆಲ, ಜಲ, ಭಾಷೆ ವಿಷಯದಲ್ಲಿ ಕಿರಿಕ್ ಸೇರಿದಂತೆ ಅವಾಚ್ಯ ಶಬ್ದ, ಅವಹೇಳನಕರ ಭಾಷಣಕ್ಕೆ ಹೆಸರುವಾಸಿಯಾಗುತ್ತಿದೆ. ಈ ಮೇಲಿನ ಯಾವುದೇ ಘಟನೆ ಆಕಸ್ಮಿಕವಾಗಿ ಬಾಯಿ ತಪ್ಪಿನಿಂದ ನಡೆದರೂ ಬಹಿರಂಗವಾಗಿ ಕ್ಷಮೆಯಾಚನೆ ಇಲ್ಲ. ಕ್ಷಮಾಪಣೆಯ ಲಿಖಿತ ಪತ್ರ ಇಲ್ಲ. ಹೀಗೆ ತಿಂಗಳಗಟ್ಟಲೆ ಬೆಳೆಸಿಕೊಂಡು ಹೋಗಿ ಬಿಡುವುದು. ಒಟ್ಟಿನಲ್ಲಿ ಇಂತಹ ಸನ್ನಿವೇಶ ದಿನನಿತ್ಯ ನೋಡಿ ತಲೆನೋವಿನ ಮಾತ್ರೆ ತೆಗೆದುಕೊಳ್ಳುವ ಹಂತಕ್ಕೆ ತಲುಪಿದ್ದೇವೆ. ರಾಜಕಾರಣಿಗಳು ಎನಿಸಿಕೊಂಡವರಿಗೆ ಬೇಕಾದಷ್ಟು ಕೆಲಸ ಕಾರ್ಯಗಳಿವೆ. ರಾಜಕಾರಣಿಗಳು, ರಾಜಕಾರಣಿಗಳ ಮಕ್ಕಳು ದಕ್ಷಿಣ ಕರ್ನಾಟಕ ಮಗ, ಮಗಳು ಉತ್ತರ ಕರ್ನಾಟಕದ ಸೊಸೆ, ಅಳಿಯ ಆಗಿದ್ದಾರೆ. ಇಲ್ಲಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎನ್ನದೇ ಸಮಗ್ರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಚಿಂತಿಸಬೇಕು. ಸಮಗ್ರ ಕರ್ನಾಟಕದಲ್ಲಿ ಕಿತ್ತೂರ ಕರ್ನಾಟಕ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ರಸ್ತೆ, ಸೇತುವೆ, ಮೂಲ ಸೌಕರ್ಯ ಸೇರಿದಂತೆ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ಕಲ್ಯಾಣ ಕರ್ನಾಟಕ ಮಾದರಿ ಕಿತ್ತೂರು ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಇಲ್ಲವೇ ಕಿತ್ತೂರ ಕರ್ನಾಟಕ ಪ್ರತ್ಯೇಕ ಅಭಿವೃದ್ಧಿ ಮಂಡಳಿ ಅಗತ್ಯವಿದೆ. ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಮೂಲಕ ರಾಜ್ಯ ಸರ್ಕಾರ ಮತ್ತು ರಾಜ್ಯದ ಕೇಂದ್ರ ಸಚಿವರು, ಸಂಸದರು ಪ್ರಯತ್ನಿಸುವ ಒತ್ತಡ ತರುವ ಕೆಲಸವಾಗಲಿ.

ಇದೇ ಡಿ. 26, 27 ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಕಾರ್ಯಕ್ರಮ ನಡೆಯಲಿದೆ. ದೇಶಕ್ಕೆ ಸ್ವಾತಂತ್ರ್ಯ ತಂದ ಮಹಾತ್ಮನ ಕೊಡುಗೆಗಾಗಿ ಮಹಾತ್ಮ ಗಾಂಧಿ ಸವಿನೆನಪಿಗಾಗಿ ಸ್ಥಳೀಯ ಸಂಸ್ಥೆಗಳ ಆಡಳಿತ ಮಂಡಳಿಯ ವಿಶೇಷ ಅನುದಾನದಲ್ಲಿ ಗಾಂಧಿ ಪ್ರತಿಮೆ ಆರು–ಏಳು ತಿಂಗಳೊಳಗೆ ಕಚೇರಿ ಮುಂಭಾಗ ನಿರ್ಮಾಣವಾದರೇ, ನೋಡುಗರ ಗಮನ ಸೆಳೆಯುತ್ತದೆ. ಗಾಂಧೀಜಿ ಅವರಿಗೆ ಗೌರವ ಸಲ್ಲಿಸಲು ನಮ್ಮ ಸಣ್ಣ ಅಳಿಲು ಸೇವೆ ಸಲ್ಲಿಸಿದಂತಾಗುತ್ತದೆ.

– ವೀರೇಶ ಧೂಪದಮಠ, ಮೈಸೂರು.

ಕನ್ನಡ ಸಾಹಿತ್ಯ ಸಮ್ಮೇಳನ ಅಭೂತಪೂರ್ವ ಯಶಸ್ವಿ

ಮಾನ್ಯರೆ,

ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಭೂತ ಪೂರ್ವ ಯಶಸ್ವಿ ಸಾಹಿತ್ಯ ಸಮ್ಮೇಳನವೆಂದೇ ಹೇಳಬೇಕು. ಒಂದು ಅಂದಾಜಿನ ಪ್ರಕಾರ ಈ ಸಾಹಿತ್ಯ ಸಮ್ಮೇಳನದಲ್ಲಿ ಸುಮಾರು 6 ಲಕ್ಷ ಜನರು ಭಾಗವಹಿಸಿದ್ದರು ಎಂದು ಹೇಳಲಾಗುತ್ತಿದೆ. ಇದು ರಾಜ್ಯದ ಇತಿಹಾಸದಲ್ಲೇ ಮೊದಲು, ಇಷ್ಟು ಜನರಿಗೂ ಊಟಕ್ಕೆ ಯಾವುದೇ ತೊಂದರೆಯಾಗದಂತೆ ವ್ಯವಸ್ಥೆ ಮಾಡಿದ್ದು ಅಚ್ಚರಿ ಮೂಡಿಸಿದೆ. ಈ ಸಮ್ಮೇಳನದ ಯಶಸ್ಸಿಗೆ ಪಕ್ಷಭೇದ ಮರೆತು ಜಿಲ್ಲೆಯ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿ ಸೇರಿದಂತೆ ಸ್ವಯಂ ಸೇವಕರು, ಕೆಲಸ ನಿರ್ವಹಿಸಿದ್ದು ಇಡೀ ಜಿಲ್ಲೆಗೆ ತಂದ ಗೌರವ ಎನ್ನಬೇಕು. ಸಮ್ಮೇಳನಕ್ಕೆ ಆಯ್ಕೆಯಾದ ಅಧ್ಯಕ್ಷರಿಂದ ಹಿಡಿದು ಸಮ್ಮೇಳನದ ಸಮಾರೋಪ ಸಮಾರಂಭದವರೆವಿಗೂ ಯಾವುದೇ ರೀತಿಯ ಗೊಂದಲಕ್ಕೆ ಅವಕಾಶವಿರಲಿಲ್ಲ. ಈ ಸಮ್ಮೇಳನ ಕನ್ನಡ ಸಾಹಿತ್ಯ ಪರಿಷತ್‌ನ ಇತಿಹಾಸದಲ್ಲೇ ಒಂದು ಮೈಲಿಗಲ್ಲು. ಇದಕ್ಕಾಗಿ ಶ್ರಮಿಸಿದ ಎಲ್ಲರಿಗೂ ಅಭಿನಂದನೆಗಳು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ ಮೈಸೂರು

ನೀರಿನ ಸಂಪರ್ಕ ಕಲ್ಪಿಸಿ

ಮಾನ್ಯರೆ,

ಮೈಸೂರು ನಗರ ಬೋಗಾದಿ ಗ್ರಾಮ ವ್ಯಾಪ್ತಿಯಲ್ಲಿರುವ ಮುಡಾ ಅನುಮೋದನೆ ಪಡೆದು ಎಂಎಂಜಿ ಕನ್‌ಸ್ಟ್ರಕ್ಷನ್‌ನವರು (3ನೇ ಹಂತ) 72 ಮನೆಗಳನ್ನು ನಿರ್ಮಿಸಿದ್ದು, ಸದರಿ ಮನೆಗಳಿಗೆ ನೀರಿನ ಸಂಪರ್ಕ ಇಲ್ಲದೆ ಪರದಾಡುವಂತಾಗಿದೆ. ನೀರಿನ ಸಂಪರ್ಕಕ್ಕಾಗಿ ದಿನಾಂಕ 11.8.2021 ರಂದು 14,60,000 ರೂ. ವಾಣಿ ವಿಲಾಸ ನೀರು ಸರಬರಾಜು ಮಂಡಳಿಗೆ ಪಾವತಿಸಲಾಗಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಿವಾಸಿಗಳು ನೀರಿನ ಸಂಪರ್ಕ ಕಲ್ಪಿಸುವಂತೆ ಅರ್ಜಿ ಸಲ್ಲಿಸಿದ್ದು, ಬಡಾವಣೆಯು ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಒಳಪಡುವುದರಿಂದ ಅರ್ಜಿಯನ್ನು ಬೋಗಾದಿ ಪಟ್ಟಣ ಪಂಚಾಯಿತಿಗೆ ವರ್ಗಾಯಿಸಿದ್ದಾರೆ. ಆದರೆ ಬೋಗಾದಿ ಪಟ್ಟಣ ಪಂಚಾಯಿತಿ ಕಚೇರಿಯ ಅಧಿಕಾರಿಗಳು ನಮ್ಮ ಮನವಿಗೆ ಸ್ಪಂದಿಸುತ್ತಿಲ್ಲ. ದಯವಿಟ್ಟು ಈ ಬಡಾವಣೆಗೆ ಸಂಬಂಧಪಟ್ಟ ವಿಧಾನಪರಿಷತ್ ಸದಸ್ಯರು ಮತ್ತು ಕಾರ್ಯಪಾಲಕ ಇಂಜಿನಿಯರ್ ತ್ವರಿತವಾಗಿ ಸಮಸ್ಯೆ ಬಗೆಹರಿಸಬೇಕೆಂದು ಈ ಮೂಲಕ ಮನವಿ.

ಸದರಿ ವ್ಯಾಪ್ತಿಯಲ್ಲಿ ಇರುವ ಮನೆಗಳಿಗೆ ಬೋರ್‌ವೆಲ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದ್ದೂ ನೀರಿನ ಗುಣಮಟ್ಟ ಅತೀ ಲವಣಾಂಶದಿಂದ ಕೂಡಿದ್ದು ಕುಡಿಯಲು ಯೋಗ್ಯವಾಗಿರುವುದಿಲ್ಲವೆಂದು ದೃಢೀಕರಣ ಪತ್ರ ಪಡೆದಿದ್ದು, ತುಂಬಾ ಕಳಪೆ ಮಟ್ಟದ್ದಾಗಿರುತ್ತದೆ.

– ನಿವಾಸಿಗಳು, ಎಂಎಂಜಿ ಕನ್‌ಸ್ಟ್ರಕ್ಷನ್, 3ನೇ ಹಂತ, ಮೈಸೂರು.

ಆಹಾರ ಪಡಿತರ ಅಧಿಕಾರಿಗಳ ಗಮನಕ್ಕೆ

ಮಾನ್ಯರೆ,

ಸರ್ಕಾರದಿಂದ ಬಿಪಿಎಲ್ ಕಾರ್ಡ್ ಇದ್ದವರಿಗೆ ಪಡಿತರ ನೀಡುತ್ತಿರುವುದು ಸರಿಯಷ್ಟೆ, ಆದರೆ ಪಡಿತರ ಪಡೆಯಲು ವಯಸ್ಸಾದ ದಂಪತಿಗಳಿದ್ದರೆ ಅಥವಾ ಒಬ್ಬರೆ ಇದ್ದರೆ ಅಂತಹ ಪಡಿತರದಾರರುಗಳ 10 ಬೆರಳುಗಳ ರೇಖೆಗಳು ಸವೆದು ಹೋಗಿ ಬಯೋಮೆಟ್ರಿಕ್‌ನಲ್ಲಿ ರೇಖೆ ಬರದಿದ್ದಲ್ಲಿ ಪಡಿತರ ವಿತರಣೆದಾರರು ಪಡಿತರವನ್ನು ನೀಡುವುದಿಲ್ಲ. ಮತ್ತು ಹಿಂದೆ ಇಂತಹ ಪಡಿತರದಾರರಿಗೆ ನೋಂದಣಿಯಾದ ಮೊಬೈಲ್ ಸಂಖ್ಯೆಯಿಂದ ಓಟಿಪಿ ಪಡೆದು ಅಥವಾ ಕಣ್ಣಿನ ರೇಖಾಚಿತ್ರ ಬಯೋಮೆಟ್ರಿಕ್ ನೋಡಿ ಪಡಿತರವನ್ನು ನೀಡಲಾಗುತ್ತಿತ್ತು. ಅಂತಹ ಪಡಿತರದಾರರು ಆಹಾರ ನಿರೀಕ್ಷಕರಿಂದ ಡೈರೆಕ್ಟ್ ಮಾಡಿಸಿಕೊಂಡು ಬನ್ನಿ ನಂತರ ಪಡಿತರ ನೀಡುತ್ತೇವೆ ಎಂದು ಹೇಳುತ್ತಾರೆ.

ಆಹಾರ ಪಡಿತರ ನಿರೀಕ್ಷಕರ ಕಚೇರಿಗೆ ಹೋಗಿ ಎಷ್ಟೋ ಜನ ಓಟಿಪಿ ಅಥವಾ ಡೈರೆಕ್ಟ್ ಮಾಡಿಕೊಳ್ಳಲು ಅರ್ಜಿಯನ್ನು ನೀಡಿದ್ದಾರೆ. ಆದ್ದರಿಂದ ವೃದ್ಧ ಪಡಿತರದಾರರಿಗೆ ಹಿಂದಿನಂತೆಯೇ ಕೈ ಬೆರಳುಗಳ ಬಯೋಮೆಟ್ರಿಕ್ ಬರದಿದ್ದ ಪಕ್ಷದಲ್ಲಿ ನೋಂದಣಿಯಾದ ಮೊಬೈಲ್‌ನಿಂದ ಓಟಿಪಿ ಪಡೆದು ಆಹಾರ ಪಡಿತರವನ್ನು ನೀಡುವಂತೆ ಆದೇಶಿಸಲಿ ಅಥವಾ ವೃದ್ಧರ ಅರ್ಜಿಗಳನ್ನು ಪರಿಗಣಿಸಿ ಒಟ್ಟಿನಲ್ಲಿ ವೃದ್ಧರಿಗೆ ಪಡಿತರ ವಿತರಣೆ ಆಗುವಂತೆ ಆಹಾರ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ಈ ಮೂಲಕ ಮನವಿ.

–ಎಂ.ಡಿ. ನಟರಾಜ್, ಸುಬ್ರಹ್ಮಣ್ಯ ನಗರ, ಹೆಬ್ಬಾಳು, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಹೆಮ್ಮನಹಳ್ಳಿಯ ಶ್ರೀ ಕೃಷ್ಣ ಗಾರುಡಿ

ನಾಟಕವು ದೈವದತ್ತವಾಗಿ ಬಂದ ಕಲೆ ಎಂಬುದು ಭಾರತೀಯರ ನಂಬಿಕೆ. ದೇವತೆಗಳು ಕೇವಲ ಕಿವಿಗೆ ಆನಂದವನ್ನು ನೀಡುತ್ತಿದ್ದ ವೇದಗಳನ್ನು ಕೇಳಿ ಸಾಕಾಗಿ ಬ್ರಹ್ಮನನ್ನು ಬೇಡಿಕೊಂಡರಂತೆ–

ಕ್ರೀಡನೀಯಕಮಿಚ್ಛಾಮೋ ದೃಶ್ಯಂ ಶ್ರವ್ಯಂ ಚ ಯದ್ಭವೇತ್ (ದೃಶ್ಯವೂ ಶ್ರವ್ಯವೂ ಆಗಿರುವ ಮನೋರಂಜನೆಯ ಸಾಧನವು ನಮಗೆ ಬೇಕು.) ಅವರ ಪ್ರಾರ್ಥನೆಗೆ ಓಗೊಟ್ಟು ಬ್ರಹ್ಮನು ನಾಟಕವನ್ನು ಸೃಷ್ಟಿಸಿ ಭರತಮುನಿಗೆ ಅನುಗ್ರಹಿಸಿದನು ಎಂಬ ಕಥೆ ಭರತ ನಾಟ್ಯ ಶಾಸ್ತ್ರದಲ್ಲಿದೆ. ನಾಟಕವೇ ರಸಾನುಭವದ ಮುಖ್ಯ ಸೋಪಾನ.

ಇದರಲ್ಲಿ ಕಥೆಯನ್ನು ತಿಳಿಸುವ ಪಾಠ್ಯ (Dialogue), ಜನರನ್ನು ರಂಜಿಸುವ ಸಂಗೀತ, ನಟರು ಮತ್ತು ನಟಿಯರು ಮಾಡುವ ಅಭಿನಯ. ಶೃಂಗಾರ–ಹಾಸ್ಯಾದಿ ರಸಗಳು ಎಂಬ ನಾಲ್ಕು ಅಂಶಗಳೂ ಮುಖ್ಯ.

ಜಗ್ರಾಹ ಪಾಠ್ಯಂ ಋಗ್ವೇದಾತ್ ಸಾಮಭ್ಯೋ ಗೀತಮೇವ ಚ।
ಯಜುರ್ವೇದಾದಭಿನಯಾನ್ ರಸಾನ್ ಅಥರ್ವಣಾದಪಿ ॥

ಋಗ್ವೇದದಿಂದ ಪಾಠ್ಯವನ್ನೂ, ಸಾಮವೇದದಿಂದ ಹಾಡುಗಳನ್ನೂ, ಯಜುರ್ವೇದದಿಂದ ಅಭಿನಯವನ್ನೂ, ಅಥರ್ವವೇದದಿಂದ ರಸಗಳನ್ನೂ ಸಂಗ್ರಹಿಸಿ ಬ್ರಹ್ಮನು ನಾಟಕವನ್ನು ಸೃಷ್ಟಿಸಿದನಂತೆ. ಭರತನು ಪ್ರದರ್ಶಿಸಿದ ಮೊದಲನೆಯ ನಾಟಕ ಲಕ್ಷ್ಮೀ ಸ್ವಯಂವರ ಎಂದು ಹೇಳುತ್ತಾರೆ. ಭಾರತ ದೇಶದ ಪರಂಪರೆಯಲ್ಲಿ ಭಾಸ, ಕಾಳಿದಾಸ, ಶ್ರೀಹರ್ಷ, ಭವಭೂತಿ ಮುಂತಾದ ನಾಟಕಕಾರರು ಹೆಚ್ಚು ಪ್ರಸಿದ್ಧರಾಗಿದ್ದಾರೆ. ಅವರು ರಚಿಸಿದ ನಾಟಕಗಳ ಅಧ್ಯಯನ ಮತ್ತು ಪ್ರದರ್ಶನ ಇಂದೂ ಅಲ್ಲಲ್ಲಿ ನಡೆಯುತ್ತಿರುವುದು ಅವುಗಳ ಉತ್ಕೃಷ್ಟತೆಗೆ ಸಾಕ್ಷಿಯಾಗಿದೆ. ಸಂಸ್ಕೃತ ನಾಟಕಗಳು ಎಷ್ಟು ರಚಿತವಾಗಿದ್ದವೆಂದರೆ ಇಂದಿಗೂ ಐನೂರಕ್ಕಿಂತ ಹೆಚ್ಚು ಉಪಲಭ್ಯವಾಗಿವೆ.

ಕನ್ನಡದ ಕವಿಗಳು ಚಂಪೂಕಾವ್ಯಗಳನ್ನೂ, ಷಟ್ಪದೀಕಾವ್ಯಗಳನ್ನೂ ಬರೆದರು. ಆದರೆ ನಾಟಕ ರಚನೆಗೆ ಕೈ ಹಾಕಲಿಲ್ಲವೇಕೆಂಬುದು ಸೋಜಿಗ. ಹದಿನೆಂಟನೆಯ ಶತಮಾನದವರೆಗೆ ಕನ್ನಡದಲ್ಲಿ ರಚಿತವಾದ ನಾಟಕವು ದೊರಕಿಲ್ಲ. ಜನರು ನಾಟಕಗಳನ್ನು ಆಡುತ್ತಿದ್ದು, ನೋಡುತ್ತಿದ್ದರು. ಆದರೆ ಅವುಗಳ ಪಾಠ್ಯಗಳು ಈಗ ಉಳಿದಿಲ್ಲ ಎನ್ನಬೇಕು. ನಾಟಕ ಚಟುವಟಿಕೆ ಕರ್ನಾಟಕದಲ್ಲಿ ಸತತವಾಗಿ ನಡೆಯುತ್ತಲೇ ಇತ್ತು. ಮೊದಲು ಪೌರಾಣಿಕ ನಾಟಕಗಳಿಗೆ ಪ್ರಾಧಾನ್ಯವಿತ್ತು. ಅನಂತರದಲ್ಲಿ ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳು ಜನರನ್ನು ಆಕರ್ಷಿಸಿದುವು. ಅನೇಕ ಕಂಪನಿಗಳು ಸ್ಥಾಪಿತವಾಗಿ ಜನರಿಗೆ ಮನೋರಂಜನೆಯನ್ನೂ, ಮಾರ್ಗದರ್ಶನವನ್ನೂ ನೀಡಿದುವು. ನಾಟಕಾಭಿನಯ ಕೆಲವರಿಗೆ ವೃತ್ತಿಯಾಗಿದ್ದರೆ ಇನ್ನು ಕೆಲವರಿಗೆ ಹವ್ಯಾಸವಾಗಿತ್ತು.

ಬೆಳ್ಳಾವೆ ನರಹರಿ ಶಾಸ್ತ್ರಿಗಳು

ಕನ್ನಡ ನಾಟಕಗಳ ಬಗೆಗೆ ಮಾತನಾಡುವಾಗ ಬೆಳ್ಳಾವೆ ನರಹರಿ ಶಾಸ್ತ್ರಿಗಳನ್ನು ಮರೆಯುವುದು ಸಾಧ್ಯವಿಲ್ಲ. 21.09.1882 ರಿಂದ 21.06.1961 ಅವರ ಜೀವಿತ ಕಾಲ. ಶಾಲೆಗಳಲ್ಲಿ ಅಧ್ಯಾಪಕರೂ ಪರಿವೀಕ್ಷಕರೂ ಆಗಿದ್ದ ಅವರು ಸಾಹಿತ್ಯ–ಸಂಗೀತಗಳಲ್ಲಿ ಪ್ರವೀಣರಾಗಿದ್ದರು. ಸುಪ್ರಸಿದ್ಧ ಗುಬ್ಬಿವೀರಣ್ಣನವರ ಕಂಪನಿಯ ನಾಟಕಗಳಿಗೆ ಅವರು ಸಾಹಿತ್ಯವನ್ನು ರಚಿಸಿದರು. ಸುಮಾರು ಮೂವತ್ತು ನಾಟಕಗಳನ್ನು ಅವರು ಬರೆದು ಕನ್ನಡ ನಾಟಕ ಸಾಹಿತ್ಯಕ್ಕೆ ಅಪಾರ ಕೊಡುಗೆಯನ್ನು ಕೊಟ್ಟಿದ್ದಾರೆ. ಇಪ್ಪತ್ತನೆಯ ಶತಮಾನದಲ್ಲಿ ಚಲನಚಿತ್ರ (ಸಿನಿಮಾ) ಯುಗ ಆರಂಭಗೊಂಡಿತು. ಕನ್ನಡದ ಮೊದಲನೆಯ ವಾಕ್ಚಿತ್ರ ಸತೀ ಸುಲೋಚನಾ ಎಂಬುದಕ್ಕೂ ಸಾಹಿತ್ಯವನ್ನು ರಚಿಸಿದವರು ನರಹರಿಶಾಸ್ತ್ರಿಗಳೇ. ಅವರೇ ಬರೆದ ಸದಾರಮೆ, ಹೇಮರೆಡ್ಡಿ ಮಲ್ಲಮ್ಮ ಮುಂತಾದ ನಾಟಕಗಳು ಸಿನಿಮಾಗಳೂ ಆಗಿ ಜನಪ್ರಿಯತೆಯನ್ನು ಗಳಿಸಿದುವು. ಪೌರಾಣಿಕ ಕಥೆಗಳನ್ನು ನಾಟಕೀಕರಿಸಿದಾದಲೂ ಶಾಸ್ತ್ರಿಗಳು ತಮ್ಮ ಕಲ್ಪನಾಶಕ್ತಿಯಿಂದ ಹೊಸ ಅಂಶಗಳನ್ನು ತುಂಬಿ ನಾವೀನ್ಯವನ್ನು ತರುತ್ತಿದ್ದರು.

ಶ್ರೀ ಕೃಷ್ಣಗಾರುಡಿ

ಬೆಳ್ಳಾವೆ ನರಹರಿಶಾಸ್ತ್ರಿಗಳಿಗೆ ರಾಜಮನ್ನಣೆ ದೊರಕಿ ಆಸ್ಥಾನ ವಿದ್ವಾನ್ ಪದವಿ ಅವರನ್ನು ಅಲಂಕರಿಸಿತ್ತು. ಕರ್ನಾಟಕ ಕವಿಕೇಸರಿ ಎಂಬ ಪ್ರಶಸ್ತಿಗೂ ಅವರು ಭಾಜನರಾಗಿದ್ದರು. ಅವರಿಗೆ ಇಷ್ಟ ದೇವತೆ ಶ್ರೀ ಕೃಷ್ಣ. ಅವನ ಬಗೆಗೆ ಅವರು ರಚಿಸಿದ ನಾಟಕಗಳು – ಶ್ರೀ ಕೃಷ್ಣಲೀಲೆ, ಶ್ರೀ ಕೃಷ್ಣಗಾರುಡಿ, ಶ್ರೀ ಕೃಷ್ಣ ಪಾರಿಜಾತ, ಶ್ರೀ ಕೃಷ್ಣ ಭಾಮಾ ಪರಿಣಯ ಇತ್ಯಾದಿ. ಇದರಲ್ಲಿ ಐದು ಅಂಕಗಳಿವೆ. ಒಂದೊಂದು ಅಂಕದಲ್ಲೂ ಹಲವು ದೃಶ್ಯಗಳಿವೆ.

ಮಹಾಭಾರತ ಯುದ್ಧಾನಂತರ ಪಾಂಡವರಿಗೇ ಸಮಸ್ತ ರಾಜ್ಯವು ದೊರಕಿ ಧರ್ಮರಾಜನಿಗೆ ಪಟ್ಟಾಭಿಷೇಕ ಜರುಗುವ ಸಂದರ್ಭದಿಂದ ನಾಟಕದ ಆರಂಭ. ಸೂತ್ರಧಾರನ ಹಾಡಾದ ಮೇಲೆ ಮೊದಲನೆಯ ದೃಶ್ಯ ರಾಜಾಸ್ಥಾನದ ಗಾಂಭೀರ್ಯಕ್ಕೆ ಅನುಗುಣವಾಗಿ ವೈತಾಳಿಕರು, ಎಂದರೆ ಹೊಗಳು ಭಟರು ಸಂಸ್ಕೃತಭೂಯಿಷ್ಠವಾದ ಭಾಷೆಯಲ್ಲಿ ಪರಾಕನ್ನು ಹೇಳುತ್ತಾರೆ.

"ಜಯ ದಶ ದಿಗಂತ ವಿಶ್ರಾಂತ ಧವಳ ಕೀರ್ತಿ ವಿಭ್ರಾಜಮಾನ, ಪ್ರತ್ಯಕ್ಷ ಧರ್ಮ ದೇವತಾ ಸ್ವರೂಪ, ಸಕಲ ಸದ್ಗುಣ ಕಲಾಪ, ವೈರಿಕುಲವೇಪ, ಧರ್ಮರಾಜತ್‌ನು ಸಂಜಾತ, ಪಾಂಡುರಾಜ ಗರ್ಭಾಂಬುಧಿಪಾರಿಜಾತ, ಚಂದ್ರವಂಶಪಯೋನಿಧಿ ರಾಕಾಸುಧಾಕರ, ವಿಜಯ ಸಾಮ್ರಾಜ್ಯ ಲಕ್ಷ್ಮೀ ಮನೋಹರ, ರಾಜಾಧಿರಾಜ ಭಾರತ ಚಕ್ರವರ್ತಿ ಸಾರ್ವಭೌಮ ಶ್ರೀ ಯುಧಿಷ್ಠಿರ ರಾಜೇಂದ್ರ ಜಯ ಪರಾಕ್ !"

ಇಲ್ಲಿ ಶಾಸ್ತ್ರಿಗಳ ಸಂಸ್ಕೃತ ಭಾಷಾಪಾಂಡಿತ್ಯವೂ ವ್ಯಕ್ತವಾಗುವುದು. ಮಹಾಭಾರತದಲ್ಲಿಲ್ಲದ, ಆದರೆ ಈ ನಾಟಕದಲ್ಲಿರುವ ವಿಶೇಷವೇನೆಂದರೆ ಪಾಂಡವರಿಗೆ ರಾಜ್ಯಾಧಿಕಾರಗಳನ್ನು ಹಂಚಬೇಕಾದಾಗ ಶ್ರೀ ಕೃಷ್ಣನು ಹೇಳುವ ಮಾತು. ಅದು ಹೀಗಿದೆ –

"ಧರ್ಮಪುತ್ರ, ಧರ್ಮಸ್ವರೂಪನಾಗಿಯೂ ಪಾಂಡವಾಗ್ರಜನಾಗಿಯೂ ಇರುವ ನೀನು ರಾಜಾಧಿರಾಜನೆನಿಸಿ ಧರ್ಮದಿಂದ ರಾಜ್ಯವನ್ನು ಪರಿಪಾಲಿಸು. ಭೀಮಸೇನ ಇನ್ನು ಮುಂದೆ ಪರಾಕ್ರಮಶಾಲಿಯಾದ ನೀನು ಚತುರಂಗ ಬಲವನ್ನು ಉಚಿತ ರೀತಿಯಿಂದ ನೋಡಿಕೊಳ್ಳುತ್ತ ಸೈನ್ಯ ನಾಯಕರ ಮೇಲ್ವಿಚಾರಣೆ ಮಾಡುತ್ತ ರಾಜ್ಯಕ್ಕೆ ಶತ್ರು ಭಯವಿಲ್ಲದಂತೆ ಎಚ್ಚರದಿಂದ ನೋಡಿಕೊಂಡು ಧರ್ಮಪುತ್ರನಿಗೆ ಸಹಾಯಕನಾಗಿರು. ಧರ್ಮಶೀಲನಾದ ಫಲ್ಗುಣ, ನೀನು ಅತಿಥಿ ಅಭ್ಯಾಗತರ ಆದರಣೆ, ಗೋಬ್ರಾಹ್ಮಣತ್ಕಾರ, ದೀನಜನೋದ್ಧಾರ, ಧಾನ ಧರ್ಮ ವಿಚಾರ, ಇವುಗಳನ್ನು ಗಮನಿಸಿ ಧರ್ಮರಕ್ಷಣದಲ್ಲಿ ಯುಧಿಷ್ಠಿರನಿಗೆ ಸಹಾಯಕನಾಗಿರು. ಮೇಧಾವಿಗಳೂ ರಾಜತಂತ್ರನಿಪುಣರೂ ಆದಿ ನಕುಲಸಹದೇವರಿರಾ, ನೀವಿಬ್ಬರೂ ಧರ್ಮನಂದನಿಗೆ ಕಾಲೋಚಿತವಾಗಿ ಮಂತ್ರಾ ಲೋಚನೆಗಳನ್ನು ಹೇಳುತ್ತಾ ಆತನ ಸನ್ನಿಧಿಯಲ್ಲಿ ಮಂತ್ರಿಗಳಾಗಿರಿ"

ಇದರಿಂದ ಭೀಮಾರ್ಜುನರಿಗೆ ತಮಗೆ ಯೋಗ್ಯವಾದ ಸ್ಥಾನ ಸಿಕ್ಕಲಿಲ್ಲ ಎಂಬ ಅಸಮಾಧಾನ ಉಂಟಾಗುವುದು. ಅವರು ಉದ್ಧತರಾಗಿ ನಡೆದುಕೊಳ್ಳುವುದು, ಅವರ ಅಸೂಯೆಯ ಶಮನವನ್ನು ಮಾಡಲು ಮತ್ತು ಅವರ ಅಹಂಕಾರವನ್ನು ತಗ್ಗಿಸಲು ನಾರದರು ಕೃಷ್ಣನನ್ನು ಕೋರುವುದು, ಕೃಷ್ಣನು ಬಲರಾಮನ ಸಹಕಾರದಿಂದ ಗಾರುಡಿಗ ರೂಪವನ್ನು ಧರಿಸಿ ಅವರಿಬ್ಬರ ದರ್ಪ ನಾಶನವನ್ನು ಮಾಡುವುದು ಈ ನಾಟಕದ ಸಾರಾಂಶ.

ಆ ಕಾಲದಲ್ಲಿ ನಾಟಕವೆಂದರೆ ಸಂಗೀತಕ್ಕೆ ಪ್ರಾಧಾನ್ಯ. ಹಾಡು ಜೀವಾಳ. ಹಾಡಲು ಬಾರದವನು ನಟನಾಗಲು ಅನರ್ಹ ಎಂಬ ಭಾವನೆ ಜನರಲ್ಲಿತ್ತು. ಅದಕ್ಕೆ ಅನುಗುಣವಾಗಿ ನರಹರಿಶಾಸ್ತ್ರಿಗಳು ತುಂಬ ಹಾಡುಗಳನ್ನು ತಾವೇ ರಚಿಸಿ ಸೇರಿಸಿದ್ದಾರೆ. ಅವನ್ನು ಯಾವ ರಾಗದಲ್ಲಿ ಯಾವ ತಾಳದಲ್ಲಿ ಹಾಡಬೇಕು ಎಂಬುದನ್ನು ನಿರ್ದೇಶಿಸಿದ್ದಾರೆ. ಒಂದು ಉದಾಹರಣೆ – (ನಾರದನ ಹಾಡು).

ರಾಗ ಬೇಹಾಗ್– ಆದಿತಾಳ
ಪಾಹಿ ಭುವನಭರಣ । ಶರಣ । ಪರಮಪಾವನ।
ಭವ ಭಯಹರಣ । ಪಾಹಿ ರಮಾರಮಣ।
ಸಕಲ ಭುವನ ಸುಖವಿತರಣ ನಿಪುಣ।
ಸುಕರ ಮಹಿಮ ನವಜಲಧರಸುಷಮ।
ಪಾಹಿ ರಮಾರಮಣ।
ಯದುಕುಲಾಂಬುಧಿ ಲಲಿತ ಹಿಮಕರ
ಮಧುರವೇಣುರವ ಮೋದಿತ ಭುವನ
ಪಾಹಿ ರಮಾರಮಣ॥

ಈ ನಾಟಕವನ್ನು ಸಂಪೂರ್ಣವಾಗಿ ಶ್ರೀಮಾನ್ ಎಚ್.ಎಸ್. ಗೋವಿಂದೇಗೌಡರು ಸಂರಕ್ಷಿಸಿ ಬೆಳಕಿಗೆ ತಂದಿರುವುದಕ್ಕಾಗಿ ಅವರು ಅಭಿನಂದನಾರ್ಹರು.

ಮೈಸೂರಿಗೆ 9 ಕಿಲೋಮೀಟರ್ ದೂರದಲ್ಲಿ ಭೋಗಾದಿ ರಸ್ತೆಯಲ್ಲಿರುವ ಹೆಮ್ಮನಹಳ್ಳಿಯ ಶ್ರೀ ಮಹಾಲಿಂಗೇಶ್ವರ ದೇವಾಲಯ ಕೃಪಾಪೋಷಿತ ನಾಟಕ ಮಂಡಳಿಯ ಕಲಾವಿದರು ಕೃಷ್ಣಗಾರುಡಿ ನಾಟಕವನ್ನು ಅಭ್ಯಾಸ ಮಾಡಿ 29.12.2024 ರಂದು ಪ್ರಸ್ತುತಪಡಿಸಲಿದ್ದಾರೆ. ಅದೇ ಹಳ್ಳಿಯ ದೊಡ್ಡಮ್ಮತಾಯಿ ದೇವಸ್ಥಾನದ ಎದುರು ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ನಮ್ಮ ಹಳ್ಳಿಗಳಲ್ಲಿ ನಾಟಕ ಸಂಸ್ಕೃತಿ ಜೀವಂತವಾಗಿದೆ ಎನ್ನಲು ಇದು ಸಾಕ್ಷಿ. ಮತ್ತೆ ಬರುವ ಜನವರಿ ತಿಂಗಳಿನ ಕೊನೆಯ ವಾರದಲ್ಲಿ ಸುತ್ತೂರಿನಲ್ಲಿ ಜರುಗಲಿರುವ ಜಾತ್ರೆಯಲ್ಲಿ ಈ ನಾಟಕದ ಇನ್ನೊಂದು ಪ್ರದರ್ಶನ ನಡೆಯುವ ಸಂಭವವಿದೆ. ಇದು ಶ್ಲಾಘನೀಯ. ಈ ನಾಟಕವನ್ನು ಸಮಗ್ರವಾಗಿ ಪ್ರದರ್ಶಿಸಲು ಆರೇಳು ಘಂಟೆಗಳಾಗಬಹುದು. ಹಾಡುಗಳು, ದೀರ್ಘ ಸಂಭಾಷಣೆಗಳು, ಅಭಿನಯ ದೀರ್ಘ ಕಾಲವನ್ನು ಅಪೇಕ್ಷಿಸುತ್ತವೆ. ಇಷ್ಟೆಲ್ಲವನ್ನೂ ಅಭ್ಯಾಸ ಮಾಡುವುದು ಸುಲಭವಲ್ಲ. ಕಲಿಸುವ, ತಪ್ಪುಗಳನ್ನು ತಿದ್ದುವ ಗುರುಗಳ ಶ್ರಮವನ್ನು ವರ್ಣಿಸಲಾಗದು. ಹಳ್ಳಿಯ ಆ ಕಲಾವಿದರ ಶ್ರದ್ಧೆ ಮೆಚ್ಚುಗೆಗೆ ಅರ್ಹವಾಗಿದೆ. ನಾಟಕದ ಸಂಭಾಷಣೆಯ ಎಷ್ಟೋ ಪದಗಳ ಅರ್ಥವನ್ನು ತಿಳಿದುಕೊಳ್ಳುವುದು ಕಷ್ಟವಾದರೂ ಅವುಗಳನ್ನು ಕಂಠಸ್ಥವನ್ನಾಗಿ ಮಾಡಿಕೊಂಡು ಅವುಗಳಿಗೆ ಅನುಗುಣವಾದ ಅಭಿನಯವನ್ನು ಗುರುಗಳಿಂದ ಕಲಿತು ನೂರಾರು ಜನರ ಮುಂದೆ ಪ್ರದರ್ಶಿಸಲು ಅವರು ತೋರಿಸುವ ಉತ್ಸಾಹ ಅಭಿನಂದನೀಯ.

'ದೇವಾನಾಮಿದಮಾಮನಂತಿ ಮುನಯಃ
ಶಾಂತಂ ಕ್ರತುಂ ಚಾಕ್ಷುಷಂ'
'ನಾಟಕವೆಂಬುದು ದೇವತೆಗಳಿಗೆ ಅರ್ಪಿಸುವ ಚಾಕ್ಷುಷ ಯಜ್ಞ'

ಎಂದು ಕಾಳಿದಾಸನು ಹೇಳಿದ್ದಾನೆ. ಈ ಕಾಲದಲ್ಲಿ ಎಲ್ಲಾ ಏರ್ಪಾಡು ಮಾಡಿಕೊಂಡು ನಾಟಕವನ್ನು ಪ್ರದರ್ಶಿಸುವುದು ಯಜ್ಞ ಮಾಡುವಷ್ಟೇ ಶ್ರಮದಾಯಕ. ಅದನ್ನು ಮಾಡುತ್ತಿರುವ ಹೆಮ್ಮನಹಳ್ಳಿಯ ಕಲಾವಿದರಿಗೆ ನಮೋ ನಮೋ.

ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ದೇವಾಲಯಕ್ಕೆ ಕೋಟಿ ಅನುದಾನ; ಪರಿಷತ್ ಸದಸ್ಯ ಡಾ.ಯತೀಂದ್ರ ಭರವಸೆ



ಮೈಸೂರು ತಾಲೂಕು ಜಯಪುರ ಗ್ರಾಮದ ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಶಾಸಕ ಜಿ.ಟಿ.ದೇವೇಗೌಡರ ಜೊತೆ ದೇವಾಲಯ ಅಭಿವೃದ್ಧಿಯ ಬಗ್ಗೆ ಚರ್ಚಿಸಿದರು.

ಮೈಸೂರು: ಮೈಸೂರು ತಾಲೂಕು ಜಯಪುರ ಗ್ರಾಮದ ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ದೇವಾಲಯಕ್ಕೆ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಭೇಟಿ ನೀಡಿ ದೇವರ ದರ್ಶನ ಪಡೆದರು. ಈ ವೇಳೆ ದೇವಾಲಯ ವತಿಯಿಂದ ಅರ್ಚಕರು ಯತೀಂದ್ರ ಅವರಿಗೆ ಹಾರ ಹಾಕಿ, ಆಶೀರ್ವದಿಸಿದರು.

ನಂತರ ಶಾಸಕ ಜಿ.ಟಿ.ದೇವೇಗೌಡರ ಜೊತೆ ಯತೀಂದ್ರ ಸಿದ್ದರಾಮಯ್ಯನವರು ದೇವಾಲಯ ಅಭಿವೃದ್ಧಿಯ ಬಗ್ಗೆ ಚರ್ಚಿಸಿದರು. ಮಹದೇಶ್ವರ ದೇವಾಲಯ ಇತಿಹಾಸ ಪ್ರಸಿದ್ಧ ದೇವಾಲಯ. ವರ್ಷಕ್ಕೊಮ್ಮೆ ಅದ್ಧೂರಿ ಜಾತ್ರೆ ನಡೆಯುತ್ತದೆ. ಲಕ್ಷಾಂತರ ಜನ ಸೇರುತ್ತಾರೆ. ದೇವಾಲಯಕ್ಕೆ ಬೃಹತ್ ಸಮುದಾಯ ಭವನ, ರಸ್ತೆ, ಕಾಂಪೌಂಡ್, ವಿದ್ಯುತ್ ವ್ಯವಸ್ಥೆ ಸೇರಿದಂತೆ ಹಲವು ಕೆಲಸಗಳು ಬಾಕಿ ಇವೆ ಎಂದು ಹೇಳಿದರು.

ನಂತರ ಮಾತನಾಡಿದ ಯತೀಂದ್ರ ಸಿದ್ದರಾಮಯ್ಯ, ಮುಖ್ಯಮಂತ್ರಿಗಳ ಜೊತೆ ಮಾತನಾಡಿ ದೇವಾಲಯಕ್ಕೆ 10 ಕೋಟಿ ವಿಶೇಷ ಅನುದಾನ ಕೊಡಿಸಲಾಗುವುದು. ಕಾಮಗಾರಿಗಳ ಎಸ್ಟಿಮೇಟ್ ನೀಡಿ, ತ್ವರಿತವಾಗಿ ಅನುದಾನ ಒದಗಿಸಿಕೊಡಲಾಗುವುದು ಎಂದರು. ಈ ವೇಳೆ ಶಾಸಕ ರವಿಶಂಕರ್, ಜಯಪುರ ವ್ಯಾಪ್ತಿಯ ಮುಖಂಡರಾದ ವಕೀಲರಾದ ದಾರಿಪುರ ಬಸವಣ್ಣ, ಬರಡನಪುರ ಬಸವಣ್ಣ, ನಾಗರಾಜು, ಡೇರಿ ಬಸವಣ್ಣ, ದೊಡ್ಡಹುಂಡಿ ಪುಟ್ಟಬಸವೇಗೌಡ, ಮಾವಿನಹಳ್ಳಿ ರಾಮೇಗೌಡ, ಹಾರೋಹಳ್ಳಿ ಸುರೇಶ್‌ಕುಮಾರ್, ಮೂಗನಾಯಕ, ಶಂಬಪ್ಪ, ಜವರನಾಯಕ, ಕೋಟೆಹುಂಡಿ ಮಹದೇವು, ದೊಡ್ಡ ಸಿದ್ದಪ್ಪಾಜಿಚಾರಿ ಜಯಪುರ, ಬರಡನಪುರ ಗ್ರಾಮಸ್ಥರು ಹಾಜರಿದ್ದರು.

ಸಂಧ್ಯಾ ಥಿಯೇಟರ್ ಕಾಲ್ತುಳಿತ ಪ್ರಕರಣಕ್ಕೆ ಬಿಗ್ ಟ್ವಿಸ್ಟ್!

ಅಲ್ಲು ಅರ್ಜುನ್ ವಿಚಾರಣೆ; ಪ್ರಮುಖ ಆರೋಪಿ ಬಂಧನ

ಹೈದರಾಬಾದ್: ಸಂಧ್ಯಾ ಥಿಯೇಟರ್ ಕಾಲ್ತುಳಿತ ಘಟನೆಯ ಪ್ರಮುಖ ಶಂಕಿತನನ್ನು ಹೈದರಾಬಾದ್ ಪೊಲೀಸರು ಬಂಧಿಸಿದ್ದಾರೆ. ಡಿಸೆಂಬರ್ 4ರಂದು ನಡೆದ ಕಾಲ್ತುಳಿತದ ಪ್ರಮುಖ ಆರೋಪಿ ಬೌನ್ಸರ್ ಆಂಟೋನಿ ಎಂದು ಗುರುತಿಸಲಾಗಿದೆ. ಬೌನ್ಸರ್‌ಗಳಿಗೆ ಸಂಘಟಕನಾಗಿ ಕೆಲಸ ಮಾಡುತ್ತಿದ್ದ ಆಂಟೋನಿ, ಘಟನೆಯ ದುಷ್ಕರ್ಮಿ ಎಂದು ಪೊಲೀಸರು ಗುರುತಿಸಿದ್ದಾರೆ. ನಗರದಲ್ಲಿ ಎಲ್ಲೆಲ್ಲಿ ಕಾರ್ಯಕ್ರಮ ನಡೆದರೂ ಆಂಟೋನಿ ಬೌನ್ಸರ್‌ಗಳನ್ನು ಆಯೋಜಿಸುತ್ತಿದ್ದನು ಎಂದು ಪೊಲೀಸರು ತಿಳಿಸಿದ್ದಾರೆ.



ಡಿಸೆಂಬರ್ 4ರಂದು ಸಂಧ್ಯಾ ಥಿಯೇಟರ್‌ನಲ್ಲಿ ನಡೆದ ಪುಷ್ಪ 2 ಪ್ರೀಮಿಯರ್ ಶೋನಲ್ಲಿ, ನಾಯಕ ಅಲ್ಲು ಅರ್ಜುನ್ ಆಗಮನದ ಸಮಯದಲ್ಲಿ ಆಂಟೋನಿ ಬೌನ್ಸರ್‌ಗಳನ್ನು ವ್ಯವಸ್ಥೆ ಮಾಡಿದ್ದರು. ಘಟನೆಗೆ ಬೌನ್ಸರ್‌ಗಳ ಉತ್ಸಾಹವೂ ಪ್ರಮುಖ ಕಾರಣ ಎಂದು ಎರಡು ದಿನಗಳ ಹಿಂದೆ ಪೊಲೀಸರು ಬಹಿರಂಗಪಡಿಸಿದ್ದರು. ಇದರ ಬೆನ್ನಲ್ಲೇ ಬೌನ್ಸರ್ ಆಂಟೋನಿಯನ್ನು ಈ ಪ್ರಕರಣದ ಪ್ರಮುಖ ಆರೋಪಿ ಎಂದು ಪೊಲೀಸರು ಬಂಧಿಸಿದ್ದಾರೆ.

ಕಾಲ್ತುಳಿತದಲ್ಲಿ ರೇವತಿ ಎಂಬ ಮಹಿಳೆ ಸಾವನ್ನಪ್ಪಿದ್ದು, ಆಕೆಯ ಪುತ್ರ ಶ್ರೀತೇಜ್ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿರುವ ಹಿನ್ನೆಲೆಯಲ್ಲಿ ಅಲ್ಲು ಅರ್ಜುನ್ ಹೆಸರನ್ನೂ ಈ ಪ್ರಕರಣದಲ್ಲಿ ಸೇರಿಸಲಾಗಿದೆ. ಹತ್ತು ದಿನಗಳ ಹಿಂದೆಯೇ ಅಲ್ಲು ಅರ್ಜುನ್‌ನನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ಇತ್ತೀಚೆಗೆ ಈ ಪ್ರಕರಣದ ವಿಚಾರಣೆಗೆ ಹಾಜರಾಗಿದ್ದರು. ಚಿಕ್ಕಡಪಲ್ಲಿ ಪೊಲೀಸರು ಬನ್ನಿಯನ್ನು ಸುಮಾರು ಎರಡು ಗಂಟೆಗಳ ಕಾಲ ವಿಚಾರಣೆ ನಡೆಸಿದರು. ಸಂಧ್ಯಾ ಥಿಯೇಟರ್‌ನಲ್ಲಿ ನಡೆದ ಪುಷ್ಪ 2 ಬೆನಿಫಿಟ್ ಶೋನಲ್ಲಿ ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ 50ಕ್ಕೂ ಹೆಚ್ಚು ಪ್ರಶ್ನೆಗಳನ್ನು ಕೇಳಲಾಯಿತು. ಚಿಕ್ಕಡಪಲ್ಲಿ ಎಸಿಪಿ ಹಾಗೂ ಕೇಂದ್ರ ವಲಯ ಡಿಸಿಪಿ ನೇತೃತ್ವದ ತಂಡ ವಿಚಾರಣೆ ನಡೆಸಿತು. ವಕೀಲ ಅಶೋಕ್ ರೆಡ್ಡಿ ಅವರ ಸಮ್ಮುಖದಲ್ಲಿ ವಿಚಾರಣೆ ನಡೆಸಲಾಯಿತು. ಆದರೆ ಪೊಲೀಸರು ಕೇಳಿದ ಹಲವು ಪ್ರಶ್ನೆಗಳಿಗೆ ಅಲ್ಲು ಅರ್ಜುನ್ ಉತ್ತರಿಸಿಲ್ಲ ಎಂದು ತಿಳಿದು ಬಂದಿದೆ. ಕೆಲ ಪ್ರಶ್ನೆಗಳಿಗೆ ಉತ್ತರ ನೀಡಿದರೆ ಇನ್ನು ಕೆಲ ಪ್ರಶ್ನೆಗಳಿಗೆ ಮೌನ ವಹಿಸಿದ್ದಾರೆ ಎಂದು ವರದಿಯಾಗಿದೆ.

ಆಶ್ರಮ ಶಾಲೆಗಳ ಮಕ್ಕಳ ಆರೋಗ್ಯ ಕಾಪಾಡಲು ಎಲ್ಲಾ ಅಗತ್ಯ ಕ್ರಮ

ಬುಡಕಟ್ಟು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ರಾಜ್‌ಕುಮಾರ್ ಭರವಸೆ

ಮೈಸೂರು,ಡಿ.24(ಎಂಟಿವೈ)– ಆಶ್ರಮ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಕಾಲ ಕಾಲಕ್ಕೆ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿ, ಮಕ್ಕಳ ಆರೋಗ್ಯ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಕೆ.ಆರ್.ರಾಜ್‌ಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ನಡೆದ ಸಮಾರಂಭದಲ್ಲಿ ಕೇರಳ ರಾಜ್ಯದ ಕೋಯಿಕ್ಕೋಡ್‌ನಲ್ಲಿ ನಡೆಯಲಿರುವ ರಾಷ್ಟ್ರೀಯ ಬುಡಕಟ್ಟು ಕಲಾ ಪ್ರಾಕಾರಗಳಲ್ಲಿ ಭಾಗವಹಿಸಲು ತೆರಳುತ್ತಿರುವ ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟು ಸಮುದಾಯದ ತಂಡದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆಶ್ರಮ ಶಾಲೆಗಳಲ್ಲಿ ದಾಖಲಾಗಿರುವ



ಕೋಯಿಕ್ಕೋಡ್‌ನಲ್ಲಿ ನಡೆಯಲಿರುವ ರಾಷ್ಟ್ರೀಯ ಬುಡಕಟ್ಟು ಕಲಾ ಪ್ರಾಕಾರಗಳ ಸ್ಪರ್ಧಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದ ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಬುಡಕಟ್ಟು ಸಮುದಾಯದ ಕಲಾ ತಂಡಕ್ಕೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಕೆ.ಆರ್.ರಾಜ್‌ಕುಮಾರ್ ಹಾಗೂ ಅಧಿಕಾರಿಗಳು ಬೀಳ್ಕೊಟ್ಟರು.

ವಿದ್ಯಾರ್ಥಿಗಳನ್ನು ಶಿಕ್ಷಣದೊಂದಿಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಪ್ರೇರಣೆ ನೀಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಇದರೊಂದಿಗೆ ಆಶ್ರಮ ಶಾಲಾ ಮಕ್ಕಳಲ್ಲಿ ಅಪೌಷ್ಟಿಕತೆ ಸಮಸ್ಯೆಯಿಂದ ಬಳಲುವ ಮಕ್ಕಳನ್ನು ಗುರುತಿಸಿ, ಅಗತ್ಯ ಚಿಕಿತ್ಸೆ ಕೊಡಿಸಲಾಗುತ್ತಿದೆ. ಅಲ್ಲದೆ, ಜನವರಿಯಿಂದ ಕಾಲ ಕಾಲಕ್ಕೆ ಅನುಗುಣವಾಗಿ ಆಶ್ರಮ ಶಾಲೆಗಳಲ್ಲಿ ಆರೋಗ್ಯ ತಪಾಸಣಾ ಶಿಬಿರ ನಡೆಸಿ, ಮಕ್ಕಳ ಆರೋಗ್ಯ ಕಾಪಾಡಲು ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಪರಿಕರಗಳು, ಡ್ಯಾನ್ಸ್ ಡ್ರೆಸ್ ಖರೀದಿಸಲು ಸಹಾಯಧನ ನೀಡಲಾಗುತ್ತದೆ. ಕ್ರೀಡೆಯಲ್ಲಿ ಭಾಗವಹಿಸುವವರಿಗೆ ಟ್ರ್ಯಾಕ್ ಸೂಟ್ ನೀಡಲಾಗುವುದು. ಸಂಸ್ಥೆಯ ಮೂಲಕ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮ ನಡೆಸಲು ಉದ್ದೇಶಿಸಲಾಗಿದೆ. ಹಾಡಿ ಮಹಿಳೆಯರಿಗೆ ಒಂದು ದಿನದ ಕಾರ್ಯಾಗಾರವನ್ನು ನಡೆಸುವುದರ ಜೊತೆಗೆ ಶಿಕ್ಷಣ ಆರೋಗ್ಯದ ಬಗ್ಗೆ ಅರಿವನ್ನು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಸರ್ಕಾರದಿಂದ ಆದಿವಾಸಿ ಬುಡಕಟ್ಟು ಸಮುದಾಯದ ಜನರಿಗೆ ದೊರೆಯುವ ಸವಲತ್ತುಗಳನ್ನು ತಲುಪಿಸುವುದರ ಜೊತೆಗೆ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು ಪ್ರಯತ್ನಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಉಪ ನಿರ್ದೇಶಕಿ ಪ್ರಭಾ ಅರಸ್, ವಾಲ್ಮೀಕಿ ಅಭಿವೃದ್ಧಿ ನಿಗಮದ ಮ್ಯಾನೇಜರ್ ಸಿದ್ದಲಿಂಗಸ್ವಾಮಿ, ಅರುಣ್ ಪ್ರಭು, ಭವ್ಯ ಬಿ.ಆರ್. ಗುಣಧರ್, ವಿಜಯ್‌ಕುಮಾರ್, ಸಿದ್ದು, ರಾಜು ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಬೆಲವತ್ತದ ಜೆಡಿಎಸ್ ಮುಖಂಡ ಹನುಮಂತು ಹತ್ಯೆ ಪ್ರಕರಣ: ಮೂವರ ಸೆರೆ

ತಲೆಮರೆಸಿಕೊಂಡಿರುವ 10 ಮಂದಿಗೆ ಪೊಲೀಸರ ಶೋಧ

ಮೈಸೂರು,ಡಿ.24(ಆರ್‌ಕೆ)– ಬೆಲವತ್ತ ಬಳಿ ಹನುಮಂತು ಕೊಲೆ ಪ್ರಕರಣ ಸಂಬಂಧ ಮೂವರನ್ನು ಮೇಟಗಳ್ಳಿ ಠಾಣೆ ಪೊಲೀಸರು ಬಂಧಿಸಿದ್ದು, ಮಹಿಳೆಯರು ಸೇರಿ ತಲೆಮರೆಸಿಕೊಂಡಿರುವ 10 ಮಂದಿ ಆರೋಪಿಗಳ ಪತ್ತೆಗೆ ಶೋಧ ಮುಂದುವರೆದಿದೆ.



ಹನುಮಂತು

ಮಂಡ್ಯದ ಮೋಹನ್, ಬೆಲವತ್ತ ಗ್ರಾಮದ ಆಂತೋಣಿ ಮತ್ತು ಸಂತು ಬಂಧಿತ ಕೊಲೆ ಆರೋಪಿಗಳು. ಉಳಿದಂತೆ ತಲೆ ಮರೆಸಿಕೊಂಡಿರುವ ವಿನೋದ್‌ಕುಮಾರ್, ಯೋಗಾ, ಬ್ಯಾಂಕ್ ಮಂಜು, ಅರ್ಜುನ್, ಎನ್‌ಕೌಂಟರ್ ಗಿರಿ, ದಾಕ್ಷಾಯಿಣಿ, ತಾರಾ ನಂದು, ಧನಲಕ್ಷ್ಮಿ, ಚಂದ್ರಮ್ಮ ಹಾಗೂ ಇತರರ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ. ವಿಜಯನಗರ ಉಪವಿಭಾಗದ ಎಸಿಪಿ ಎಸ್.ಜಿ.ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ತನಿಖೆ ನಡೆಯುತ್ತಿದ್ದು, ಮೇಟಗಳ್ಳಿ ಠಾಣೆ ಇನ್‌ಸ್ಪೆಕ್ಟರ್ ದಿವಾಕರ್ ಹಾಗೂ ಕ್ರೈಂ ತಂಡದ ಪೊಲೀಸರು ಆರೋಪಿಗಳ ಪತ್ತೆಗೆ ಸುಳಿವಿನ ಜಾಡು ಹಿಡಿದು ಶೋಧ ಕಾರ್ಯ ಮುಂದುವರೆಸಿದ್ದಾರೆ.

ಬೆಲವತ್ತ ಗ್ರಾಮದ ರಾಮಮಂದಿರ ರಸ್ತೆ ನಿವಾಸಿ ರಾಧಾ ಎಂಬುವರು ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಹತ್ಯೆ ಆರೋಪಿಗಳ ಪತ್ತೆಗೆ ವ್ಯಾಪಕ ಶೋಧ ನಡೆಸುತ್ತಿದ್ದಾರೆ. ಡಿ.22ರಂದು ರಾತ್ರಿ 9 ಗಂಟೆ ವೇಳೆಗೆ ಬೆಲವತ್ತ ಗ್ರಾಮದ ತಮ್ಮ ಪತಿ ಕೆ.ಹನುಮಂತು (58) ಅವರನ್ನು ಗ್ರಾಮದ ಸರ್ವೆ ನಂ. 93/52ರಲ್ಲಿ 4 ಎಕರೆ ಜಮೀನು ವಿಚಾರವಾಗಿ ಈ ಹಿಂದೆ ನವೆಂಬರ್ 5ರಂದು ಮಧ್ಯಾಹ್ನ 2.15 ಗಂಟೆ ವೇಳೆಗೆ ನಮ್ಮ ಜಮೀನಿನ ಬಳಿ ಬ್ಯಾಂಕ್ ಮಂಜು, ಅರ್ಜುನ (ಎನ್.ಆರ್.ಮೊಹಲ್ಲಾ), ಎನ್‌ಕೌಂಟರ್ ಗಿರಿ, ಯೋಗಾ, ಮೋಹನ್, ವಿನೋದ್ ಕುಮಾರ್, ಪಾಪು ಅಲಿಯಾಸ್ ಆಂತೋಣಿ, ಸಂತು, ದಾಕ್ಷಾಯಿಣಿ, ತಾರಾ ನಂದು, ಧನಲಕ್ಷ್ಮಿ, ಚಂದ್ರಮ್ಮ ಹಾಗೂ ಇತರರು ಕೆಎ09 ಎಂಜಿ 1459, ಕೆಎ55 ಎಂ 8666 ಕಾರುಗಳು ಮತ್ತು ಆಟೋ ನಂಬರ್ ಕೆಎ09 ಎ 595 ವಾಹನಗಳಲ್ಲಿ ಬಂದು ಗಲಾಟೆ ಮಾಡಿದ್ದರು ಎಂದು ರಾಧಾ ದೂರು ನೀಡಿದ್ದಾರೆ.

ನಂತರ ಡಿ.22ರಂದು ರಾತ್ರಿ 9 ಗಂಟೆ ವೇಳೆ ಮತ್ತೆ ದಾಳಿ ನಡೆಸಿದ ಅವರು ಜಮೀನು ನಮಗೆ ಸೇರಬೇಕೆಂದು ಜಗಳ ತೆಗೆದು ನನ್ನ ಪತಿ ಹನುಮಂತು ಅವರನ್ನು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ಬರ್ಬರವಾಗಿ ಹತ್ಯೆ ಮಾಡಿದ್ದಾರೆ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಇತಿಹಾಸದಲ್ಲಿ ಲೋಪವಿದ್ದರೆ ತಿದ್ದಿ ನಡೆಯಿರಿ

ಟಿಪ್ಪು ಸುಲ್ತಾನ್ ಕುರಿತ ಕೃತಿ ಬಿಡುಗಡೆ ಮಾಡಿದ ಶಾಸಕ ತನ್ವೀರ್ ಸೇಠ್ ಕಿವಿಮಾತು

ಮೈಸೂರು, ಡಿ.24(ಜಿಎ)–ಇತಿಹಾಸದಲ್ಲಿ ಲೋಪವಿದ್ದರೆ ತಿದ್ದಿ ಮುಂದೆ ಸಾಗಬೇಕು. ಆಗ ನಾವು ಪ್ರಜ್ಞಾವಂತ ಜೀವಿಗಳಾಗುತ್ತೇವೆ ಎಂದು ಶಾಸಕ ತನ್ವೀರ್ ಸೇಠ್ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ವತಿಯಿಂದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿದ್ದ ಟಿಪ್ಪು ಸುಲ್ತಾನ್ ಜನ್ಮ ದಿನಾಚರಣೆ ಹಾಗೂ ಟಿಪ್ಪು ಸುಲ್ತಾನ್ ಕುರಿತ ಪ್ರೊ.ವೈ.ಹೆಚ್.ನಾಯಕವಾಡಿ ಸಂಪಾದಿಸಿರುವ 'Mysore under tipu sultan : The beginnings of modren age' ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಟಿಪ್ಪು ಸುಲ್ತಾನ್ ಬಗ್ಗೆ ಜನಸಮಾನ್ಯರಿಗೆ ಇರುವ ಆಲೋಚನಾ ಶಕ್ತಿಗೆ ಅನುಗುಣವಾಗಿ ಪರಿಚಯ ಮಾಡಬೇಕು. ಸಮಾಜದಲ್ಲಿರುವ ಅಂಧ ವಿಶ್ವಾಸವನ್ನು ಅರ್ಥಮಾಡಿಕೊಂಡರೆ, ಹೊಸ ಪರಂಪರೆಗೆ ಹೋಗಬಹುದು. ಯಾವ ಕಾಲಘಟ್ಟದಲ್ಲಿ ಏನು ಸನ್ನಿವೇಶ ಆ ರೀತಿ ಭಾವನೆಗಳು ವ್ಯಕ್ತವಾಗಿರುತ್ತದೆ. ಆದ್ದರಿಂದ ಈ ಹಿಂದೆ ಎರಡು ಸಾಮ್ರಾಜ್ಯಗಳ ನಡುವೆ ಇದ್ದ ದ್ವೇಷ ಈಗ ಪ್ರಸ್ತುತವಲ್ಲ ಎಂದರು.

ಟಿಪ್ಪು ಸುಲ್ತಾನ್ ಹಾಗೂ ಹೈದರಾಲಿ ಇಬ್ಬರು ಮೈಸೂರು ಸಂಸ್ಥಾನವನ್ನು ಸಂರಕ್ಷಣೆ ಮಾಡಿದ್ದಾರೆ. ಅದರ ಪ್ರತಿಫಲವಾಗಿ ಅಂದಿನ ಮಹಾರಾಜರು ಅವರಿಗೆ 200 ಹಳ್ಳಿಗಳನ್ನು ಉಡುಗೊರೆಯಾಗಿ ನೀಡಿದರು. 200 ಹಳ್ಳಿಗಳಿಂದ ತಮ್ಮ ಸಾಮ್ರಾಜ್ಯವನ್ನು ಬೃಹದಾಕಾರವಾಗಿ ಮಾಡಿಕೊಂಡರು. ಬ್ರಿಟಿಷರಿಗೆ ನೆಲೆ ನೀಡಿದರವರನ್ನು ಧ್ವಂಸ ಮಾಡಿದರು ಎಂದು ಅವರು ವಿವರಿಸಿದರು.



ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ವತಿಯಿಂದ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಟಿಪ್ಪು ಸುಲ್ತಾನ್ ಕುರಿತ ಪ್ರೊ.ವೈ.ಹೆಚ್.ನಾಯಕವಾಡಿ ಸಂಪಾದಿಸಿರುವ 'Mysore under tipu sultan : The beginnings of modren age' ಕೃತಿಯನ್ನು ಶಾಸಕ ತನ್ವೀರ್ ಸೇಠ್ ಮಂಗಳವಾರ ಬಿಡುಗಡೆಗೊಳಿಸಿದರು.

ಟಿಪ್ಪು ಅನೇಕ ದೇವಾಲಯಗಳನ್ನು ಧ್ವಂಸ ಮಾಡಿದ್ದ ಎಂದು ಹೇಳುತ್ತಾರೆ. ಆದರೆ, ಅವರ ರಾಜಧಾನಿ ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ದೇವಾಲಯವನ್ನು ಏಕೆ ಏನು ಮಾಡಿಲ್ಲ. ಈ ದೇವಾಲಯನ್ನು 6ನೇ ಶತಮಾನದಲ್ಲಿ ಹೊಯ್ಸಳರು ನಿರ್ಮಿಸಿದ್ದು, ಈ ಅಂಶಗಳನ್ನು ಅರ್ಥಮಾಡಿಕೊಳ್ಳಬೇಕು. ಮೈಸೂರು ಸಾಮ್ರಾಜ್ಯವನ್ನು ವಶಪಡಿಸಿಕೊಳ್ಳಲು ಅವಕಾಶವಿತ್ತು. ಆದರೆ ಅವರು ಹಾಗೇ ಮಾಡಲಿಲ್ಲ ಎಂದರು.

ಕೇರಳದ ಮಲಬಾರ್‌ನಲ್ಲಿ ಮಹಿಳೆಯರು ಮೇಲಂಗಿ ಧರಿಸದಂತೆ ನಿಯಮ ವಿಧಿಸಲಾಗಿತ್ತು. ಈ ಕೆಟ್ಟ ಪದ್ಧತಿಯನ್ನು ತೆಗೆದಿದ್ದು, ಅನೇಕ ದೇವಾಲಯಗಳನ್ನು ಅಭಿವೃದ್ಧಿಪಡಿಸಲು ಅನುದಾನ ನೀಡಿದ್ದು, ಶಾಲೆ, ಗ್ರಂಥಾಲಯ ನಿರ್ಮಾಣ, ರಾಕೆಟ್ ಆವಿಷ್ಕಾರ ಸೇರಿದಂತೆ ಅನೇಕ ಕಾರ್ಯ ಮಾಡಿರುವ ಟಿಪ್ಪು ಸುಲ್ತಾನ್ ಸಂಚಲನದ ವ್ಯಕ್ತಿಯಾಗಿದ್ದು, ಈ ಕುರಿತು ಅಧ್ಯಯನಗಳನ್ನು ನಡೆಸಬೇಕು. ಸರ್ಕಾರಕ್ಕೆ ಪ್ರತಿ ಬಾರಿ ಇದನ್ನೇ ಹೇಳುತ್ತೇನೆ. ಟಿಪ್ಪುವನ್ನು ವ್ಯಕ್ತಿಯಾಗಿ ನೋಡಿ ಅಧ್ಯಯನ ಮಾಡುವುದು ತಪ್ಪು. ಸಾಮ್ರಾಜ್ಯದ ದೊರೆಯಾಗದೇ ಸೇವಕನಾಗಿ ಮೈಸೂರನ್ನು ರಕ್ಷಣೆ ಮಾಡಿ, ದೊಡ್ಡ ಮಟ್ಟದಲ್ಲಿ ಸಾಮ್ರಾಜ್ಯ ವಿಸ್ತರಣೆ ಮಾಡಿರುವ ಬಗ್ಗೆ ಹಾಗೂ ಕೊಡುಗೆಗಳ ಬಗ್ಗೆ ಅಧ್ಯಯನ ಮಾಡಬೇಕು ಎಂದು ತಿಳಿಸಿದರು.


ಅಂದು ಬ್ರಿಟಿಷರ ಒಟ್ಟಿಗೆ ಒಡಂಬಡಿಕೆ ಮಾಡಿಕೊಂಡ ರಾಜರ ಕೋಟೆಗಳು ಇಂದಿಗೂ ಇದೆ. ಆದರೆ, ಅವರ ವಿರುದ್ಧ ಇದ್ದವರ ವಂಶವೇ ಇಲ್ಲದಂತೆ ಮಾಡಿದ್ದಾರೆ. ಅದಕ್ಕೆ ಟಿಪ್ಪು, ಆದಿಲ್ ಶಾ ಸಾಕ್ಷಿಯಾಗಿದ್ದಾರೆ. ಈ ಕಾರ್ಯಕ್ರಮಕ್ಕೆ ಆಹ್ವಾನಿಸಲು ಬಂದಾಗ 'ನಾನು ಮಾತನಾಡಿದರೆ, ಸಮುದಾಯದ ಪರವಾಗಿ ಮಾತನಾಡುತ್ತೇನೆ ಎಂಬ ಆರೋಪ ಕೇಳಿ ಬರುತ್ತದೆ. ಆದ್ದರಿಂದ ಇತಿಹಾಸ ತಜ್ಞರನ್ನು ಆಹ್ವಾನಿಸಿ ಎಂದು ಸಲಹೆ ನೀಡಿದೆ. ಆದರೆ, ಅವರು ಒತ್ತಾಯ ಮಾಡಿದ್ದಕ್ಕಾಗಿ ಬಂದಿದ್ದೇನೆ. ಟಿಪ್ಪು ಆಳ್ವಿಕೆಯ ಸಾಮ್ರಾಜ್ಯ ನೋಡಲು ಸಾಧ್ಯವಾಗದಿದ್ದರೂ ಇಂದು ಟಿಪ್ಪು ಸುಲ್ತಾನ್ ಸಮಾಧಿಯ ಗುಂಬಜ್ ನಿರ್ವಹಣೆ ಕಳೆದ 10 ವರ್ಷಗಳಿಂದ ಮಾಡಿಕೊಂಡು ಬರುತ್ತಿರುವುದು ನನ್ನ ಭಾಗ್ಯ ಎಂದು ತನ್ವೀರ್ ಸೇಠ್ ಹೇಳಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ನಿವೃತ್ತ ಪ್ರಾಧ್ಯಾಪಕ ಪ್ರೊ.ಕೆ.ಎಂ. ಲೋಕೇಶ್, ಟಿಪ್ಪು ಸುಲ್ತಾನ್ ಅಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕಿ ಪ್ರೊ.ಮಹಾದೇವಿ, ಕೃತಿಯ ಲೇಖಕ ಪ್ರೊ.ವೈ.ಹೆಚ್.ನಾಯಕವಾಡಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> "ಸಮಾಜದಲ್ಲಿ ಪರಿಪೂರ್ಣರು ಯಾರೂ ಇಲ್ಲ. ಅದರ ಸರಿ ತಪ್ಪು ವಿಮರ್ಶೆ ಮಾಡುವ ಕೆಲಸಕ್ಕೆ ಮುಂದಾಗಬಾರದು. ಅಂದು ನಡೆದ ಘಟನೆಗೆ ಇಂದು ಸಾಕ್ಷಿ ಇಲ್ಲ. ಯಾವುದು ಬೇಕು, ಬೇಡ ಎಂಬ ವಿವೇಚನೆ ಎಲ್ಲರಿಗೂ ಭಗವಂತ ನೀಡಿದ್ದಾನೆ. ಅದನ್ನು ಮಾಡಿದ್ದರೆ ಸಾಕು. ಇಂದು ಸಮಾಜದಲ್ಲಿ ಹಿಟ್ ಅಂಡ್ ರನ್ ಹೇಳಿಕೆ ನೀಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಸಮಾಜದಲ್ಲಿ ನಮ್ಮ ನಡವಳಿಕೆ ಹೇಗಿರಬೇಕು ಎಂದರೆ ಯಾರಿಗೂ ನೋವಾಗದಂತೆ ನೋಡಿಕೊಳ್ಳುವುದು ನಿಜವಾದ ಮಾನವೀಯತೆ. ಇಂದಿನ ಸಂಘರ್ಷಗಳಿಂದ ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇದನ್ನು ಮುಂದಿನ ಪೀಳಿಗೆಗೆ ಬಿಟ್ಟು ಹೋಗಲು ಸಾಧ್ಯವಿಲ್ಲ. ಅತ್ಯಾಚಾರ ಮಾಡಿದವರಿಗೆ ಮಹಿಳೆ ನಿಂದನೆ ಮಾಡಿದವರಿಗೆ ಹೀರೋ ರೀತಿ ಸ್ವಾಗತ ನೀಡುತ್ತಿದ್ದೇವೆ. ಧಾರ್ಮಿಕವಾಗಿ ಮೂಢನಂಬಿಕೆ ಆಚರಣೆ ಇದ್ದಿದ್ದು, ಇಂದು ವ್ಯಕ್ತಿ ಪೂಜೆಗೆ ಬರುತ್ತಿದೆ.
> –ತನ್ವೀರ್ ಸೇಠ್, ಶಾಸಕ


ಜ.10, ಯೋಗನರಸಿಂಹಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ

ಮೈಸೂರು, ಡಿ.24–ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದಲ್ಲಿ 2025 ಜನವರಿ 10ರಂದು ವೈಕುಂಠ ಏಕಾದಶಿಯನ್ನು ಏರ್ಪಡಿಸಲಾಗಿದೆ. ಅಂದು ಮುಂಜಾನೆ 4 ಗಂಟೆಗೆ ಸ್ವರ್ಗದ ಬಾಗಿಲಾದ ವೈಕುಂಠ ದ್ವಾರವನ್ನು ತೆರೆದು, ಭಕ್ತರಿಗೆ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ತಿಳಿಸಿದ್ದಾರೆ.



ಡಿ.30ರಂದು ದೇವಸ್ಥಾನದಲ್ಲಿ ಅಮಾವಾಸ್ಯೆ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿದ್ದು, ಸಂಜೆ 7 ಗಂಟೆಗೆ ಸ್ವಾಮಿಗೆ ಅಭಿಷೇಕ ಆರಂಭವಾಗಿ ರಾತ್ರಿ 8 ಗಂಟೆಗೆ ಪ್ರಸಾದ ವಿನಿಯೋಗವಾಗಲಿದೆ. ಡಿ.26ರಂದು ದೇವಸ್ಥಾನದಲ್ಲಿ ಸ್ವಾತಿ ನಕ್ಷತ್ರ ವಿಶೇಷ ಪೂಜೆ ನಡೆಯಲಿದ್ದು, ಅಂದು ಬೆಳಗ್ಗೆ 9 ಗಂಟೆಗೆ ಅಭಿಷೇಕವಿರಲಿದ್ದು, 12 ಗಂಟೆಗೆ ಪ್ರಸಾದ ವಿತರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಎನ್.ಶ್ರೀನಿವಾಸನ್ ಅವರನ್ನು ಮೊ: 99004 00000 ಮೂಲಕ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಮಾಜಿ ಸಚಿವರೂ ಆದ ಶಾಸಕರಾದ ಜಿ.ಟಿ.ದೇವೇಗೌಡರಿಗೆ ಸನ್ಮಾನ...



ಚಾಮುಂಡೇಶ್ವರಿ ಕ್ಷೇತ್ರದ ಆನಂದೂರು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಎನ್.ಬಿ.ಮಂಜು ಹಾಗೂ ಉಪಾಧ್ಯಕ್ಷರಾದ ದಿನೇಶ್ ಅವರು ತಮ್ಮ ಆಯ್ಕೆಗೆ ಸಹಕರಿಸಿದ ಮಾಜಿ ಸಚಿವರೂ ಆದ ಶಾಸಕರಾದ ಜಿ.ಟಿ.ದೇವೇಗೌಡರನ್ನು ಆತ್ಮೀಯವಾಗಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ದೇವೇಂದ್ರ (ದೇವು), ಅಂಕಿತ ಯದುಕುಮಾರ್, ಲಕ್ಷ್ಮಿದೇವಮ್ಮ, ಶ್ರೀನಿವಾಸ್ ಶೆಟ್ಟಿ, ಭದ್ರಯ್ಯ, ಸಿದ್ದನಾಯಕ ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ತಪಾಸಣಾ ಶಿಬಿರ

ಮೈಸೂರು,ಡಿ.24–ಸುಯೋಗ್ ಆಸ್ಪತ್ರೆ ವತಿಯಿಂದ ಜ.5ರವರೆಗೆ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ಉಚಿತ ಹೃದ್ರೋಗ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಈ ಶಿಬಿರದಲ್ಲಿ ರಕ್ತದೊತ್ತಡ, ತಲೆಸುತ್ತು, ಕಣ್ಣು ಮಂಜಾಗುವಿಕೆ, ಏದುಸಿರು, ಎದೆ ನೋವು, ನಡೆಯುವಾಗ ಉಸಿರಾಡಲು ಕಷ್ಟಪಡುವಿಕೆ ಮುಂತಾದ ಸಮಸ್ಯೆಗಳಿಗೆ ತಪಾಸಣೆ ಹಾಗೂ ಉಚಿತ ಸಮಾಲೋಚನೆ ಇದ್ದು, ವೈದ್ಯರು ಸೂಚಿಸುವ ಪರೀಕ್ಷೆಗಳಿಗೆ ವಿಶೇಷ ಪ್ಯಾಕೇಜ್ ಲಭ್ಯವಿರುತ್ತದೆ. ಆಸಕ್ತರು 0821–2566966, 9986399862 ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.


ಕೆಪಿಸಿಸಿ ಎಸ್‌ಟಿ ವಿಭಾಗಕ್ಕೆ ದಿನೇಶ್ ನೇಮಕ



ಮೈಸೂರು, ಡಿ.24– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಪರಿಶಿಷ್ಟ ವರ್ಗದ (ಎಸ್‌ಟಿ) ಪ್ರಧಾನ ಕಾರ್ಯದರ್ಶಿಯಾಗಿ ಮೈಸೂರಿನ ಆರ್.ದಿನೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಕೆಪಿಸಿಸಿ ಎಸ್‌ಟಿ ವಿಭಾಗದ ಅಧ್ಯಕ್ಷರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಂತ್ರಿಕ ಸಮಸ್ಯೆ : ಅಮೆರಿಕನ್ ಏರ್ಲೈನ್ಸ್ ಹಾರಾಟ ಸ್ಥಗಿತ

ವಾಷಿಂಗ್ಟನ್ : ಅನಿರ್ದಿಷ್ಟ ತಾಂತ್ರಿಕ ಸಮಸ್ಯೆಯಿಂದಾಗಿ ಅಮೆರಿಕನ್ ಏರ್ಲೈನ್ಸ್‌ನ ಎಲ್ಲಾ ವಿಮಾನಗಳ ಹಾರಾಟವನ್ನೂ ಅಮೆರಿಕದಲ್ಲಿ ಮಂಗಳವಾರ ಸ್ಥಗಿತಗೊಳಿಸಲಾಗಿದೆ ಎಂದು ವರದಿಯಾಗಿದೆ.



ವಿಮಾನಗಳ ಹಾರಾಟ ಸ್ಥಗಿತಕ್ಕೆ ಸ್ಪಷ್ಟ ಕಾರಣವನ್ನು ಅಮೆರಿಕನ್ ಏರ್‌ಲೈನ್ಸ್ ಸಂಸ್ಥೆ ನೀಡಿಲ್ಲ. ಇದು ಕ್ರಿಸ್ ಮಸ್ ಹಬ್ಬದ ಮುನ್ನಾ ದಿನ ಸಾವಿರಾರು ಪ್ರಯಾಣಿಕರ ಪ್ರಯಾಣದ ಯೋಜನೆಗೆ ಅಡ್ಡಿಪಡಿಸಿದೆ. ವಿವಿಧ ವಿಮಾನ ನಿಲ್ದಾಣಗಳ ರನ್ ವೇಗಳಲ್ಲಿ ತಮ್ಮ ವಿಮಾನ ಸ್ಥಗಿತಗೊಂಡಿದೆ ಎಂದು ಪ್ರಯಾಣಿಕರು ಸಾಮಾಜಿಕ ಮಾಧ್ಯಮದಲ್ಲಿ ಅಸಮಾಧಾನ ಹಂಚಿಕೊಂಡಿದ್ದಾರೆ. ಸಮಸ್ಯೆ ಸರಿಪಡಿಸಲು ಪ್ರಯತ್ನ ನಡೆಸುತ್ತಿದ್ದಾರೆ. ಆದಷ್ಟು ಬೇಗ ಸರಿಪಡಿಸಲಾಗುವುದು ಎಂದು ಸಂಸ್ಥೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ರಾಷ್ಟ್ರಮಟ್ಟದ ಯುವಜನೋತ್ಸವಕ್ಕೆ ಆಯ್ಕೆ



ಕೆಂಗೇರಿಯ ಕ್ರೈಸ್ಟ್ ವಿಶ್ವವಿದ್ಯಾನಿಲಯದಲ್ಲಿ ನಡೆದ ಯುವಜನೋತ್ಸವ ಸ್ಪರ್ಧೆಯಲ್ಲಿ ಜೆಎಸ್‌ಎಸ್‌ಎಸ್ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಮೂಕಾಭಿನಯ ಸ್ಪರ್ಧೆಯಲ್ಲಿ ಸ್ಥಾನ ಪಡೆದಿದ್ದಾರೆ.

ಮೈಸೂರು,ಡಿ.24–ಕೆಂಗೇರಿಯ ಕ್ರೈಸ್ಟ್ ವಿಶ್ವವಿದ್ಯಾನಿಲಯದಲ್ಲಿ ನಡೆದ 38ನೇ ದಕ್ಷಿಣ–ಪೂರ್ವ ವಲಯ ಮಟ್ಟದ ಯುವಜನೋತ್ಸವ ಸ್ಪರ್ಧೆಯಲ್ಲಿ ಜೆಎಸ್‌ಎಸ್‌ಎಸ್ ಸಿಂಹ ಸುಬ್ಬಮಹಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಮೈಸೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿ 27 ವಿಶ್ವವಿದ್ಯಾನಿಲಯಗಳ ಪೈಕಿ ಮೂಕಾಭಿನಯ ಸ್ಪರ್ಧೆಯಲ್ಲಿ ಸ್ಥಾನ ಪಡೆದಿದ್ದಾರೆ.

ರಚನೆ ಮತ್ತು ನಿರ್ದೇಶನ ಅಂಕರಾಜು ಎನ್ ಮಾಡಿದ್ದು, ಅಮಿಟಿ ವಿಶ್ವವಿದ್ಯಾನಿಲಯ, ಉತ್ತರಪ್ರದೇಶದಲ್ಲಿ ನಡೆಯುವ ರಾಷ್ಟ್ರಮಟ್ಟದ ಯುವಜನೋತ್ಸವದಲ್ಲಿ ಕಾಲೇಜಿನ ವಿದ್ಯಾರ್ಥಿಗಳಾದ ಭಾನುಪ್ರಕಾಶ್, ಶಿವಾನಿ, ಹರ್ಷವರ್ಧನ, ಹರ್ಷಿತ, ಕ್ರಿಷ್ಮ, ಹರ್ಷಿತ ಹೆಚ್.ಪಿ. ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ. ಕಾಲೇಜಿನ ಕಾರ್ಯದರ್ಶಿ ಅನುಪಮಾ ಬಿ.ಪಂಡಿತ್, ಆರ್.ಕೆ.ಭರತ್, ಪ್ರಾಂಶುಪಾಲರಾದ ಡಾ.ರಾಕೇಶ್, ಅಧ್ಯಾಪಕ ವೃಂದದವರು ಅಭಿನಂದಿಸಿದರು.

ಅವಿರೋಧ ಆಯ್ಕೆ



ಎಚ್.ಡಿ.ಕೋಟೆ ತಾಲೂಕಿನ ಹೆಗ್ಗಡಾಪುರ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ 5 ವರ್ಷದ ಅವಧಿಗೆ ಅಧ್ಯಕ್ಷರಾಗಿ ನಾಗಮ್ಮ ಟಿ.ಎ.ಕಾಳಪ್ಪ ಹಾಗೂ ಉಪಾಧ್ಯಕ್ಷರಾಗಿ ಪ್ರೇಮ ಎಚ್.ಕೆ.ಚುಂದ್ರು ಅವಿರೋಧವಾಗಿ ಆಯ್ಕೆಯಾದರು. ಸಂಘದ ಮಹಿಳಾ ನಿರ್ದೇಶಕರು, ಹೆಗ್ಗಡಾಪುರ ಗ್ರಾಮಸ್ಥರು, ಸಂಘದ ಮುಖ್ಯ ಕಾರ್ಯನಿರ್ವಾಹಕಿ ರೂಪಷ, ಹಾಲು ಪರೀಕ್ಷಕಿ ಜಯಲಕ್ಷ್ಮಿ ಇತರರು ಉಪಸ್ಥಿತರಿದ್ದರು.

ಮೈಸೂರಿನ ಕೆಆರ್‌ಎಸ್ ರಸ್ತೆಗೆ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ನಾಮಕರಣ ಪ್ರಸ್ತಾಪ; ಪರಿಸರ ಸಂರಕ್ಷಣಾ ಸಮಿತಿಯಿಂದ ತೀವ್ರ ವಿರೋಧ


ಭ್ರಷ್ಟಾಚಾರ ಆರೋಪಿ ಹೆಸರಿಟ್ಟರೆ ಸಮಾಜಕ್ಕೆ ಕೆಟ್ಟ ಸಂದೇಶ ಹೋಗಲಿದೆ...!

ಮೈಸೂರು, ಡಿ.24(ಬಿಎಲ್‌ಯು)– ಮೈಸೂರಿನ ಕೆಆರ್‌ಎಸ್ ರಸ್ತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡುವ ಬಗ್ಗೆ ತೀವ್ರ ವಿರೋಧ ವ್ಯಕ್ತವಾಗಿದೆ.

ನಗರದ ಕೆಆರ್‌ಎಸ್ ರಸ್ತೆಯ ಶ್ರೀ ಲಕ್ಷ್ಮಿ ವೆಂಕಟರಮಣಸ್ವಾಮಿ ದೇವಸ್ಥಾನ ವೃತ್ತದಿಂದ ಮೇಟಗಳ್ಳಿ ರಾಯಲ್ ಇನ್ ಜಂಕ್ಷನ್‌ವರೆಗೆ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ನಾಮಕರಣ ಮಾಡಲು ನವೆಂಬರ್ 22, 2024 ರಂದು ನಡೆದ ನಗರಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ತೀರ್ಮಾನವಾಗಿತ್ತು.

ಈ ಸಂಬಂಧ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳಿದ್ದರೆ ಮೈಸೂರು ನಗರಪಾಲಿಕೆಯ ಕಾರ್ಯಪಾಲಕ ಅಭಿಯಂತರರವರ ಕಚೇರಿಗೆ 30 ದಿನದೊಳಗೆ ಲಿಖಿತ ಆಕ್ಷೇಪಣೆ ಸಲ್ಲಿಸಲು ಡಿಸೆಂಬರ್ 13 ರಂದು ನಗರಪಾಲಿಕೆ ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ಪ್ರಕಟಿಸಿತ್ತು.

ಕೆಆರ್‌ಎಸ್ ರಸ್ತೆಗೆ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡಲು ಪರಿಸರ ಸಂರಕ್ಷಣಾ ಸಮಿತಿ ಅಧ್ಯಕ್ಷ ಭಾನು ಮೋಹನ್ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ನಗರಪಾಲಿಕೆಯ ಕಾರ್ಯಪಾಲಕ ಅಭಿಯಂತರರಿಗೆ ಲಿಖಿತವಾಗಿ ಆಕ್ಷೇಪಣೆ ಸಲ್ಲಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮೈಸೂರು ಲೋಕಾಯುಕ್ತದಲ್ಲಿ ಹಲವು ಸೆಕ್ಷನ್‌ನಡಿ ಭ್ರಷ್ಟಾಚಾರದ ದೂರು ದಾಖಲಾಗಿದೆ. ಬೇನಾಮಿ ಆಸ್ತಿ ವಹಿವಾಟು ತಡೆ ಕಾಯ್ದೆ, ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ಈ ಬಗ್ಗೆ ತನಿಖೆ ನಡೆಯುತ್ತಿದೆ ತಿಳಿಸಿದ್ದಾರೆ.



ಈ ಪ್ರಕರಣಗಳಲ್ಲಿ ಸಿದ್ದರಾಮಯ್ಯ ಮೊದಲ ಆರೋಪಿಯಾಗಿದ್ದಾರೆ. ಇಂತಹ ಗಂಭೀರ ಆರೋಪ ಹೊತ್ತಿರುವ ಸಮಯದಲ್ಲಿ ಸಿದ್ದರಾಮಯ್ಯ ಹೆಸರನ್ನು ರಸ್ತೆಗೆ ಇಡುವುದು ಸಮಾಜಕ್ಕೆ ಕೆಟ್ಟ ಸಂದೇಶ ರವಾನೆಯಾದಂತಾಗುತ್ತದೆ ಎಂದು ಅವರು ಹೇಳಿದ್ದಾರೆ.

ಸಿದ್ದರಾಮಯ್ಯ ವಿರುದ್ಧದ ಪ್ರಕರಣದ ಬಗ್ಗೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಈ ಹಿನ್ನೆಲೆ ವಿಚಾರಣೆ ಮುಗಿದು ನ್ಯಾಯಾಲಯದ ತೀರ್ಪು ಬರುವವರೆಗೆ ಸಿದ್ದರಾಮಯ್ಯ ಹೆಸರನ್ನು ರಸ್ತೆಗೆ ಇಡಬಾರದು ಎಂದು ಮನವಿ ಮಾಡಿದ್ದಾರೆ. ನ್ಯಾಯಾಲಯದ ತೀರ್ಪಿನಿಂದ ಸಿದ್ದರಾಮಯ್ಯ ಆರೋಪಮುಕ್ತರಾದ ನಂತರ ರಸ್ತೆಗೆ ಅವರ ಹೆಸರು ನಾಮಕರಣ ಮಾಡಲು ತೀರ್ಮಾನ ಮಾಡಬೇಕು ಎಂದು ಭಾನುಮೋಹನ್ ಆಗ್ರಹಿಸಿದ್ದಾರೆ. ಈ ಸಂಬಂಧ ನಗರಪಾಲಿಕೆ ಈಗ ಯಾವ ತೀರ್ಮಾನ ಕೈಗೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

ಆರೀಫ್ ಮೊಹಮ್ಮದ್ ಖಾನ್ ಕೇರಳದಿಂದ ಬಿಹಾರಕ್ಕೆ; ಮಣಿಪುರಕ್ಕೆ ಮಾಜಿ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ರಾಜ್ಯಪಾಲ


ಪಾಟ್ನಾ: ರಾಷ್ಟ್ರಪತಿ ದ್ರೌಪದಿ ಮುರ್ಮು ಹಲವು ರಾಜ್ಯಗಳಿಗೆ ನೂತನ ರಾಜ್ಯಪಾಲರನ್ನು ನೇಮಕ ಮಾಡಿದ್ದಾರೆ.

ರಾಷ್ಟ್ರಪತಿ ಭವನ ಈ ಬಗ್ಗೆ ಅಧಿಕೃತ ಆದೇಶ ಪ್ರಕಟಿಸಿದೆ. ಮಹತ್ವದ ಬೆಳವಣಿಗೆಯಲ್ಲಿ ಕೇರಳದ ರಾಜ್ಯಪಾಲರಾಗಿದ್ದ ಆರೀಫ್ ಮೊಹಮ್ಮದ್ ಖಾನ್ ಅವರನ್ನು ಬಿಹಾರಕ್ಕೆ ವರ್ಗಾವಣೆ ಮಾಡಲಾಗಿದೆ.

ಕೇರಳದಲ್ಲಿ ಆರೀಫ್ ಮೊಹಮ್ಮದ್ ಖಾನ್ ಅವರ ಅವಧಿಯಲ್ಲಿ ಹಲವು ವಿವಾದಗಳು ಉಂಟಾಗಿದ್ದವು, ಪ್ರಮುಖವಾಗಿ ಸಿಪಿಐ(ಎಂ) ಸರ್ಕಾರದೊಂದಿಗೆ ಅವರ ತಿಕ್ಕಾಟ ಸುದ್ದಿಯಲ್ಲಿರುತ್ತಿತ್ತು.

ಬಿಹಾರದ ರಾಜ್ಯಪಾಲರಾದ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರನ್ನು ಕೇರಳದ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ. ಮತ್ತೊಂದು ಪ್ರಮುಖ ಬೆಳವಣಿಗೆಯಲ್ಲಿ, ಮಾಜಿ ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರನ್ನು ಮಣಿಪುರದ ನೂತನ ಗವರ್ನರ್ ಆಗಿ ನೇಮಿಸಲಾಗಿದೆ.

ಮಣಿಪುರ ಕಳೆದ ವರ್ಷ ಮೇ ತಿಂಗಳಿನಿಂದ ಮೈತೈಸ್ ಮತ್ತು ಕುಕಿ–



ಜೋ ಗುಂಪುಗಳ ನಡುವಿನ ಜನಾಂಗೀಯ ಹಿಂಸಾಚಾರಕ್ಕೆ ಸಾಕ್ಷಿಯಾಗಿದೆ. ಇದರ ಪರಿಣಾಮವಾಗಿ 250 ಕ್ಕೂ ಹೆಚ್ಚು ಸಾವುಗಳು ಸಂಭವಿಸಿದ್ದು, ಸಾವಿರಾರು ಮಂದಿ ಬೇರೆಡೆಗೆ ಸ್ಥಳಾಂತರಗೊಂಡಿದ್ದಾರೆ.

ಮಾಜಿ ಸೇನಾ ಮುಖ್ಯಸ್ಥ ಜನರಲ್ ವಿಜಯ್ ಕುಮಾರ್ ಸಿಂಗ್ ಅವರನ್ನು ಮಿಜೋರಾಂ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ. ಹೆಚ್ಚುವರಿಯಾಗಿ, ಮಿಜೋರಾಂನ ಗವರ್ನರ್ ಡಾ. ಹರಿಬಾಬು ಕಂಬಂಪತಿ ಅವರನ್ನು ಒಡಿಶಾದ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ. ಒಡಿಶಾದ ರಾಜ್ಯಪಾಲರಾಗಿರುವ ರಘುಬರ್ ದಾಸ್ ಅವರ ರಾಜೀನಾಮೆಯನ್ನು ರಾಷ್ಟ್ರಪತಿಗಳು ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ.

ಚಿನ್ನಾಭರಣ ಅಂಗಡಿಗಳಿಗೆ ವಂಚನೆ ಮಾಡಿದ ಶ್ವೇತಾಗೌಡಳಿಂದ ವರ್ತೂರು ಪ್ರಕಾಶ್‌ಗೆ 12 ಲಕ್ಷ ನಗದು, 3 ಬ್ರಾಸ್‌ಲೆಟ್, ಚಿನ್ನದ ಉಂಗುರ ಉಡುಗೊರೆ!

ಬೆಂಗಳೂರು: ವಂಚನೆ ಕೇಸ್‌ನಲ್ಲಿ ಬಂಧನ ಭೀತಿ ಎದುರಿಸುತ್ತಿದ್ದ ಮಾಜಿ ಸಚಿವ ವರ್ತೂರು ಪ್ರಕಾಶ್ ವಿಚಾರಣೆ ಬಳಿಕ ಪ್ರಕರಣಕ್ಕೆ ಟ್ವಿಸ್ಟ್ ಸಿಕ್ಕಿದೆ.

ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತಿ ನಗರ ಪೊಲೀಸ್ ಠಾಣೆಗೆ ಹಾಜರಾಗಿದ್ದ ವರ್ತೂರು ಪ್ರಕಾಶ್, ಎಸಿಪಿ ಗೀತಾ ಅವರಲ್ಲಿ ವಿಚಾರಣೆ ಎದುರಿಸಿದ್ದಾರೆ. ಇದೇ ವೇಳೆ ಆರೋಪಿ ಶ್ವೇತಾಗೌಡ ಕೊಟ್ಟಿದ್ದ ನಗದು, ಚಿನ್ನಾಭರಣ ಒಳಗೊಂಡ ಗಿಫ್ಟ್ ಅನ್ನು ಪೊಲೀಸರಿಗೆ ವಾಪಸ್ ಕೊಟ್ಟಿದ್ದಾರೆ. ಒಟ್ಟು 12.50 ಲಕ್ಷ ರೂ. ನಗದು, ಮೂರು ಬ್ರಾಸ್ ಲೆಟ್, 1 ಚಿನ್ನದ ಉಂಗುರವನ್ನು ಎಸಿಪಿ ಗೀತಾ ಎದುರಿಗೇ ಪೊಲೀಸರಿಗೆ ಒಪ್ಪಿಸಿದ್ದಾರೆ.

ವಿಚಾರಣೆ ಬಳಿಕ ಮಾತನಾಡಿದ ವರ್ತೂರ್ ಪ್ರಕಾಶ್, ನನಗೆ ಆಕೆ ಸ್ನೇಹಿತೆ ಅಲ್ಲ. ಐದಾರು ತಿಂಗಳ ಹಿಂದೆ ಪರಿಚಯ ಆಗಿದೆ. ನನ್ನ ಹೆಸರು ಬಳಸಿಕೊಂಡು ಚಿನ್ನಭಾರಣ ಖರೀದಿ ಮಾಡಿಕೊಂಡಿದ್ದಾಳೆ. ನನಗೂ ಮನಸ್ಸಿಗೆ ನೋವಾಗಿದೆ. ಚಿನ್ನದ ಅಂಗಡಿಯವರು 2 ಕೋಟಿ ರೂ. ಚಿನ್ನಭಾರಣ ಕೊಟ್ಟಿದ್ದಾರೆ. ಅದ್ಹೇಗೆ ಕೊಟ್ರು ಗೊತ್ತಿಲ್ಲ. ನನ್ನ ತರ, ಕೆಲ ರಾಜಕಾರಣಿಗಳ ಹೆಸರು, ಫೋಟೋ



ತೆಗೆದುಕೊಂಡು ವಂಚನೆ ಮಾಡಿದ್ದಾಳೆ. ಪೊಲೀಸರು ವಿಚಾರಣೆ ವೇಳೆ ಎಲ್ಲಾ ಮಾಹಿತಿ ಕೊಟ್ಟಿದ್ದೀನಿ ಎಂದು ಸ್ಪಷ್ಟಪಡಿಸಿದ್ದಾರೆ.

ಚಾಮುಂಡಿ ಬೆಟ್ಟದಲ್ಲಿ ಮೀಟ್: ವಂಚಕಿ ಶ್ವೇತಾ ವಿಚಾರಣೆ ವೇಳೆ ಹಲವು ಸ್ಫೋಟಕ ಮಾಹಿತಿಗಳು ಬಹಿರಂಗವಾಗಿದೆ. ಶ್ವೇತಾಗೌಡ ಹಾಗೂ ವರ್ತೂರು ಪ್ರಕಾಶ್‌ಗೆ ನಿಕಟ ನಂಟಿರುವುದು ಪತ್ತೆಯಾಗಿದೆ. ಇಬ್ಬರೂ ಹಲವು ಬಾರಿ ಚಾಮುಂಡಿ ಬೆಟ್ಟಕ್ಕೆ ಹೋಗಿ ಬಂದಿದ್ದಾರೆ. ಅಲ್ಲದೇ ತಿರುಪತಿಗೆ ಹೋಗಲು ಸಹ ಟಿಕೆಟ್ ಬುಕ್ ಮಾಡಿರುವುದು ಬಹಿರಂಗವಾಗಿದೆ. ಇದಕ್ಕೆ ಪೂರಕವಾಗಿ ಶ್ವೇತಾ ಮೊಬೈಲ್‌ನಲ್ಲಿ ಹಲವು ಫೋಟೋ ಸಾಕ್ಷ್ಯಗಳು ಸಿಕ್ಕಿವೆ. 3 ಚಿನ್ನದ ಅಂಗಡಿ ಮಾಲೀಕರ ಜ್ಯುವೆಲ್ಲರಿ ಶಾಪ್‌ಗೆ ಶ್ವೇತಾ ಜೊತೆ ವರ್ತೂರು ಪ್ರಕಾಶ್ ಹೋಗಿರುವುದಕ್ಕೆ ಸಾಕ್ಷಿ ಸಿಕ್ಕಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ.

ಗುಲಾಬ್ ಜಾಮೂನ್ ಸೇವ್!: 6 ತಿಂಗಳ ಹಿಂದೆಯಷ್ಟೇ ಶ್ವೇತಾ, ವರ್ತೂರು ಪ್ರಕಾಶ್‌ಗೆ ಫೇಸ್‌ಬುಕ್‌ನಲ್ಲಿ ಪರಿಚಯವಾಗಿದ್ದಳು, ತಾನೇ ರಿಕ್ವೆಸ್ಟ್ ಕಳಿಸಿ ಸ್ನೇಹದ ಬಲೆಗೆ ಬೀಳಿಸಿಕೊಂಡಿದ್ದಳು. ಬಳಿಕ ಮೆಸೆಂಜರ್‌ನಲ್ಲಿ ಚಾಟಿಂಗ್ ಶುರುವಾಗಿ ಇಬ್ಬರೂ ಮೊಬೈಲ್‌ನಂಬರ್ ವಿನಿಮಯ ಮಾಡಿಕೊಂಡಿದ್ದಾರೆ. ಬಳಿಕ ವಾಟ್ಸಪ್‌ನಲ್ಲೂ ಚಾಟಿಂಗ್ ಮುಂದುವರಿದಿದೆ ಶ್ವೇತಾ, ವರ್ತೂರು ಪ್ರಕಾಶ್ ನಂಬರ್ ಅನ್ನು ಗುಲಾಬ್ ಜಾಮೂನ್ ಎಂಬ ಹೆಸರಿನಿಂದ ಸೇವ್ ಮಾಡಿಕೊಂಡಿದ್ದಳು ಎಂಬ ವಿಚಾರವೂ ತನಿಖೆ ವೇಳೆ ಬೆಳಕಿಗೆ ಬಂದಿದೆ.

ಆತ್ಮೀಯತೆ ಮುಂದುವರಿದ ನಂತರ ಶ್ವೇತಾ ಬಳಿಯೇ ವರ್ತೂರು ಪ್ರಕಾಶ್ 10 ಲಕ್ಷ ರೂ. ಸಾಲ ಪಡೆದುಕೊಂಡಿದ್ದಾರೆ ಅನ್ನೋ ಆರೋಪವೂ ಶ್ವೇತಾಳಿಂದ ಕೇಳಿಬಂದಿದೆ ಮೂರು ಬ್ರೇಸ್ಲೆಟ್, ಒಂದು ಉಂಗುರ ಸೇರಿ, ಬ್ಯಾಂಕ್ ಖಾತೆಗೆ 10 ಲಕ್ಷ ರೂ ಹಾಕಿಸಿಕೊಂಡಿದ್ದಂತೆ ತಿರುಪತಿಗೆ ಹೋಗಲು ಶ್ವೇತಾ ಜೊತೆ ಟಿಕೆಟ್ ಕೂಡ ಬುಕ್ ಮಾಡಿದ್ದರಂತೆ ಟಿಕೆಟ್ ಬುಕ್ ಮಾಡಿದ್ದ ಫೋಟೋ ಸಹ ಲಭ್ಯವಾಗಿದೆ. ಹೀಗೆ ಇಬ್ಬರೂ ಸೇರಿ ಕೋಟ್ಯಾಂತರ ರೂ. ವಂಚನೆ ಮಾಡಿದ್ದಾರೆ ಎಂಬ ಆರೋಪ ಕೇಳಿ ಬಂದಿವೆ.

ಡಿ.ಕೆ.ಸುರೇಶ್ ಸಹೋದರಿಯೆಂದು ಮಹಿಳೆಯರಿಗೆ ಕೋಟ್ಯಾಂತರ ರೂ. ವಂಚನೆ: ಎಫ್‌ಐಆರ್ ದಾಖಲು

ಬೆಂಗಳೂರು, ಡಿ.24– ಮಾಜಿ ಸಂಸದ ಡಿಕೆ ಸುರೇಶ್ ತಂಗಿ ಎಂದು ಹೇಳಿಕೊಂಡು ಮಹಿಳೆಯೊಬ್ಬರು ಚಿನ್ನಾಭರಣ ಮಳಿಗೆ ಮಾಲೀಕರಿಗೆ 8 ಕೋಟಿ ರೂಪಾಯಿಗಿಂತಲೂ ಅಧಿಕ ಮೊತ್ತದ ವಂಚನೆ ಮಾಡಿದ್ದಾರೆ. ಈ ಬಗ್ಗೆ ಚಂದ್ರಾಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಶಾಪ್ ಮಾಲೀಕರಾದ ವನಿತಾ ಐತಾಳ್ ಎಂಬುವವರು ಐಶ್ವರ್ಯಗೌಡ ಎಂಬ ಮಹಿಳೆ ವಿರುದ್ಧ ದೂರು ನೀಡಿದ್ದಾರೆ. ಐಶ್ವರ್ಯ ಜತೆ ನಟ ಧರ್ಮೇಂದ್ರ ಹಾಗೂ ಹರೀಶ್ ಎಂಬುವವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಐಶ್ವರ್ಯ ಗೌಡ 2023ರ ಅಕ್ಟೋಬರ್‌ನಿಂದ 2024 ಏಪ್ರಿಲ್‌ವರೆಗೆ ಹಂತ ಹಂತವಾಗಿ 8 ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಚಿನ್ನ ಖರೀದಿ ಮಾಡಿದ್ದಾರೆ. ಚಿನ್ನದ ಹಣ ಪಾವತಿಗೆ ಕೇಳಿದ ಸಂದರ್ಭದಲ್ಲಿ ಡಿ.ಕೆ.ಸುರೇಶ್ ಅವರಿಂದ ಕರೆ ಮಾಡಿಸಿ ಕಾಲಾವಕಾಶ ಕೋರಿದ್ದರಂತೆ. ಜತೆಗೆ ಸಿನಿಮಾ ನಟ ಧರ್ಮೇಂದ್ರ ಎಂಬುವವರಿಂದಲೂ ಕರೆ ಮಾಡಿಸಿ ಕೊಲೆ ಮಾಡಿಸೋದಾಗಿ ಬೆದರಿಕೆ ಹಾಕಿದ್ದಾರೆ ಎಂದು ದೂರಿ ನಲ್ಲಿ ವನಿತಾ ಐತಾಳ್ ತಿಳಿಸಿದ್ದಾರೆ. ಐಶ್ವರ್ಯಗೌಡ ಅವರ ಪತಿ ಹರೀಶ್ ಕೆ.ಎನ್. ಕೂಡ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಲಾಗಿದೆ. ನಾನು ಡಿ.ಕೆ.ಸುರೇಶ್ ತಂಗಿ, ನನಗೆ ಅನೇಕ ರಾಜಕೀಯ ವ್ಯಕ್ತಿಗಳ ಸಂಪರ್ಕವಿದೆ. ನಾನು ದೊಡ್ಡ ಬ್ಯುಸಿನೆಸ್ ವುಮೆನ್. ನಿಮಗೆ ಒಳ್ಳೆ ವ್ಯಾಪಾರ ವಹಿವಾಟು ನೀಡುತ್ತೇನೆ ಎಂದೆಲ್ಲ ಹೇಳಿ ವನಿತಾ ಅವರನ್ನು ಐಶ್ವರ್ಯ ನಂಬಿಸಿದ್ದರು ಎನ್ನಲಾಗಿದೆ. ಸದ್ಯ ಘಟನೆ ಬಗ್ಗೆ ಚಂದ್ರ ಲೇಔಟ್‌ನಲ್ಲಿರುವ ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಜ್ಯುವೆಲ್ಲರಿ ಶಾಪ್ ಮಾಲೀಕರಾದ ವನಿತಾ ಅವರು ದೂರು ನೀಡಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಭೂತಪೂರ್ವ ಯಶಸ್ಸು

ಸಮ್ಮೇಳನದ ಸ್ಮರಣಾರ್ಥವಾಗಿ ಮಂಡ್ಯದಲ್ಲಿ ಸುಸಜ್ಜಿತ ಕನ್ನಡ ಭವನ ನಿರ್ಮಾಣ

ಮಂಡ್ಯ,ಡಿ.24– ಸಕ್ಕರೆ ನಾಡು ಮಂಡ್ಯದಲ್ಲಿ ಜರುಗಿದ ಮೂರು ದಿನಗಳ ಅಕ್ಷರ ಜಾತ್ರೆ ಅಭೂತಪೂರ್ವ ಯಶಸ್ಸನ್ನು ಕಂಡಿದೆ. ಪ್ರತಿಯೊಬ್ಬರೂ ಪ್ರಾಮಾಣಿಕ ಹಾಗೂ ಜವಾಬ್ದಾರಿಯಿಂದ ಸಂಪೂರ್ಣವಾಗಿ ತೊಡಗಿಸಿಕೊಂಡು ಕೈಜೋಡಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸಲಾಗಿದ್ದು, ಎಲ್ಲರಿಗೂ ಹೃದಯಪೂರ್ವಕ ಧನ್ಯವಾದಗಳು ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಸಮ್ಮೇಳನದ ಯಶಸ್ವಿ ಕುರಿತು ಮಾಹಿತಿ ನೀಡುತ್ತಿರುವ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ.

ಸಮ್ಮೇಳನವು ಬಹಳ ಶಿಸ್ತು ಬದ್ಧ ಹಾಗೂ ವ್ಯವಸ್ಥಿತವಾಗಿ ನಡೆಯಲು ಸಮ್ಮೇಳನದ ಕೆಲಸ ಕಾರ್ಯಗಳ ಪ್ರಾರಂಭದಿಂದ ಹಿಡಿದು ಇಲ್ಲಿಯವರೆಗೂ ಶ್ರಮಿಸಿದಂತಹ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಜಿಲ್ಲಾ ಪಂಚಾಯತ್‌ನ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿ ವರ್ಗದವರು, ಸಂಘ ಸಂಸ್ಥೆಗಳು, ಸಾರ್ವಜನಿಕರು ಹಾಗೂ ಒಂದು ದಿನದ ವೇತನವನ್ನು ಸಮ್ಮೇಳನಕ್ಕೆ ನೀಡಿದ ಸರ್ಕಾರಿ ನೌಕರರು, ಶಿಕ್ಷಕರು ಸೇರಿದಂತೆ ಜಿಲ್ಲೆಯ ಸಾರ್ವಜನಿಕರಿಗೆ ಧನ್ಯವಾದ.

ಮಂಗಳವಾರ ನಗರದ ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ಮಂಡ್ಯ ಜಿಲ್ಲೆಯಲ್ಲಿ ಸಂಘಟಿಸಿದ ಬಗ್ಗೆ ಮಾಹಿತಿ ನೀಡಲು ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ನಾಡಿನಲ್ಲಿ ಇದುವರೆಗೂ ನಡೆದಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಒಟ್ಟು 20 ಸಮ್ಮೇಳನದಲ್ಲಿ ಭಾಗವಹಿಸಿದ್ದು, ಬಹಳ ವ್ಯವಸ್ಥಿತ ಹಾಗೂ ಯಶಸ್ವಿಯಾಗಿ ನಡೆದ ಸಮ್ಮೇಳನವೆಂದರೆ ಅದು ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವಾಗಿದೆ ಎಂದು ಸಮ್ಮೇಳನಾಧ್ಯಕ್ಷ ಗೊ.ರು. ಚನ್ನಬಸಪ್ಪ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಎಂದು ಅವರು ತಿಳಿಸಿದರು.

ಊಟದ ವ್ಯವಸ್ಥೆ, ವಸತಿ ವ್ಯವಸ್ಥೆ, ಸಾರಿಗೆ ವ್ಯವಸ್ಥೆ, ವಸ್ತುಪ್ರದರ್ಶನ, ಮಳಿಗೆಗಳು, ಸ್ವಚ್ಛತೆ ಮತ್ತು ನೈರ್ಮಲ್ಯ, ವೇದಿಕೆ ಕಾರ್ಯಕ್ರಮಗಳು ಸೇರಿದಂತೆ ಪ್ರತಿಯೊಂದು ವ್ಯವಸ್ಥೆಯು ಬಹಳ ಅಚ್ಚುಕಟ್ಟಾಗಿ ಜರುಗಿತು. ಸಮ್ಮೇಳನದ ಮೂರು ದಿನಗಳ ಕಾಲ ಸುಮಾರು 5 ರಿಂದ 6 ಲಕ್ಷ ಜನರು ಭಾಗವಹಿಸಿದ್ದು, ಜನರ ಪಾಲ್ಗೊಳ್ಳುವಿಕೆಯು ಸರೋವರದಂತಿತ್ತು. ಸಮ್ಮೇಳನದಲ್ಲಿ 30ಕ್ಕೂ ಹೆಚ್ಚು ಗೋಷ್ಠಿಗಳು ಬಹಳ ಯಶಸ್ವಿಯಾಗಿ ನಡೆದಿವೆ ಎಂದು ತಿಳಿಸಿದರು.

450ಕ್ಕೂ ಹೆಚ್ಚು ಪುಸ್ತಕ ಮಳಿಗೆ ಹಾಗೂ ಸಾಮಾನ್ಯ ಮಳಿಗೆಗಳು ಹಾಗೂ ವಸ್ತುಪ್ರದರ್ಶನ ಮಳಿಗೆ ಸೇರಿದಂತೆ 450 ಮಳಿಗೆಗಳನ್ನು ಆಯೋಜಿಸಲಾಗಿದ್ದು ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದುಕೊಂಡಿದ್ದಾರೆ. ವೇದಿಕೆ ಕಾರ್ಯಕ್ರಮಗಳಾದ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಗೀತ ರಸಸಂಜೆ, ಪೊಲೀಸ್ ಬ್ಯಾಂಡ್, ಜನಪದ ನೃತ್ಯ ಮುಂತಾದವು ಜನರ ಮೆಚ್ಚುಗೆಯನ್ನು ಪಡೆದಿವೆ. ಸಮ್ಮೇಳನ ನಡೆಯುವ ಕಡೆ ಮಾತ್ರ ಮಳೆ ಬಂದು ಹಾರೈಸಿರುವುದು ಸಂತೋಷದ ವಿಷಯವಾಗಿದೆ ಎಂದರು.

ಜಿಲ್ಲೆಯ ಪ್ರತಿಯೊಬ್ಬ ಅಧಿಕಾರಿಗಳು ಕೂಡ ಸಮ್ಮೇಳನದ ಕೆಲಸದಲ್ಲಿ ತೊಡಗಿಸಿಕೊಂಡಿದ್ದು ಹಾಗೂ ಎಲ್ಲಾ ಸ್ಥಳೀಯ ಶಾಸಕರುಗಳು ಸಂಪೂರ್ಣವಾಗಿ ತೊಡಗಿಸಿಕೊಂಡು ಹೆಚ್ಚಿನ ಆಸಕ್ತಿ ವಹಿಸಿ ಸಹಕರಿಸಿದರು. ಪ್ರಪ್ರಥಮವಾಗಿ ಮಂಡ್ಯದಲ್ಲಿ ವಿದ್ಯುತ್ ವ್ಯವಸ್ಥೆಯನ್ನು ಬಹಳ ವಿಜೃಂಭಣೆಯಿಂದ ಮಾಡಲಾಯಿತು. 30 ವರ್ಷಗಳ ನಂತರ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸುವ ಅವಕಾಶ ಜಿಲ್ಲೆಗೆ ಸಿಕ್ಕಿರುವುದು ಸೌಭಾಗ್ಯವಾಗಿದೆ. 87ನೇ ಸಮ್ಮೇಳನಕ್ಕೆ ರಾಜ್ಯದ ಅನೇಕ ಜಿಲ್ಲೆಯಿಂದ ಬಂದ ಸಾಹಿತಿಗಳು ಮತ್ತು ಕನ್ನಡ ಅಭಿಮಾನಿಗಳು ಬಹಳ ಸಂಭ್ರಮಿಸಿದ್ದಾರೆ ಎಂದು ಹೇಳಿದರು.

ಸಮ್ಮೇಳನ ನಡೆಸಲು ಸೂಕ್ತ ಸ್ಥಳ ಆಯ್ಕೆ ಮಾಡುವಲ್ಲಿ ಮುಖ್ಯ ಕಾರಣಕರ್ತರಾದ ಎಸ್ಪಿ, ಡಿಸಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ ಸ್ಥಳ ನೀಡಿ ಸಹಕರಿಸಿದ ಎಲ್ಲರಿಗೂ ಧನ್ಯವಾದ ಎಂದ ಅವರು, ಕನ್ನಡ ರಥ ರಾಜ್ಯದಾದ್ಯಂತ ಸಂಚರಿಸಿ ಹಾಗೂ ಮಂಡ್ಯ ಜಿಲ್ಲೆಯ ಎಲ್ಲಾ ಪಂಚಾಯಿತಿಗಳಿಗೆ ಭೇಟಿ ನೀಡಿ ಸಮ್ಮೇಳನದ ಯಶಸ್ವಿಗೆ ಕಾರಣವಾಯಿತು. ಈ ಮೂಲಕ ಹೊರಜಿಲ್ಲೆಯವರು ಸಮ್ಮೇಳನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕನ್ನಡಕ್ಕಾಗಿ ಓಟ ಎಂಬ ಶೀರ್ಷಿಕೆ ಅಡಿಯಲ್ಲಿ ಜರುಗಿದ ಮ್ಯಾರಥಾನ್ ಓಟವು ಸಮ್ಮೇಳನದ ಪ್ರಚಾರ ಹಾಗೂ ಯಶಸ್ವಿಗೆ ಪಾತ್ರವಾಗಿದೆ. ಮ್ಯಾರಥಾನ್ ಓಟದಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ಕೃತಜ್ಞತೆಯನ್ನು ಸಲ್ಲಿಸಿದರು.

ಸಮ್ಮೇಳನದಲ್ಲಿ ವಿದೇಶಿಗರು ಭಾಗಿ: ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಒಟ್ಟು 18 ದೇಶಗಳಿಂದ 250 ವಿದೇಶಿ ಕನ್ನಡಿಗರು ಭಾಗವಹಿಸಿದ್ದು, ಅತ್ಯುತ್ತಮವಾಗಿ ಜರುಗಿದ ಸಮ್ಮೇಳನಕ್ಕೆ ವಿದೇಶಗಳಿಂದ ಪ್ರಶಂಸೆಗಳು ಬರುತ್ತಿವೆ ಎಂದರು.

ಕನ್ನಡ ಭವನ ನಿರ್ಮಾಣ: 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣಾರ್ಥವಾಗಿ ಮಂಡ್ಯ ಜಿಲ್ಲೆಯಲ್ಲಿ ಕನ್ನಡ ಭವನವನ್ನು ನಿರ್ಮಾಣ ಮಾಡಲಾಗುವುದು. ಭವನದ ನಿರ್ಮಾಣಕ್ಕೆ ಸೂಕ್ತ ಸ್ಥಳವನ್ನು ಹುಡುಕಿ ಶೀಘ್ರದಲ್ಲೇ ಶಂಕುಸ್ಥಾಪನೆಯನ್ನು ಕೈಗೊಳ್ಳಲಾಗುವುದು. ಸಮ್ಮೇಳನಕ್ಕೆ ಪ್ರತಿಯೊಬ್ಬರೂ ಸಹಕರಿಸಿದಂತೆ ಮುಂದಿನ ದಿನದಲ್ಲೂ ಇದೇ ರೀತಿಯ ಸಹಕಾರ ಇರಲಿ. ಎಲ್ಲರೂ ಸೇರಿ ಜಿಲ್ಲೆಯ ಅಭಿವೃದ್ಧಿಗಾಗಿ ಶ್ರಮಿಸೋಣ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಶಾಸಕರಾದ ಪಿ.ರವಿಕುಮಾರ್ ಗಣಿಗ, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಶೇಖ್ ತನ್ವಿರ್ ಆಸೀಫ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮುಡಾ ಅಧ್ಯಕ್ಷ ನಹೀಂ, ಕಸಾಪ ಜಿಲ್ಲಾ ಸಂಚಾಲಕಿ ಡಾ.ಮೀರಾಶಿವಲಿಂಗಯ್ಯ, ಗೌರವ ಕಾರ್ಯದರ್ಶಿ ಹರ್ಷ ಪಣ್ಣೆದೊಡ್ಡಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

24 ಗಂಟೆಯೂ ಕುಡಿಯುವ ನೀರು



ಶ್ರೀರಂಗಪಟ್ಟಣ, ಡಿ.24– ಪಟ್ಟಣದ ಪುರಸಭಾ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಿಗೆ 24 ಗಂಟೆಗಳ ಕಾಲ ಕುಡಿಯುವ ನೀರು ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪುರಸಭಾ ಹಿರಿಯ ಸದಸ್ಯ ಹಾಗೂ ಸರ್ಕಾರದ ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷ ಎಂ.ಎಲ್ ದಿನೇಶ್ ತಿಳಿಸಿದ್ದಾರೆ.

ಪಟ್ಟಣದ ಪುರಸಭಾ ಸಭಾಂಗಣದಲ್ಲಿ ಸರ್ಕಾರದ ವತಿಯಿಂದ ಇತ್ತೀಚೆಗೆ ಪುರಸಭಾ ನಾಮನಿರ್ದೇಶಿತ ಸದಸ್ಯರಾಗಿ ನೇಮಕಗೊಂಡ ಸದಸ್ಯರಿಗೆ ಅಭಿನಂದನೆ ಸಲ್ಲಿಸಿ ನಂತರ ಅವರು ಮಾತನಾಡಿದರು.

ಈಗಾಗಲೇ ಮಂಡ್ಯ ನೀರು ಸರಬರಾಜು ಇಲಾಖೆಯಿಂದ 22.5 ಕೋಟಿ ರೂ. ವೆಚ್ಚದಲ್ಲಿ ಶುದ್ಧ ಕುಡಿಯುವ ನೀರು ಪೂರೈಸುವ ಟೆಂಡರ್ ಪ್ರಕ್ರಿಯೆ ಮುಗಿದಿದೆ. ಶೀಘ್ರ ಕಾಮಗಾರಿ ಆರಂಭಗೊಂಡು ಪುರಜನರ ಬಹು ದಿನಗಳ ಬೇಡಿಕೆಯಾಗಿದ್ದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಲಿದೆ. ಜೊತೆಗೆ 22 ಕೋಟಿ ರೂ. ವೆಚ್ಚದಲ್ಲಿ ಹೊಸದಾಗಿ ಹಾಗೂ ಸಂಪರ್ಕ ಕಡಿತಗೊಂಡಿದ್ದ ಯುಜಿಡಿ ಕಾಮಗಾರಿ ಸಹ ಆರಂಭಗೊಳ್ಳಲಿದೆ ಎಂದು ತಿಳಿಸಿದರು.

ಪುರಸಭಾ ಸದಸ್ಯ ಎಸ್.ನಂದೀಶ್ ಮಾತನಾಡಿ, ಪಟ್ಟಣದ 6, 7 ಹಾಗೂ 14ನೇ ವಾರ್ಡ್‌ಗಳ ಜನರು ಹಲವಾರು ವರ್ಷಗಳಿಂದ ಕುಡಿಯುವ ನೀರಿಗಾಗಿ ಭಾರಿ ತೊಂದರೆ ಅನುಭವಿಸುತ್ತಿದ್ದು, ಈ ಸಂಬಂಧ ಪುರಸಭೆ ಹಾಗೂ ಶಾಸಕರ ಗಮನಕ್ಕೆ ತಂದು ನೀರಿನ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಲಾಗಿತ್ತು ಇದೀಗ 22.5 ಕೋಟಿ ರೂ. ವೆಚ್ಚದಲ್ಲಿ ಮುಂದಿನ 1 ತಿಂಗಳಲ್ಲಿ ಕಾಮಗಾರಿ ಆರಂಭಗೊಳ್ಳಲಿದ್ದು, ಇಲ್ಲಿನ ನಿವಾಸಿಗಳ ಕುಡಿಯುವ ನೀರಿನ ಸಮಸ್ಯೆ ಶಾಶ್ವತವಾಗಿ ಬಗೆಹರಿಯಲಿದೆ ಎಂದು ಹೇಳಿದರು.

ನಂತರ ಪುರಸಭಾ ನಾಮನಿರ್ದೇಶಿತ ಸದಸ್ಯರಾದ ಕೆ.ಬಿ.ಬಸವರಾಜು, ಪ್ರದೀಪ, ಲಿಯಾಜ್‌ಪಾಷ, ಪ್ರದೀಪ್‌ಕುಮಾರ್ ಹಾಗೂ ನಾಗರತ್ನ ಅವರನ್ನು ಅಭಿನಂದಿಸಲಾಯಿತು.

ಮೇಲುಕೋಟೆ ಚೆಲುವನಾರಾಯಣಸ್ವಾಮಿಯ ವಜ್ರಾಂಗಿ ಆಭರಣ ಅವ್ಯವಹಾರದ ಆರೋಪಿಯ 'ಜ್ಞಾನನಿಧಿ ಪ್ರಶಸ್ತಿ'ಗೆ ಬ್ರೇಕ್



ಮೇಲುಕೋಟೆ: ರಾಜ್ಯದಲ್ಲಿ ಸಂಚಲನಕ್ಕೆ ಕಾರಣವಾಗಿದ್ದ ಮೇಲುಕೋಟೆ ಚೆಲುವನಾರಾಯಣಸ್ವಾಮಿಯ ವಜ್ರಾಂಗಿ ಆಭರಣದ ಅವ್ಯವಹಾರ ಪ್ರಕರಣದಲ್ಲಿ ಆರೋಪ ಸಾಬೀತಾಗಿ ಅಮಾನತ್ತಾಗಿರುವ ಅರ್ಚಕ ನರಸರಾಜ ಭಟ್‌ಗೆ ರಾಜ್ಯ ಮಟ್ಟದ ಜ್ಞಾನನಿಧಿ ಪ್ರಶಸ್ತಿ ನೀಡುವುದಕ್ಕೆ ಧಾರ್ಮಿಕದತ್ತಿ ಇಲಾಖೆ ಬ್ರೇಕ್ ಹಾಕಿದೆ.

ಸರ್ಕಾರದಿಂದಲೇ ಅನುದಾನ ಪಡೆಯುವ ಭಗವದ್ರಾಮಾನುಜ ರಾಷ್ಟ್ರೀಯ ಸಂಶೋಧನಾ ಸಂಸತ್‌ನ ಪ್ರಶಸ್ತಿ ಆಯ್ಕೆ ಸಮಿತಿ ನರಸರಾಜಭಟ್‌ನನ್ನು ಜ್ಞಾನನಿಧಿ ಪ್ರಶಸ್ತಿಗೆ ಆಯ್ಕೆ ಮಾಡಿ ಸಂಸ್ಕೃತ ವಿವಿ ಸಹಯೋಗದಲ್ಲಿ ಡಿ.27ರಂದು ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಧಾರ್ಮಿಕ ದತ್ತಿ ಆಯುಕ್ತರಿಂದಲೇ ಪ್ರಶಸ್ತಿ ಪ್ರದಾನ ಮಾಡಿಸುತ್ತಿರುವುದಾಗಿ ಆಹ್ವಾನಪತ್ರಿಕೆ ಮುದ್ರಿಸಿದ್ದು ವಿವಾದಕ್ಕೆ ಕಾರಣವಾಗಿತ್ತು.

ಸಾರ್ವಜನಿಕರಿಂದ ವ್ಯಾಪಕ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ದಾಖಲೆಗಳು ಹಾಗೂ ನ್ಯಾಯಾಲಯದ ಆದೇಶಗಳನ್ನು ಪರಿಶೀಲಿಸಿದ ಧಾರ್ಮಿಕದತ್ತಿ ಆಯುಕ್ತ ಡಾ.ಎಂ.ವಿ.ವೆಂಕಟೇಶ್ ಸಂಸ್ಕೃತ ವಿವಿ ಕುಲಪತಿ ಡಾ.ಎಸ್.ಅಹಲ್ಯರೊಂದಿಗೆ ಚರ್ಚಿಸಿ ವಿವಾದಿತ ಅರ್ಚಕನಿಗೆ ಜ್ಞಾನನಿಧಿಪ್ರಶಸ್ತಿ ನೀಡುವುದನ್ನು ಕೈಬಿಟ್ಟು ವಿದ್ಯಾರ್ಥಿಗಳಿಗೆ ದತ್ತಿಸ್ಮಾರಕ ಸ್ಪರ್ಧೆಗಳು, ಕೈಂಕರ್ಯಪರರಿಗೆ ವಿದ್ವತ್ ಸನ್ಮಾನ, ಗ್ರಂಥಲೋಕಾರ್ಪಣೆ ಕಾರ್ಯಕ್ರಮಗಳನ್ನು ಮಾತ್ರ ನಡೆಸುವಂತೆ ಖಡಕ್ ಸೂಚನೆ ನೀಡಿದ್ದಾರೆ. ಇದರಿಂದ ಆಭರಣ ಅವ್ಯವಹಾರದ ಪ್ರಕರಣಗಳು ಮತ್ತೆ ಮುನ್ನೆಲೆಗೆ ಬಂದಿವೆ.

ಧಾರ್ಮಿಕ ದತ್ತಿ ಆಯುಕ್ತ ಡಾ.ವೆಂಕಟೇಶ್‌ರವರ ಖಡಕ್ ನಿರ್ಧಾರವನ್ನು ಸ್ವಾಗತಿಸಿರುವ ಈಶ ಮುರುಳಿ ಭಾ.ವಂ. ರಾಮಪ್ರಿಯ ಅವರು, ಕೋಟ್ಯಂತರ ಭಕ್ತರ ಆಸ್ತಿಕ ತಾಣವಾಗಿರುವ ಶ್ರೀಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ಅರ್ಚಕರಾಗಿದ್ದ ಎಸ್.ನರಸರಾಜ ಭಟ್ಟರ್ ವಜ್ರಾಂಗಿ ಆಭರಣ ಅವ್ಯವಹಾರ ನಡೆಸಿ ಭಕ್ತರ ಭಾವನೆಗೆ ಧಕ್ಕೆ ತಂದಿದ್ದಾರೆ. ಪಾಂಡವಪುರ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಅವ್ಯಹಾರ ಸಾಬೀತಾಗಿ ಆದೇಶ ಹೊರಬಿದ್ದ ನಂತರ ಈಗಿನ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ವಜ್ರಾಂಗಿ ಅವ್ಯಹಾರವನ್ನು ಅಂದು ಸದನದಲ್ಲಿ ಪ್ರಸ್ತಾಪಿಸಿದ್ದ ಕಾರಣ ಧಾರ್ಮಿಕದತ್ತಿ ಇಲಾಖೆ ಅರ್ಚಕ ನರಸರಾಜಭಟ್ಟರನ್ನು ಸೇವೆಯಿಂದ ಅಮಾನತು ಮಾಡಿದೆ. ಎಲ್ಲಾ ವಿಚಾರಣೆಗಳ ನಂತರ 2016ರಲ್ಲೇ ಮಂಡ್ಯ ಜಿಲ್ಲಾಧಿಕಾರಿ ಆರೋಪಿ ಅರ್ಚಕನನ್ನು ಸೇವೆಯಿಂದ ವಜಾ ಮಾಡಿ ನಿಯಮಾನುಸಾರ ಬೇರೆ ಅರ್ಚಕರನ್ನು ನೇಮಿಸಬೇಕು ಎಂದು ಧಾರ್ಮಿಕದತ್ತಿ ಇಲಾಖೆಗೆ ಅಂತಿಮ ವಿಚಾರಣಾ ವರದಿ ಸಲ್ಲಿಸಿದ್ದಾರೆ ಎಂದರು.

ಅರ್ಚಕರನ್ನು ವಜಾ ಮಾಡಿ: ಮಂಡ್ಯ ಜಿಲ್ಲಾಧಿಕಾರಿ ಅರ್ಚಕನನ್ನು ವಜಾ ಮಾಡುವಂತೆ ಧಾರ್ಮಿಕದತ್ತಿ ಇಲಾಖೆಗೆ ಅಂತಿಮ ವರದಿ ನೀಡಿದ್ದಾರೆ. ಅಮಾನತ್ತಾಗಿರುವ ಆರೋಪಿ ಅರ್ಚಕನಿಗೆ ಉಚ್ಚ ನ್ಯಾಯಾಲಯ, ಕೆಳಹಂತದ ನ್ಯಾಯಾಲಯಗಳು ನಿರೀಕ್ಷಣಾ ಜಾಮೀನು ನೀಡದೆ ಪೊಲೀಸರ ಮುಂದೆ ವಿಚಾರಣೆಗೆ ಹಾಜರಾಗಬೇಕೆಂದು ನೀಡಿದ ಆದೇಶಕ್ಕೆ ಗೌರವ ನೀಡದೆ ತಲೆ ಮರೆಸಿಕೊಂಡು, ವಿಚಾರಣೆಯನ್ನೇ ಎದುರಿಸದೆ ಪೊಲೀಸರಿಂದ ಬಿ ರಿಪೋರ್ಟ್ ಹಾಕಿಸಿಕೊಂಡು ಸಾರ್ವಜನಿಕವಾಗಿ ಓಡಾಡುತ್ತಿದ್ದಾರೆ. ಧಾರ್ಮಿಕದತ್ತಿ ಇಲಾಖೆ ಕಾನೂನುಬದ್ಧವಾಗಿ ನಡೆಸಿರುವ ಎಲ್ಲಾ ವಿಚಾರಣೆ ವರದಿಗಳನ್ನು ಮುಚ್ಚಿಟ್ಟು ಇಲಾಖೆ ವಿಚಾರಣೆಯನ್ನೇ ಮಾಡಿಲ್ಲ ಎಂದು ಹೇಳಿ ಅರ್ಚಕನಾಗಿ ಮುಂದುವರೆಯಲು ಅವಕಾಶಕೊಡಿ ಎಂದು ಹೈಕೋರ್ಟ್ ಮೊರೆಹೋಗಿದ್ದಾನೆ ಆದರೆ ಹೈಕೋರ್ಟ್ ವಿಚಾರಣೆ ಮುಕ್ತಾಯವಾಗುವವರೆಗೆ ಅರ್ಚಕನನ್ನಾಗಿ ನೇಮಿಸಬೇಡಿ ಎಂದು ಆದೇಶಿಸಿದೆ. ಇದರಿಂದಲೇ ಅರ್ಚಕನ ಅನುಕೂಲಸಿಂಧು ನಡವಳಿಕೆ ಸಾಬೀತಾಗಿದ್ದು, ದಾರ್ಮಿಕದತ್ತಿ ಇಲಾಖೆ ಮಂಡ್ಯ ಜಿಲ್ಲಾಧಿಕಾರಿ ಸಲ್ಲಿಸಿದ ವರದಿಯನ್ನು ಅನುಷ್ಠಾನ ಮಾಡಬೇಕಿದೆ ಎಂದು ಈಶ ಮುರುಳಿ ಅಗ್ರಹಿಸಿದ್ದಾರೆ.

ನಾಳೆ ಮಂಡ್ಯದಲ್ಲಿ ದಿಶಾ ಸಭೆ

ಮಂಡ್ಯ,ಡಿ.24– ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ ಸಭೆ)ಯನ್ನು ಡಿಸೆಂಬರ್ 26ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿಯ ಸದಸ್ಯ ಕಾರ್ಯದರ್ಶಿ ಶೇಖ್ ತನ್ವಿರ್ ಆಸೀಫ್ ಅವರು ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಭಕ್ತಿಭಾವದ ಕ್ರಿಸ್‌ಮಸ್ ಆಚರಣೆ

ಇದು ಈ ವರ್ಷದ ಕ್ರಿಸ್‌ಮಸ್ ಪ್ರಮುಖ ಆಕರ್ಷಣೆಯಾಗಿದ್ದು, ಇದನ್ನು ಕಣ್ತುಂಬಿಕೊಂಡ ಸಾವಿರಾರು ಮಂದಿ ಕಲಾವಿದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಭ್ರಮ–ಸಡಗರ: ಸೇಂಟ್ ಫಿಲೋಮಿನಾ ಚರ್ಚ್, ಸೇಂಟ್ ಬಾರ್ತಲೋಮಿಯಾ ಚರ್ಚ್ ಸೇರಿದಂತೆ ಮೈಸೂರು ನಗರಾದ್ಯಂತ ಇರುವ ಎಲ್ಲಾ ಚರ್ಚ್‌ಗಳಲ್ಲಿ ಹಬ್ಬದ ವಾತಾವರಣ ಕಳೆಗಟ್ಟಿದೆ. ಭಕ್ತಾದಿಗಳು ಹಾಗೂ ಪ್ರವಾಸಿಗರು ಚರ್ಚ್‌ಗಳಿಗೆ ಭೇಟಿ ನೀಡಿ ಯೇಸುವಿನ ದರ್ಶನ ಪಡೆದು ವಿಶೇಷ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ವೆಸ್ಲಿ, ಕ್ಯಾಥೆಡ್ರಲ್, ಲಕ್ಷ್ಮೀಪುರಂನ ಹಾರ್ಡ್ವಿಕ್, ಕರುಣಾಪುರದ ಯೇಸು ಕರುಣಾಲಯ, ತಿಲಕ್‌ನಗರದ ಸಾಡೆ ಮೆಮೋರಿಯಲ್ ಚರ್ಚ್, ಹುಣಸೂರು ರಸ್ತೆಯ ಇನ್‌ಫೆಂಟ್ ಜೀಸಸ್ ಚರ್ಚ್, ಶ್ರೀರಾಂಪುರದ ಅವರ್ ಲೇಡಿ ಆಫ್ ಪರ್ಪೆಚ್ಯುವಲ್ ಸಕಲ್ ಚರ್ಚ್ ಮತ್ತು ಆರ್‌ಎಸ್ ನಾಯ್ಡುನಗರದ ಚರ್ಚ್‌ಗಳಲ್ಲಿ ವಿಶೇಷ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು, ಬುಧವಾರ ಬೆಳಗ್ಗೆ 8.30ರಿಂದ ಚರ್ಚ್‌ಗಳಲ್ಲಿ ಕನ್ನಡ, ಇಂಗ್ಲಿಷ್, ತಮಿಳು ಸೇರಿದಂತೆ ವಿವಿಧ ಭಾಷೆಯ ಸಾಮೂಹಿಕ ಪ್ರಾರ್ಥನೆ ನಡೆಯಲಿದೆ. ಕ್ರೈಸ್ತ ಸಮುದಾಯದವರು ಹಬ್ಬದ ಹಿನ್ನೆಲೆಯಲ್ಲಿ ಭರ್ಜರಿ ಶಾಪಿಂಗ್ ಮಾಡಿದ್ದು, ತಮ್ಮ ಮನೆಗಳನ್ನೂ ಶೃಂಗಾರಗೊಳಿಸಿ ಹಬ್ಬ ಆಚರಿಸಿ, ಪರಸ್ಪರ ಸಂದೇಶ ವಿನಿಮಯ ಮಾಡಿಕೊಳ್ಳುತ್ತಿದ್ದಾರೆ.

ಸೇಂಟ್ ಬಾರ್ತಲೋಮಿಯಾ ಚರ್ಚ್‌ನಲ್ಲಿ ಮಂಗಳವಾರ ಸಂಜೆ 6.30ಕ್ಕೆ ದೀಪಾಲಂಕಾರ ಸೇವೆ ಜರುಗಿದ್ದು, ಬುಧವಾರ ಬೆಳಗ್ಗೆ 6 ಗಂಟೆಗೆ ಮೊದಲ ಸೇವೆ, 8.30ಕ್ಕೆ ಎರಡನೇ ಸೇವೆ ನಂತರ ಪ್ರೆಸ್ ಬೈಟರ್ ಪಾದ್ರಿ ಡೇನಿಯಲ್ ಜೇ. ಕೌಂಡಿನ್ಯ ನೇತೃತ್ವದಲ್ಲಿ ಪವಿತ್ರ ಕಮ್ಯೂನಿಯನ್‌ನೊಂದಿಗೆ ಮುಕ್ತಾಯಗೊಳ್ಳಲಿದೆ. ಡೇನಿಯಲ್ ಅವರು ಕ್ರಿಸ್‌ಮಸ್ ಸಂದೇಶ ನೀಡಿದ್ದು, ಜೀಸಸ್ ಕ್ರಿಸ್ತನ ಜನನವು ಸಾರ್ವತ್ರಿಕವಾಗಿ ಶಾಂತಿ, ಪ್ರೀತಿ ಮತ್ತು ಭಗವಂತ ನಮ್ಮ ನಡುವೆ ಇರುವ ಭರವಸೆಯ ಸಂದೇಶವನ್ನು ಸಾರುತ್ತದೆ. ಈ ಹಬ್ಬದ ಮೂಲಕ ಅಡ್ಡ ಸಾಂಸ್ಕೃತಿಕ ಆತಂಕ, ಪ್ರಕ್ಷುಬ್ಧತೆ, ನಿರ್ಲಕ್ಷ್ಯ, ಅಧಃಪತನ, ಅನಿಶ್ಚಿತತೆಯ ವಾತಾವರಣವನ್ನು ಹೋಗಲಾಡಿಸಿ, ಜೀವನದಲ್ಲಿ ಭರವಸೆಯ ಬೆಳಕನ್ನು ಮೂಡಿಸುತ್ತದೆ ಎಂದು ತಿಳಿಸಿದ್ದಾರೆ.

ಆಣೆ–ಪ್ರಮಾಣ ಮಾಡಲಿ

ನನ್ನತ್ರ ಸಾಕ್ಷಿ ಇದೆ. ಲಕ್ಷ್ಮಿ ಹೆಬ್ಬಾಳ್ಕರ್‌ನ ನೋಡಿ ಸಾವಿರಾರು ಜನ ರಾಜಕಾರಣಕ್ಕೆ ಬರಲು ಮುಂದಾಗಿದ್ದಾರೆ. ಈಗ ಹೋರಾಟ ಮಾಡಲಿಲ್ಲ ಅಂದರೆ, ನನ್ನ ಆತ್ಮಸಾಕ್ಷಿಗೆ ವಂಚನೆ ಮಾಡಿದಂತೆ ಆಗುತ್ತದೆ. ನಾನು ಸಂಘರ್ಷ, ಅಪಮಾನ ಮೆಟ್ಟಿನಿಂತು ಬೆಳೆದಿದ್ದೇನೆ. ಆದರೆ, ಈ ಘಟನೆಯಿಂದ ನನ್ನ ಮನಸ್ಸಿಗೆ ಆಘಾತ ಉಂಟಾಗಿದೆ ಎಂದರು. ಕೊಲೆಗಾರ ಎನ್ನುವಂತಹ ಪ್ರಶ್ನೆ ಯಾಕೆ ಬಂತು ಎಂದು ಕೇಳಿದಾಗ ಸಿ.ಟಿ ರವಿ ಆಕ್ಸಿಡೆಂಟ್ ಮಾಡಿರುವ ವೀಡಿಯೋ ನನ್ನ ಬಳಿಯಿದೆ. ನಾನು ಕೊಲೆಗಾರ ಅಂದಿಲ್ಲ ಅಂತ ಹೇಳುತ್ತಿಲ್ಲ. ಅವರ ಹಾಗೆ ನನಗೆ ಚಪಲಾನಾ ಪ್ರತಿಯೊಂದಕ್ಕೆ ಎದ್ದು ನಿಂತು ಮಾತಾಡೋದಕ್ಕೆ ನಾನು ಗಾಂಧಿ ಹಾಕಿಕೊಟ್ಟಂತಹ ಮಾರ್ಗದಲ್ಲಿ ನಡೆಯುತ್ತಿರುವವಳು, ಗೋಡ್ಸೆ ಮಾರ್ಗದಲ್ಲಿ ನಡೆಯುವಂತಹವರಲ್ಲ ಎಂದರು.

ಆ ರೀತಿಯ ಯಾವುದೇ ವಿಡಿಯೋ ಇಲ್ಲ, ಅದು ನಕಲಿ ಎಂಬ ಸಭಾಪತಿಗಳ ಹೇಳಿಕೆ ಕುರಿತು ಮಾತನಾಡಿದ ಲಕ್ಷ್ಮಿ ಹೆಬ್ಬಾಳ್ಕರ್, ಸುಮಾರು ಸಂದರ್ಭದಲ್ಲಿ ನನಗೆ ಮಾರ್ಗದರ್ಶನ ಮಾಡಿದವರು ಸಭಾಪತಿಗಳು. ನನಗೆ ಫೋನ್ ಮಾಡಿ ಸಾಂತ್ವನ ಹೇಳಿದ್ದಾರೆ. ಅವರು ಯಾಕೆ ಈ ರೀತಿ ಹೇಳಿದ್ದಾರೋ ನನಗೆ ಗೊತ್ತಿಲ್ಲ, ಅವರ ರೂಲಿಂಗ್ ಬಗ್ಗೆ ಮಾತಾಡುವಷ್ಟು ಹಿರಿಯಳೂ ನಾನಲ್ಲ ಎಂದು ಸ್ಪಷ್ಟಪಡಿಸಿದರು.

ನ್ಯಾಯಾಲಯ ಸೂಚನೆ

ಹೈಕೋರ್ಟ್‌ನ ಏಕಸದಸ್ಯ ಪೀಠ ವಿಚಾರಣೆಯನ್ನು ಜನವರಿ 28ಕ್ಕೆ ಮುಂದೂಡಿದೆ ಎಂಬ ವಿಷಯವನ್ನು ಜನಪ್ರತಿನಿಧಿಗಳ ನ್ಯಾಯಾಲಯದ ಗಮನಕ್ಕೆ ತಂದರು.

ಆದ ಕಾರಣ ಜನಪ್ರತಿನಿಧಿಗಳ ನ್ಯಾಯಾಲಯ ಕೂಡ ಈ ಪ್ರಕರಣವನ್ನು ಮುಂದೂಡಬೇಕು ಎಂದು ವಂಸತ್ ಕುಮಾರ್ ಮನವಿ ಮಾಡಿದರು. ಈ ಬಗ್ಗೆ ವಾದ ಆಲಿಸಿದ ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಮೂರ್ತಿ ಸಂತೋಷ್ ಗಜಾನನ ಭಟ್ ಅವರು ಮುಂದಿನ ವಿಚಾರಣೆಯನ್ನು ಜನವರಿ 30ಕ್ಕೆ ಮುಂದೂಡಿ ಅಂದು ವರದಿ ಸಲ್ಲಿಸುವಂತೆ ಸೂಚನೆ ನೀಡಿದರು. ಮುಡಾದ ಹಿಂದಿನ ಆಯುಕ್ತ ದಿನೇಶ್ ಕುಮಾರ್ ಸೇರಿದಂತೆ ಕೆಲವರನ್ನು ಲೋಕಾಯುಕ್ತರು ವಿಚಾರಣೆ ಮಾಡಬೇಕಿದ್ದು, ಉಳಿದಿರುವ ಒಂದು ತಿಂಗಳ ಅವಧಿಯಲ್ಲಿ ಎಲ್ಲರ ವಿಚಾರಣೆ ಪೂರ್ಣಗೊಳಿಸಿ, ಜನವರಿ 30 ರಂದು ಅಂತಿಮ ವರದಿ ಸಲ್ಲಿಸುವ ಸಾಧ್ಯತೆ ಇದೆ.

ಸಿಐಡಿ ತನಿಖೆ

ವಿಶ್ರಮಿಸು ವುದಿಲ್ಲ. ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಭಾಪತಿ ಅವರನ್ನು ಕೋರುವುದಾಗಿ ತಿಳಿಸಿದ್ದರು. ಇದರ ನಡುವೆ ಲಕ್ಷ್ಮೀ ಹೆಬ್ಬಾಳ್ಕರ್ ಬೆಂಬಲಿಗರು, ತಮ್ಮ ಹತ್ಯೆಗೆ ಸಂಚು ರೂಪಿಸಿದ್ದರು ಮತ್ತು ಹಲ್ಲೆ ನಡೆಸಿದ್ದಾರೆಂದು ರವಿ ಅವರು ನೀಡಿದ ದೂರು ದಾಖಲಾಗಿದೆ.

ಅಶ್ಲೀಲ ಪದ ಬಳಸಿದ ಆರೋಪದ ದಿನವೇ ರವಿ ಅವರನ್ನು ಬೆಳಗಾವಿ ಪೊಲೀಸರು ಬಂಧಿಸಿದ್ದರು, ಮರುದಿನವೇ ಹೈಕೋರ್ಟ್ ಜಾಮೀನು ನೀಡಿ ತಕ್ಷಣ ಬಿಡುಗಡೆ ಮಾಡುವಂತೆ ಆದೇಶಿಸಿತ್ತು.

ಪ್ರಕರಣ ಸದನದ ವ್ಯಾಪ್ತಿ ಮೀರಿ ಹೋಗುತ್ತಿದೆ. ಸದನವೇ ಶ್ರೇಷ್ಠ ಎಂದಮೇಲೆ ಅದರ ವ್ಯಾಪ್ತಿ ಮೀರಬಾರದು.

–ಡಾ.ಅಶ್ವಥ್‌ನಾರಾಯಣ, ಮಾಜಿ ಉಪ ಮುಖ್ಯಮಂತ್ರಿ

ಸತ್ಯ ಹೊರಬರಲೆಂದೇ ಈ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸುತ್ತಿದೆ. ಇದರಿಂದ ಸತ್ಯ ಸಂಗತಿ ಹೊರಬರುತ್ತದೆ ಎಂಬ ವಿಶ್ವಾಸವಿದೆ.

–ಡಾ.ಹೆಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ


ಸಿಐಡಿಯವರು ಇವರೇನು (ಸರ್ಕಾರ) ಹೇಳುತ್ತಾರೆ ಅದನ್ನು ಬರೆದುಕೊಡುತ್ತಾರೆ. ಅಷ್ಟೇ ತಾನೆ. ಇದರಿಂದ ಏನೂ ಪ್ರಯೋಜನ ವಾಗದು. ಬೇಕಾದಂತೆ ಮಾಡಿಕೊಳ್ಳುತ್ತಾರೆ.

–ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಆಣೆ ಪ್ರಮಾಣ ಅಪ್ರಸ್ತುತ: ಸಿ.ಟಿ.ರವಿ

ಚಿಕ್ಕಮಗಳೂರು: ಪ್ರಕರಣ ತನಿಖೆ ಹಂತದಲ್ಲಿದೆ. ಪೊಲೀಸ್ ಕೇಸ್ ಆದ ಮೇಲೆ ಎಲ್ಲವೂ ಅಪ್ರಸ್ತುತ. ಕೇಸ್ ಆಗುವ ಮೊದಲೇ ಆಣೆ ಪ್ರಮಾಣದ ಬಗ್ಗೆ ಮಾತನಾಡಬಹುದಿತ್ತು ಎಂದು ಧರ್ಮಸ್ಥಳದಲ್ಲಿ ಆಣೆ ಪ್ರಮಾಣಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಆಹ್ವಾನಕ್ಕೆ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಪ್ರತಿಕ್ರಿಯಿಸಿದರು. ಮಂಗಳವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳದಲ್ಲಿ ಆಣೆ ಪ್ರಮಾಣವೆಲ್ಲವೂ ಮುಗಿದ ಕಥೆ. ಅವರು ನನ್ನನ್ನು ಕೊಲೆಗಡುಕ ಎಂದು ಕರೆದಿದ್ದಾರೆ. ನಾನು ಯಾರನ್ನು ಕೊಲೆ ಮಾಡಿದ್ದೀನಿ ಎಂದ ಅವರು, ನಿನ್ನ ಮೇಲೆ ಕೆಸರು ಬಿದ್ದರೂ, ಕೆಸರಿನ ಮೇಲೆ ನೀನು ಬಿದ್ದರೂ ನೀನೇ ಸ್ನಾನ ಮಾಡಬೇಕು, ಕೆಸರಿನಿಂದ ದೂರ ಇದ್ದು ಬಿಡು ಎಂದು ನನಗೆ ದೊಡ್ಡವರು ಹೇಳಿದ್ದರು. ದೊಡ್ಡವರು ಹೇಳಿದಂತೆ ನಾನು ಇದರಿಂದ ದೂರ ಇರುತ್ತೇನೆ. ಎಲ್ಲವೂ ತನಿಖೆಯಿಂದ ಹೊರ ಬರಲಿ ಎಂದರು.

ಆರ್ಚ್ ಬಿಷಪ್ ಎಮಿರಿಟೋಸ್‌ರ ಕ್ರಿಸ್‌ಮಸ್ ಸಂದೇಶ



ಕ್ರಿಸ್ತ ಜಯಂತಿಯು ಸಮೀಪಿಸುತ್ತಿದ್ದಂತೆ, ವರ್ಣಿಸಲಸಾಧ್ಯವಾದ ಒಂದು ರೀತಿಯ ಆನಂದ ನಮ್ಮನ್ನು ಆವರಿಸಿಕೊಳ್ಳುತ್ತದೆ. ಇಂತಹ ಆನಂದಕ್ಕೆ ಮೂಲ ಕಾರಣ ಈ ಆಚರಣೆ ನಮ್ಮಲ್ಲಿ ಐಕ್ಯತೆ, ಸಹಬಾಳ್ವೆ, ಭ್ರಾತೃತ್ವ ಹಾಗೂ ಭರವಸೆಯನ್ನು ಮೂಡಿಸುವುದೇ ಆಗಿದೆ. ಈ ವಿಶೇಷ ಸಂದರ್ಭದಲ್ಲಿ ಕ್ರಿಸ್ತ ಜಯಂತಿಯ ಹಾರ್ದಿಕ ಶುಭಾಷಯಗಳನ್ನು ತಮ್ಮೆಲ್ಲರಿಗೂ ಕೋರಲು ಇಚ್ಛಿಸುತ್ತೇನೆ.

ಕ್ರಿಸ್ಮಸ್ ಎಂದಾಗ ಎಲ್ಲೆಲ್ಲೂ ಬೆಳಗುವ ಬಣ್ಣ ಬಣ್ಣದ ವಿದ್ಯುತ್ ದೀಪಗಳು ನಮ್ಮ ಕಣ್ಮುಂದೆ ಬರುತ್ತದೆ. ಪ್ರಭು ಯೇಸು ಕ್ರಿಸ್ತರು ಈ ಧರೆಗೆ ತಂದ ಬೆಳಕು ಈ ಕ್ರಿಸ್ತ ಜಯಂತಿಯಲ್ಲಿ ನಿಮ್ಮೆಲ್ಲರ ಬಾಳಲ್ಲೂ ಉದಯಿಸುವಂತೆ ಮಾಡಲಿ. ಈ ಕ್ರಿಸ್ಮಸ್ ಆಚರಣೆ ಕೇವಲ ಉಡುಗೊರೆಗಳನ್ನು ಬದಲಾಯಿಸಿಕೊಳ್ಳುವುದರಲ್ಲಿ ಅಥವಾ ಕೊಡುವುದರಲ್ಲಿ ಮಾತ್ರ ಅಡಗಿಲ್ಲ, ಬದಲಾಗಿ ನಾವು ಪರಸ್ಪರ ನಮ್ಮ ಸಮಯ, ಕಾಳಜಿ, ಮತ್ತು ದಯೆಯನ್ನು ಹಂಚುವ ಸುಖವನ್ನು ಕೊಡುವ ಹಬ್ಬವಾಗಿದೆ. ಈ ಕ್ರಿಸ್ಮಸ್ ನಮ್ಮ ಕೆಲಸದ ಒತ್ತಡದ ನಡುವೆಯೂ, ನಮ್ಮ ಕುಟುಂಬಗಳಿಗೆ ನಿಜವಾಗಿಯೂ ಅತ್ಯಗತ್ಯವಾಗಿರುವ ಐಕ್ಯತೆ, ಶಾಂತಿ, ಪ್ರೀತಿ, ನೆಮ್ಮದಿಗಾಗಿ ಸ್ವಲ್ಪ ಸಮಯವನ್ನು ಮೀಸಲಿಡಲು ಪ್ರಯತ್ನಿಸೋಣ. ಕ್ರಿಸ್‌ಮಸ್ ಇತಿಹಾಸದ ಒಂದು ಘಟನೆಯಷ್ಟೇ ಅಲ್ಲ; ಅದಕ್ಕಿಂತ ಹೆಚ್ಚು, ದೇವರು ಮಾನವನ ಮೇಲೆ ಇಟ್ಟಿರುವ ಪ್ರೀತಿಯನ್ನು ವ್ಯಕ್ತಪಡಿಸುವ ಮಾರ್ಗವಾಗಿದೆ.

ಕ್ರಿಸ್‌ಮಸ್ ಕೇವಲ ಕ್ರೈಸ್ತರು ಮಾತ್ರ ಆಚರಿಸುವ ಹಬ್ಬವಲ್ಲ. ವಿಶ್ವದ ಬಹುತೇಕ ಜನರು ತಮ್ಮದೇ ರೀತಿಯಲ್ಲಿ ಕ್ರಿಸ್‌ಮಸ್ ಆಚರಣೆಯನ್ನು ಮಾಡುತ್ತಾರೆ. ಪ್ರಸ್ತುತ ವಿಭಜಿತವಾಗಿದೆ ಎಂಬಂತೆ ಕಾಣುವ ವಿಶ್ವದಲ್ಲಿ, ಕ್ರಿಸ್‌ಮಸ್ ಪ್ರೀತಿಯ, ಭರವಸೆಯ ಮತ್ತು ಮಾನವೀಯತೆಯ ಅವಶ್ಯಕತೆಯನ್ನು ನೆನಪಿಸುತ್ತದೆ ಮತ್ತು ಅವು ನಮಗೆ ವಿಭಜಿಸುವಂತಹ ಕಾರಣಗಳಿಗಿಂತ ಬಹಳ ದೊಡ್ಡವು ಎಂಬ ಸತ್ಯವನ್ನು ಸಾರುತ್ತವೆ.

ಈ ಕ್ರಿಸ್‌ಮಸ್ ನಿಜವಾದ ಆನಂದದಿಂದ ನಿಮ್ಮನ್ನು ಉತ್ಸಾಹಗೊಳಿಸಲಿ ಎಂದು ನಾನು ಹಾರೈಸುತ್ತೇನೆ, ಪ್ರಾರ್ಥಿಸುತ್ತೇನೆ. ನಾವು ಆಚರಣೆ ಮಾಡುತ್ತಿರುವ ಯೇಸು ಕ್ರಿಸ್ತರ ಜನ್ಮದಿನವು ಅವರ ಅನೇಕ ಆಶೀರ್ವಾದಗಳಿಂದ ನಮ್ಮೆಲ್ಲರನ್ನು ಸಮೃದ್ಧರನ್ನಾಗಿಸಲಿ.

ಮತ್ತೊಮ್ಮೆ ತಮ್ಮೆಲ್ಲರಿಗೂ ಕ್ರಿಸ್ತ ಜಯಂತಿಯ (ಕ್ರಿಸ್ಮಸ್ ಹಬ್ಬದ) ಹಾಗೂ ಹೊಸ ವರ್ಷದ ಹಾರ್ದಿಕ ಶುಭಾಷಯಗಳು.

–ನಿವೃತ್ತ ಮಹಾಧರ್ಮಾಧ್ಯಕ್ಷರಾದ ಪರಮಪೂಜ್ಯ
ಬೆರ್ನಾರ್ಡ್ ಮೊರಾಸ್
ಪ್ರೇಷಿತ ಆಡಳಿತಾಧಿಕಾರಿಗಳು
ಮೈಸೂರು ಧರ್ಮಕ್ಷೇತ್ರ

ರಂಗೋಲಿಯಲ್ಲಿ ಚಿತ್ತಾರಗೊಂಡ ಯೇಸುಕ್ರಿಸ್ತ



ಚರ್ಚ್ ಮುಂದೆ ಯುವ ಕಲಾವಿದರು ಬಣ್ಣ ಬಣ್ಣದ ರಂಗೋಲಿಯಿಂದ ಅದ್ಭುತವಾಗಿ ಚಿತ್ರಿಸಿರುವ ಯೇಸುಕ್ರಿಸ್ತರ ಪ್ರತಿಬಿಂಬ.

ಕಾಮಾಕ್ಷಿ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆ ಮಾಡಿಸಿಕೊಂಡ ದರ್ಶನ್



ಮೈಸೂರು, ಡಿ. 24(ಆರ್‌ಕೆ)– ಬೆನ್ನು ನೋವಿನಿಂದ ಬಳಲುತ್ತಿರುವ ನಟ ದರ್ಶನ್ ಇಂದು ಬೆಳಗ್ಗೆ ಮೈಸೂರಿನ ಕುವೆಂಪು ನಗರದ ಕಾಮಾಕ್ಷಿ ಆಸ್ಪತ್ರೆ ಯಲ್ಲಿ ಆರೋಗ್ಯ ತಪಾಸಣೆ ಮಾಡಿಸಿ ಕೊಂಡರು. ಬೆಳಗ್ಗೆ 11.15 ಗಂಟೆ ವೇಳೆಗೆ ಆಸ್ಪತ್ರೆಗೆ ತೆರಳಿದ ಅವರು, ಮೂಳೆ ತಜ್ಞರಾದ ಡಾ.ಅಜಯ್ ಹೆಗ್ಡೆಯವರ ಬಳಿ ತಪಾಸಣೆ ಮಾಡಿಸಿಕೊಂಡರು. ವೈದ್ಯರ ಸಲಹೆಯಂತೆ ಎಕ್ಸ್‌ರೇ ಮಾಡಿಸಿ ಕೊಂಡ ಬಳಿಕ ವೈದ್ಯರ ಸಲಹೆ ಪಡೆದು ಅರ್ಧ ಗಂಟೆಯೊಳಗಾಗಿ ಕಾರ್‌ನಲ್ಲಿ ತಿ.ನರಸೀಪುರ ರಸ್ತೆಯ ತಮ್ಮ ತೋಟದ ಮನೆಗೆ ಹಿಂದಿರುಗಿದರು.

ವಿಷಯ ತಿಳಿಯುತ್ತಿದ್ದಂತೆಯೇ ದರ್ಶನ್ ಅಭಿಮಾನಿಗಳು ಆಸ್ಪತ್ರೆ ಬಳಿ ಜಮಾಯಿಸಿ 'ಡಿ–ಬಾಸ್' ಎಂದು ಘೋಷಣೆ ಕೂಗಿದರು. ಅಷ್ಟರಲ್ಲಿ ದರ್ಶನ್ ಅಲ್ಲಿಂದ ಹೊರಟು ಹೋಗಿ ದ್ದರು. ಕಡೆಗೆ ಆಸ್ಪತ್ರೆ ವೈದ್ಯರು ದರ್ಶನ್ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಮನೆಗೆ ಹೋದರು. ಏನೂ ತೊಂದರೆ ಇಲ್ಲ, ಚೆನ್ನಾಗಿದ್ದಾರೆ ಎಂದು ಹೇಳಿದಾಗ ಅಭಿಮಾನಿಗಳು ವಾಪಸ್ ಹೋದರು. ಸರಸ್ವತಿಪುರಂ ಠಾಣೆ ಪೊಲೀಸರು ಪರಿಸ್ಥಿತಿ ನಿಯಂತ್ರಿಸಿದರು.

ಇಂದು ಸರ್ವಸದಸ್ಯರ ಸಭೆ

ಮೈಸೂರು, ಡಿ.24– ನಾಗಮಂಗಲ ತಾಲೂಕು ಮೈಸೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಸರ್ವಸದಸ್ಯರ ಸಭೆ, ಸಾಧಕರಿಗೆ ಸನ್ಮಾನ ಹಾಗೂ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ನಗರದ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ನಾಳೆ(ಡಿ.25) ಬೆಳಗ್ಗೆ 9.30ಕ್ಕೆ ನಡೆಯಲಿದೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ ಬುಧವಾರ 25 ಡಿಸೆಂಬರ್ 2024

ಸಿ.ಟಿ.ರವಿ ಬಂಧನ ಪ್ರಕರಣ

ರಾಜ್ಯಪಾಲರ ಮೊರೆ ಹೋದ ಬಿಜೆಪಿ..!



ಬೆಂಗಳೂರು, ಡಿ. 24: ಎಂಎಲ್‌ಸಿ ಸಿ.ಟಿ.ರವಿ ವಿಚಾರದಲ್ಲಿ ರಾಜ್ಯ ಸರ್ಕಾರದ ನಡೆ ವಿರುದ್ಧ ಬಿಜೆಪಿ ರಾಜಭವನದ ಮೆಟ್ಟಿಲೇರಿದೆ ಲಕ್ಷ್ಮೀ ಹೆಬ್ಬಾಳ್ಕರ್‌ಗೆ ನಿಂದನೆ ಮಾಡಿದ ಆರೋಪ ಪ್ರಕರಣದಲ್ಲಿ ಸಿಟಿ ರವಿ ಅವರನ್ನು ರಾಜ್ಯ ಸರ್ಕಾರ ನಡೆಸಿಕೊಂಡ ರೀತಿ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿದ್ದಾರೆ.

ಇಂದು ವಿಪಕ್ಷ ನಾಯಕ ಆರ್. ಅಶೋಕ್ ನೇತೃತ್ವದಲ್ಲಿ ಬಿಜೆಪಿ ನಾಯಕರು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಭೇಟಿ ಮಾಡಿ ರಾಜ್ಯ ಸರ್ಕಾರದ ವಿರುದ್ಧ ದೂರು ನೀಡಿದ್ದಾರೆ. ಈ ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರ ಸಿಐಡಿಗೆ ವಹಿಸಿದ ಬೆನ್ನಲ್ಲೇ ಇತ್ತ ಬಿಜೆಪಿ ನಾಯಕರು ರಾಜ್ಯಪಾಲರಿಗೆ ದೂರು ನೀಡಿರುವುದು ಭಾರೀ ಕುತೂಹಲಕ್ಕೆ ಕಾರಣವಾಗಿದೆ.

ವಿಪಕ್ಷ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಶಾಸಕರಾದ ಜನಾರ್ದನರೆಡ್ಡಿ, ಸಿ.ಕೆ.ರಾಮಮೂರ್ತಿ, ಎಸ್.ರಘು, ಹಾವೇರಿ ಕ್ಷೇತ್ರದ ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ, ಪರಿಷತ್ ಸದಸ್ಯರಾದ ರವಿಕುಮಾರ್, ಕೇಶವ ಪ್ರಸಾದ್ ಅವರು ರಾಜಭವನದಲ್ಲಿ ಗವರ್ನರ್ ಭೇಟಿಯಾಗಿ ಸರ್ಕಾರದ ವಿರುದ್ಧ ದೂರು ನೀಡಿದರು.

ಬಿಜೆಪಿ ಎಂಎಲ್‌ಸಿ ಸಿಟಿ ರವಿ ಬಂಧನ ವಿಚಾರದಲ್ಲಿ ರಾಜ್ಯ ಸರ್ಕಾರದ ನಡೆ ಖಂಡನೀಯ. ಬಂಧನದ ವೇಳೆ ಸಾಂವಿಧಾನಿಕ ಹಾಗೂ ಕಾನೂನು ಉಲ್ಲಂಘನೆ ಆಗಿದೆ. ಪೊಲೀಸ್ ಇಲಾಖೆ ಮೂಲಕ ಅಧಿಕಾರ ದುರ್ಬಳಕೆ ಆಗಿದೆ. ರಾಜ್ಯಪಾಲರು ಕೂಡಲೇ ಮಧ್ಯಪ್ರವೇಶ ಮಾಡಿ ಬಂಧನ ಪ್ರಕರಣದಲ್ಲಿ ಸತ್ಯ ಶೋಧನೆ ನಡೆಸಬೇಕು ಎಂದು ಮನವಿ ಸಲ್ಲಿಸಿದೆ.

ಎಲ್ಲವನ್ನೂ ವಿವರಿಸಿದ್ದೇನೆ: ರಾಜ್ಯಪಾಲರಿಗೆ ದೂರು ನೀಡಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅಶೋಕ್, ಸಿ. ಟಿ. ರವಿ ಬಂಧನ, ನಂತರ ಪೊಲೀಸ್ ಟಾರ್ಚರ್, ನೂರಾರು ಕಿ.ಮೀ. ಅಲೆಸಿದ್ದ ಬಗ್ಗೆ ರಾಜ್ಯಪಾಲರಿಗೆ ದೂರು ನೀಡಿದ್ದೇವೆ. ಕಾಡು, ಕಬ್ಬಿನ ಗದ್ದೆ, ಜಲ್ಲಿ ಕ್ರಷರ್ ಎಲ್ಲಾ ಕರೆದುಕೊಂಡು ಹೋಗಿದ್ದು ಅನುಮಾನ ಹುಟ್ಟಿಸಿದೆ. ಕಾಡು, ಕಬ್ಬಿನ ಗದ್ದೆಗಳು ಪೊಲೀಸ್ ಠಾಣೆಗಿಂತಲೂ ಸೇಫಾ ಪೊಲೀಸ್ ಸ್ಟೇಷನ್ ಸೇಫ್ ಅಲ್ಲ ಎಂದು ಈ ಸರ್ಕಾರ ಜನರಿಗೆ ತಿಳಿಸಿದೆ. ಸರ್ಕಾರ ನಗೆ ಪಾಟಲಿಗೀಡಾಗಿದೆ ಎಂದು ವ್ಯಂಗ್ಯವಾಡಿದರು.

ಗೃಹ ಸಚಿವರು, ಸಿಎಂಗೆ ಗೊತ್ತಿಲ್ಲದೇ ಇವೆಲ್ಲಾ ನಡೆದಿದೆ. ಸಿ.ಟಿ. ರವಿಗೆ ಸೂಕ್ತ ರಕ್ಷಣೆ ಕೊಡಬೇಕು. ತನಿಖೆ ಪಾರದರ್ಶಕ ಆಗಿ ನಡೆಯಬೇಕು. ಪೊಲೀಸರಿಗೆ ಕ್ಷಣ ಕ್ಷಣಕ್ಕೂ ಯಾರಿಂದ ಫೋನ್ ಬರುತ್ತಿತ್ತು ಎಂದು ಗೊತ್ತಾದರೆ ಹಿಂದೆ ಯಾರಿದ್ದರು ಎನ್ನುವುದು ತಿಳಿಯುತ್ತದೆ. ರಾಜ್ಯಪಾಲರು ಸಂವಿಧಾನ ರಕ್ಷಕರು. ಯಾರಿಗೇ ಈ ಸಮಸ್ಯೆ ಆದರೂ ರಾಜ್ಯಪಾಲರು ಬಿಡಲ್ಲ ಎಂದು ಸಂದೇಶ ಕೊಡುವಂತೆ ಕೇಳಿಕೊಂಡಿದ್ದೇವೆ. ರಾಜ್ಯಪಾಲರು ಮಧ್ಯಪ್ರವೇಶ ಮಾಡಬೇಕು ಅಂತ ಕೇಳಿದ್ದೇವೆ. ಪ್ರಕರಣದಲ್ಲಿ ನ್ಯಾಯಾಂಗ ತನಿಖೆ ಆಗಬೇಕು ಎಂದರು.

ಡಾ.ಅಂಬೇಡ್ಕರ್ ವಿಚಾರವಾಗಿ ಅಮಿತ್ ಶಾ ಹೇಳಿಕೆಗೆ ಖಂಡನೆ



ರಾಮಸ್ವಾಮಿ

ಮೈಸೂರು, ಡಿ.24–ಸಂಸತ್‌ನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಲಘುವಾಗಿ ಮಾತನಾಡಿರುವುದು ಖಂಡನೀಯ ಎಂದು ಮೈಸೂರು ತಾಲೂಕು ನಾಗವಾಲ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ಹೇಳಿದ್ದಾರೆ.

ಅಮಿತ್ ಷಾ ಸಚಿವರಾಗಿರುವುದು ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದಿಂದ. ಈ ಹಿಂದೆ ಅವರು ಗುಜರಾತ್‌ನಿಂದ ಗಡಿಪಾರು ಆಗಿದ್ದೂ ಸಂವಿಧಾನದ ಶಕ್ತಿಯಿಂದ. ಭಾರತ ದೇಶಕ್ಕೆ ಬಲಿಷ್ಠವಾದ ಸಂವಿಧಾನದ ರಕ್ಷಣೆ ಇದೆ. ಪ್ರತಿಯೊಬ್ಬ ವ್ಯಕ್ತಿಗೂ ಸಮಾನ ಹಕ್ಕು ಪ್ರತಿಪಾದಿಸುವ ಶ್ರೇಷ್ಠ ಸಂವಿಧಾನ ನೀಡಿರುವ ಅಂಬೇಡ್ಕರ್ ಅವರ ಬಗ್ಗೆ ಲಘುವಾಗಿ ಮಾತನಾಡುವುದನ್ನು ಅಂಬೇಡ್ಕರ್ ಅವರನ್ನು ಪೂಜಿಸುವ, ಅವರ ಸಿದ್ಧಾಂತಗಳಿಗೆ ತಲೆಬಾಗುವ ಯಾರೂ ಸಹಿಸುವುದಿಲ್ಲ. ಅಮಿತ್ ಶಾ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಕ್ಷಮೆಯಾಚಿಸಬೇಕು ಎಂದು ಪತ್ರಿಕಾ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ಮೈಸೂರಲ್ಲಿ ಇಂಪೋರ್ಟೆಡ್, ಇಂಡಿಯನ್ ಕ್ರಾಕರಿ ವಸ್ತುಗಳ ಮಾರಾಟ



ಮೈಸೂರು,ಡಿ.24–ಮೈಸೂರು ನಗರದ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನಲ್ಲಿ ಇಂಪೋರ್ಟೆಡ್ ಮತ್ತು ಇಂಡಿಯನ್ ಕ್ರಾಕರಿ ವಸ್ತುಗಳ ಸೇಲ್ ಆರಂಭಗೊಂಡಿದೆ. ಈ ಮಾರಾಟದಲ್ಲಿ 50 ಸಾವಿರಕ್ಕೂ ಅಧಿಕ ಕಂಪನಿಗಳ ವೆರೈಟಿಗಳ ಕೋರೈಲ್, ಓಷಿಯನ್, ಲೂಮಿನಾರ್ಕ್, ಮಿಲ್ಟನ್ ಬ್ರಾಂಡ್ ಕಂಪನಿಗಳ ಕ್ರಾಕರಿ ವಸ್ತುಗಳು ಹೊಸ ಸ್ಟಾಕ್‌ನೊಂದಿಗೆ ಲಭ್ಯವಿದೆ.

ಶೇ.100 ಫುಡ್ ಗ್ರೇಡ್, ಶುದ್ಧವಾದ ಮೆಲಮೈನ್ ಕ್ರೋಕರಿ ಕ್ರಾಕರಿ ವಸ್ತುಗಳು, ಫ್ರಾನ್ಸ್, ಥೈಲಾಂಡ್, ಟರ್ಕಿ, ಜರ್ಮನಿ ದೇಶಗಳ ಗ್ಲಾಸ್‌ವೇರ್‌ಗಳು, ಫ್ಯಾನ್ಸಿ ಪ್ಲಾಸ್ಟಿಕ್ ವಸ್ತುಗಳು, ಉಡುಗೊರೆ ವಸ್ತುಗಳು, ಸೋಫಾ ಸೆಟ್ ಮತ್ತು ಡೈನಿಂಗ್ ಟೇಬಲ್ ಕವರ್‌ಗಳು, ಶಾಪಿಂಗ್ ಜ್ಯೂವೆಲ್ಲರಿ ಬ್ಯಾಗ್ ಇತ್ಯಾದಿ ವಸ್ತುಗಳು ಲಭ್ಯವಿದೆ.

ಶೇ.50ರವರೆಗೆ ರಿಯಾಯಿತಿ ದರದಲ್ಲಿ ವಸ್ತುಗಳು ದೊರೆಯುತ್ತದೆ. ಮೈಸೂರಿನ ಗ್ರಾಹಕರಿಗೆ ಇದೊಂದು ಸುವರ್ಣಾವಕಾಶವಾಗಿದೆ. ಮಾರಾಟದ ಪ್ರದರ್ಶನ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ನಡೆಯಲಿದ್ದು, ಕೆಲವೇ ದಿನಗಳು ಮಾತ್ರ ಇರಲಿದೆ. ಗ್ರಾಹಕರು ಇದರ ಪ್ರಯೋಜನವನ್ನು ಉಪಯೋಗಿಸಿಕೊಳ್ಳಬೇಕೆಂದು ಆಯೋಜಕರು ತಿಳಿಸಿದ್ದಾರೆ.

ವೆಂಕಟೇಶನ ಕೃಪೆಯಿಂದ ದಾಸ ಸಾಹಿತ್ಯ ಉಳಿದಿದೆ

● ವೆಂಕಟಾಚಲಧಾಮದ ಶ್ರೀ ವಿದ್ಯೇಶತೀರ್ಥ ಸ್ವಾಮೀಜಿ ಅಭಿಮತ ● ಟಿಟಿಡಿ ಗೌರವಾದರದೊಂದಿಗೆ ವೆಂಕಟೇಶನ ದರ್ಶನ

ಮೈಸೂರು: ಕಾಂಚನಬ್ರಹ್ಮ ಎಂದೇ ಪ್ರಖ್ಯಾತನಾದ ಶ್ರೀ ವೆಂಕಟೇಶನ ಮೇಲಿರುವ ಚಿನ್ನಾಭರಣ ಅಲಂಕಾರವನ್ನು ಮಾತ್ರ ನೋಡದೇ ಒಳಗಿರುವ ಚಿನ್ಮಯನ ರೂಪ ದರ್ಶನ ಮಾಡಿದರೆ ಮಾತ್ರ ಧನ್ಯತೆ ದೊರಕುತ್ತದೆ ಎಂದು ನಗರದ ಚಾಮರಾಜ ಜೋಡಿ ರಸ್ತೆಯ ವೆಂಕಟಾಚಲಧಾಮದ ಭಂಡಾರಕೇರಿ ಶ್ರೀ ವಿದ್ಯೇಶತೀರ್ಥ ಸ್ವಾಮೀಜಿ ಹೇಳಿದರು.

ತಿರುಮಲ ಬೆಟ್ಟದಲ್ಲಿ ಟಿಟಿಡಿ ಗೌರವಾದರಗಳೊಡನೆ ಶ್ರೀ ವೆಂಕಟೇಶನ ದರ್ಶನ ಪಡೆದು ಅವರು ಅನುಗ್ರಹ ಸಂದೇಶ ನೀಡಿದರು. ಮೂರ್ತಿ ಮತ್ತು ವಿಗ್ರಹಗಳ ಒಳಗಿನ ಸ್ವರೂಪವನ್ನು ನೋಡುವ ಅನುಸಂಧಾನವನ್ನು ನಾವು ರೂಢಿಸಿಕೊಳ್ಳಬೇಕು. ಆಗ ತೀರ್ಥಯಾತ್ರೆ ಸಾರ್ಥಕವಾಗುತ್ತದೆ ಎಂದರು.

ದಾಸ ಸಾಹಿತ್ಯ ಸಂವರ್ಧನೆ: ಕನ್ನಡ ಸಾಹಿತ್ಯಕ್ಕೆ ಮಹತ್ತರ ಕೊಡುಗೆ ನೀಡಿದ ದಾಸ ಸಾಹಿತ್ಯ ಇಂದು ಇಷ್ಟರ ಮಟ್ಟಿಗೆ ಉಳಿದುಕೊಂಡಿದೆ ಎಂದರೆ ಅದಕ್ಕೆ ತಿರುಮಲದ ಒಡೆಯ ವೆಂಕಟೇಶನ ಕೃಪೆ ಸಾಕಷ್ಟು ಇದೆ ಎಂದು ಶ್ರೀಗಳು ಅಭಿಪ್ರಾಯಿಸಿದರು. ವಿವಿಧ ಭಜನಾ ಮಂಡಳಿಗಳು, ಸಂಘ–ಸಂಸ್ಥೆಗಳವರು ಭಜನೆ, ಕೀರ್ತನೆ, ಸುಳಾದಿಗಳನ್ನು ಹಾಡುತ್ತಾ, ಭಕ್ತಿ ಪರವಶರಾಗಿ ಮೆಟ್ಟಿಲೋತ್ಸವ ಸೇವೆ ಮಾಡುತ್ತಲೇ ಸ್ವಾಮಿ ದರ್ಶನ ಪಡೆಯುತ್ತಾರೆ. ದೇಶದ ದೂರದ ಊರುಗಳಿಂದ ಬರುತ್ತಾರೆ. ಅವರೆಲ್ಲರಿಗೂ ಆತ್ಮಾನಂದ ನೀಡುವ ದಾಸರ ಕೃತಿಗಳನ್ನು ಸನ್ನಿಧಿಗೆ ಸಮರ್ಪಿಸಿ ಧನ್ಯತೆ ಮೆರೆಯುತ್ತಾರೆ. ಈ ನಿಟ್ಟಿನಲ್ಲಿ ವೆಂಕಟೇಶನು ಸಂಗೀತ ಮತ್ತು ಸಾಹಿತ್ಯದ ಸಂವರ್ಧನೆಗೆ ಪ್ರೇರಕನಾಗಿದ್ದಾನೆ ಎಂದರು.

ಸೋಸಲೆ ವ್ಯಾಸರಾಜರ ಮಠದಲ್ಲಿ ಸಂಸ್ಥಾನ ಪೂಜೆ ನೆರವೇರಿಸಿದ ಸ್ವಾಮೀಜಿ, ಟಿಟಿಡಿ ಗೌರವದೊಂದಿಗೆ ಶ್ರೀ ವೆಂಕಟೇಶನ ದರ್ಶನ ಪಡೆದರು. ಟಿಟಿಡಿ ಹೆಚ್ಚುವರಿ ಕಾರ್ಯನಿರ್ವಾಹಕ ಅಧಿಕಾರಿ ವೆಂಕಯ್ಯ ಚೌಧರಿ, ಸಹ ಕಾರ್ಯನಿರ್ವಾಹಕ ಲೋಕನಾಥನ್, ಪೇಷ್ಕರ್ ರಾಮಕೃಷ್ಣ, ಡಿ.ಪಿ. ಅನಂತಾಚಾರ್ಯ ಇತರರು ಹಾಜರಿದ್ದರು.

ಸಂಕೀರ್ತನೆ: ಶ್ರೀ ವಿದ್ಯೇಶತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ವಿದ್ಯೇಶ ವಿಠಲಾಂಕಿತ ಕೃತಿಗಳ ಸಂಕೀರ್ತನೆ ಭಕ್ತರ ಮನ ಸೆಳೆಯಿತು. ಗಾಯಕಿ ಸಿರಿಸಿಂಚನ ಪಟವರ್ಧನ ಅವರು ವಿದ್ಯೇಶ ತೀರ್ಥರ ಕೃತಿಗಳನ್ನು ಹಾಡಿ ರಂಜಿಸಿದರು. ಪಕ್ಕವಾದ್ಯದಲ್ಲಿ ಆದಿತ್ಯ (ಪಿಟೀಲು) ಮತ್ತು ವಿದ್ವಾನ್ ಮಾರುತಿ ರಘುರಾಮ (ಮೃದಂಗ) ಸಹಕಾರ ನೀಡಿದರು. ನೂರಾರು ಭಕ್ತರು ಇದ್ದರು.



ಮೈಸೂರು ನಗರದ ಚಾಮರಾಜ ಜೋಡಿ ರಸ್ತೆ ವೆಂಕಟಾಚಲಧಾಮದ ಭಂಡಾರಕೇರಿ ಶ್ರೀ ವಿದ್ಯೇಶ ತೀರ್ಥ ಸ್ವಾಮೀಜಿ ಅವರು ತಿರುಪತಿ–ತಿರುಮಲ ಬೆಟ್ಟದಲ್ಲಿ ಟಿಟಿಡಿ ಗೌರವಾದರಗಳೊಡನೆ ಶ್ರೀ ವೆಂಕಟೇಶನ ದರ್ಶನ ಪಡೆದರು. ಟಿಟಿಡಿ ಹೆಚ್ಚುವರಿ ಕಾರ್ಯನಿರ್ವಾಹಕ ಅಧಿಕಾರಿ ವೆಂಕಯ್ಯ ಚೌಧರಿ, ಸಹ ಕಾರ್ಯನಿರ್ವಾಹಕ ಲೋಕನಾಥನ್, ಪೇಷ್ಕರ್ ರಾಮಕೃಷ್ಣ, ಡಿ.ಪಿ.ಅನಂತಾಚಾರ್ಯ ಉಪಸ್ಥಿತರಿದ್ದರು.

ಇಂಟರ್‌ನ್ಯಾಷನಲ್ ಕ್ರಿಕೆಟರ್ ಸಂಜು ಸ್ಯಾಮ್‌ಸನ್ ವಾಕ್‌ಮೇಟ್ ಬ್ರ್ಯಾಂಡ್ ಅಂಬಾಸಿಡರ್




ದುಬೈ,ಡಿ.24– ಲೆ ಮೆರಿಡಿಯನ್ ದುಬೈ ಹೋಟೆಲ್ ಮತ್ತು ಕಾನ್ಫರೆನ್ಸ್ ಸೆಂಟರ್‌ನಲ್ಲಿ ನಡೆದ ಸಮಾರಂಭದಲ್ಲಿ ಪಾದರಕ್ಷೆ ಉದ್ಯಮದ ದಿಗ್ಗಜ ವಾಕ್‌ಮೇಟ್ ಇಂಡಿಯಾ ಪ್ರೈ ಲಿಮಿಟೆಡ್‌ನ ಬ್ರಾಂಡ್ ಅಂಬಾಸಿಡರ್ ಅಂತಾರಾಷ್ಟ್ರೀಯ ಕ್ರಿಕೆಟಿಗ ಸಂಜು ಸ್ಯಾಮ್ಸನ್ ಒಳಗೊಂಡ ತನ್ನ ಹೊಸ ಜಾಹೀರಾತು ಚಲನಚಿತ್ರವನ್ನು ಡಿಸೆಂಬರ್ 17ರಂದು ಲೆ ಮೆರಿಡಿಯನ್ ದುಬೈ ಹೋಟೆಲ್ ಮತ್ತು ಕಾನ್ಫರೆನ್ಸ್ ಸೆಂಟರ್‌ನಲ್ಲಿ ಬಿಡುಗಡೆ ಮಾಡಿತು.

ಒಂದು ಕಾಲದಲ್ಲಿ ಇದು ಪ್ರಾದೇಶಿಕ ಕಂಪನಿಯಾಗಿ ಪ್ರಾರಂಭವಾಯಿತು. ಈಗ ಜಾಗತಿಕ ಮಾರುಕಟ್ಟೆಯಲ್ಲಿ ತನ್ನ ಅಸ್ತಿತ್ವವನ್ನು ವಿಸ್ತರಿಸಿದೆ. ಅಂತಾರಾಷ್ಟ್ರೀಯ ಕ್ರಿಕೆಟಿಗ ಸಂಜು ಸ್ಯಾಮ್ಸನ್ ಅವರು ವಾಕ್‌ಮೇಟ್‌ನ ಹೊಸ ಬ್ರಾಂಡ್ ಅಂಬಾಸಿಡರ್ ಎಂದು ಘೋಷಿಸಲು ನಾವು ಹೆಮ್ಮೆ ಪಡುತ್ತೇವೆ ಎಂದು ವಾಕ್‌ಮೇಟ್ ಪಾದರಕ್ಷೆಗಳ ನಿರ್ದೇಶಕ ರೋಶನ್ ಬಾಸ್ಟಿಯನ್ ಹೇಳಿದ್ದಾರೆ.

ಈಗ ವಾಕ್‌ಮೇಟ್ ಪಾದರಕ್ಷೆಗಳಲ್ಲಿ ಮುಂದಿನ ಹಂತದ ಸೌಕರ್ಯವನ್ನು ಪರಿಚಯಿಸುತ್ತದೆ, ಸುಧಾರಿತ ದಕ್ಷತಾಶಾಸ್ತ್ರದ ಇನ್‌ಸೋಲ್ ತಂತ್ರಜ್ಞಾನವನ್ನು ಒಳಗೊಂಡಿದೆ. ಉನ್ನತ ಕಮಾನು ಬೆಂಬಲ, ಪರಿಣಾಮಕಾರಿ ತೂಕ ವಿತರಣೆ ಮತ್ತು ವರ್ಧಿತ ಆಘಾತ ಹೀರಿಕೊಳ್ಳುವಿಕೆಗಾಗಿ ವಿನ್ಯಾಸಗೊಳಿಸಲಾಗಿದೆ. ಇದು ಪ್ರತಿ ಹಂತದಲ್ಲೂ ಸಾಟಿಯಿಲ್ಲದ ಸೌಕರ್ಯವನ್ನು ಖಾತ್ರಿಗೊಳಿಸುತ್ತದೆ, ಗ್ರಾಹಕರು ಆರಾಮ ಮತ್ತು ಆತ್ಮವಿಶ್ವಾಸದಿಂದ ನಡೆಯಲು ಅನುವು ಮಾಡಿಕೊಡುತ್ತದೆ. ಇದರ ಆಳವಾದ ಹೀಲ್ ಕಪ್ ಬೆಂಬಲವು ಹೆಚ್ಚಿನ ಸ್ಥಿರತೆಯನ್ನು ಒದಗಿಸುತ್ತದೆ. ಇದು ಯಾವುದೇ ಸಂದರ್ಭಕ್ಕೂ ಪರಿಪೂರ್ಣ ಒಡನಾಡಿಯಾಗಿ ಮಾಡುತ್ತದೆ ಎಂದು ಹೇಳಿದರು. ಸಂಜು ಸ್ಯಾಮ್ಸನ್ ಅವರು ವಾಕ್‌ಮೇಟ್ ಬಿಡುಗಡೆ ಮಾಡಿದ ಹೊಸ ಪಾದರಕ್ಷೆಗಳನ್ನು ಧರಿಸಲು ಮತ್ತು ಅನುಭವಿಸಲು ಉತ್ಸುಕರಾಗಿದ್ದಾರೆ. ಸುಧಾರಿತ ದಕ್ಷತಾಶಾಸ್ತ್ರದ ಇನ್‌ಸೋಲ್ ತಂತ್ರಜ್ಞಾನವನ್ನು ಬಳಸಿಕೊಂಡು ವಿನ್ಯಾಸಗೊಳಿಸಲಾಗಿದೆ ಮತ್ತು ಉತ್ಪಾದಿಸಲಾಗಿದೆ.

ಹುಟ್ಟುಹಬ್ಬದ ಶುಭಾಶಯ...



ಹುಟ್ಟುಹಬ್ಬ ಆಚರಿಸಿಕೊಂಡ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ, ಮಾಜಿ ಮೇಯರ್ ಅಯೂಬ್ ಖಾನ್ ಅವರನ್ನು ಕಾಂಗ್ರೆಸ್ ಮುಖಂಡ, ಉದ್ಯಮಿ ಜಿ.ಮಂಜುಗೌಡ ಇತರರು ಸನ್ಮಾನಿಸಿ, ಶುಭ ಕೋರಿದರು.

ಮೈಸೂರು ತಾಲೂಕು ಕೃಷಿಕ ಸಮಾಜದ ನಿರ್ದೇಶಕ ಸ್ಥಾನಗಳಿಗೆ ಅವಿರೋಧ ಆಯ್ಕೆ



ಮೈಸೂರು ತಾಲೂಕು ಕೃಷಿಕ ಸಮಾಜದ ನಿರ್ದೇಶಕ ಸ್ಥಾನಗಳಿಗೆ ಅವಿರೋಧ ಆಯ್ಕೆಯಾದವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಡಿ.24(ಪಿಎಂ)– ಮೈಸೂರು ತಾಲೂಕು ಕೃಷಿಕ ಸಮಾಜದ 2025–26ರಿಂದ 2029–30ನೇ ಸಾಲಿನ ಐದು ವರ್ಷಗಳ ಅವಧಿಯ ಎಲ್ಲಾ 12 ನಿರ್ದೇಶಕರ ಸ್ಥಾನಗಳಿಗೆ ಅವಿರೋಧ ಆಯ್ಕೆಯಾಗಿದೆ. ಸಿ.ಜಿ.ಶಿವಶಂಕರ್, ಕೆ.ಬಸವರಾಜು, ಎಂ.ಕುಮಾರ, ಕೆ.ಬಿ.ಲಿಂಗರಾಜು, ಎಂ.ಎಲ್.ಲಿಂಗರಾಜು, ಎನ್.ಮಹದೇವಪ್ಪ, ಎಂ.ರವಿ, ಕೆ.ಎಸ್.ಮಾದಪ್ಪ, ಶಿವಮಾಧು, ದೇವರಾಜೇಗೌಡ, ಟಿ.ಪಿ. ನಂಜುಂಡಸ್ವಾಮಿ ಮತ್ತು ಗೋವಿಂದಸ್ವಾಮಿ ಅವಿರೋಧವಾಗಿ ಆಯ್ಕೆಯಾದರು.

ಡ್ರೋನ್ ಪ್ರತಾಪ್ ಜೈಲಿನಿಂದ ಬಿಡುಗಡೆ: ಪೊಲೀಸರ ವಿರುದ್ಧ ಕಿಡಿ

ತುಮಕೂರು, ಡಿ.24–ಕೃಷಿ ಹೊಂಡದಲ್ಲಿ ಸೋಡಿಯಂ ಸ್ಫೋಟ ಪ್ರಕರಣದಲ್ಲಿ ಜೈಲು ಸೇರಿದ್ದ ಡ್ರೋನ್ ಪ್ರತಾಪ್, ಇಂದು ತುಮಕೂರು ಜಿಲ್ಲೆಯ ಮಧುಗಿರಿ ಜೈಲಿನಿಂದ ಬಿಡುಗಡೆಯಾಗಿದ್ದಾರೆ.

ಜೈಲಿನಿಂದ ಹೊರಬರುತ್ತಿದ್ದಂತೆ ಡ್ರೋನ್ ಪ್ರತಾಪ್, ಪೊಲೀಸರು ತನ್ನನ್ನು ಬಂಧಿಸಿದ ಕ್ರಮವನ್ನು ಖಂಡಿಸಿ ಗುಡುಗಿದ್ದಾರೆ. ಜೈಲಿನಿಂದ ಬಿಡುಗಡೆಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡ್ರೋನ್ ಪ್ರತಾಪ್, ದೇಶಾದ್ಯಂತ ತುಂಬ ಜನ ಪ್ರಯೋಗದ ವಿಡಿಯೋ ಮಾಡಿದ್ದಾರೆ. ಕೆಜಿಗಟ್ಟಲೇ ಸೋಡಿಯಂ ಉಪಯೋಗಿಸಿ ಪ್ರಯೋಗ ಮಾಡಿದ್ದಾರೆ. ಅವರನ್ನು ಯಾಕೆ ನೀವು ಅರೆಸ್ಟ್ ಮಾಡಿಲ್ಲ ಎಂದು ಪ್ರಶ್ನಿಸಿದ್ದಾರೆ.



ನಾನು ಶೈಕ್ಷಣಿಕ ಸಂಶೋಧನೆಗಾಗಿ ಈ ಪ್ರಯೋಗ ಮಾಡಿದ್ದೆ. ಈ ಬಗ್ಗೆ ನಾನು ಸ್ಪಷ್ಟಪಡಿಸಿದ್ದೇನೆ. ಆದಾಗ್ಯೂ ನನ್ನನ್ನು ಮಾತ್ರ ಯಾಕೆ ಬಂಧಿಸಿದ್ದೀರಿ ಎಂದು ಕಿಡಿಕಾರಿದ್ದಾರೆ. ಸೋಡಿಯಂ ಮೆಟಲ್ ಬಳಸಿ ಕೃಷಿ ಹೊಂಡದಲ್ಲಿ ಸ್ಫೋಟ ಪ್ರಕರಣದಲ್ಲಿ ಬಂಧನಕ್ಕೀಡಾಗಿ ಜೈಲು ಸೇರಿದ್ದ ಡ್ರೋನ್ ಪ್ರತಾಪ್‌ಗೆ ಮಧುಗಿರಿ ಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಈ ಹಿನ್ನೆಲೆಯಲ್ಲಿ ಇಂದು ಜೈಲಿನಿಂದ ಬಿಡುಗಡೆಯಾಗಿದ್ದಾರೆ.

ಮೈಸೂರಲ್ಲಿ ಮಾಜಿ ಸಿಎಂ ಎಸ್.ಎಂ.ಕೃಷ್ಣರಿಗೆ ಜ.11ಕ್ಕೆ ನುಡಿನಮನ; ಪೂರ್ವಭಾವಿ ಸಭೆಯಲ್ಲಿ ನಿರ್ಧಾರ

ಮೈಸೂರು, ಡಿ.24(ಎಸ್‌ಬಿಡಿ)– ದಿವಂಗತ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ 'ನುಡಿ ನಮನ' ಕಾರ್ಯಕ್ರಮವನ್ನು ಮೈಸೂರಿನಲ್ಲಿ ಅರ್ಥಪೂರ್ಣವಾಗಿ ಆಯೋಜಿಸಲು ನಿರ್ಧರಿಸಲಾಗಿದೆ.

ನಗರದ ಗಂಗೋತ್ರಿ ಬಡಾವಣೆಯಲ್ಲಿರುವ ಮಂಡ್ಯ ಜಿಲ್ಲಾ ಬಳಗ ಸಭಾಂಗಣದಲ್ಲಿ ಮಂಗಳವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಕಾರ್ಯಕ್ರಮ ಆಯೋಜನೆ ಸಂಬಂಧ ಸಲಹೆ ಹಾಗೂ ಅಭಿಪ್ರಾಯ ಸಂಗ್ರಹಿಸಲಾಯಿತು. ಜನವರಿ 11ರಂದು ಸ್ಕೌಟ್ ಅಂಡ್ ಗೈಡ್ಸ್ ಮೈದಾನ'ದಲ್ಲಿ 'ಎಸ್.ಎಂ.ಕೃಷ್ಣರಿಗೆ ನುಡಿ ನಮನ' ಕಾರ್ಯಕ್ರಮವನ್ನು ಆಯೋಜಿಸಲು ಒಮ್ಮತ ವ್ಯಕ್ತವಾಗಿದ್ದು, ಸ್ಥಳ, ದಿನಾಂಕ, ಸಮಯ ನಿಗದಿ ಬಗ್ಗೆ ಮತ್ತೊಮ್ಮೆ ಚರ್ಚಿಸಿ ಇನ್ನೆರಡು ದಿನಗಳಲ್ಲಿ ನಿರ್ಧರಿಸಲಾಗುವುದು ಎಂದು ಮುಖಂಡರು ತಿಳಿಸಿದ್ದಾರೆ.

ಎಸ್.ಎಂ.ಕೃಷ್ಣ ಅವರು ನಾಡು ಕಂಡ ಅದ್ಭುತ ವ್ಯಕ್ತಿ. ಮುಖ್ಯಮಂತ್ರಿಯಾಗಿ ಸಾಕಷ್ಟು ಜನಪರ ಯೋಜನೆಗಳು, ಕಾರ್ಯಕ್ರಮಗಳನ್ನು ನೀಡಿದ್ದಾರೆ. ರಾಜಕಾರಣದಲ್ಲಿ ದಕ್ಕಿದ ಎಲ್ಲಾ ಜವಾಬ್ದಾರಿಗಳನ್ನೂ ಸಮರ್ಥವಾಗಿ ನಿಬಾಯಿಸುವ ಮೂಲಕ ಮಾದರಿಯಾಗಿದ್ದಾರೆ. ಸಮಾಜದ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅವರು ಜನಪ್ರತಿನಿಧಿಗಳ ಘನತೆಯನ್ನು ಮೆರೆಸಿದರು. ಎಂದೂ ಯಾರ ಬಗ್ಗೆಯೂ ಹಗುರವಾಗಿ ಮಾತನಾಡಿದವರಲ್ಲ. ಅವರ ಉಡುಪು, ನಡೆ–ನುಡಿ ಅನುಕರಣೀಯ. ಶಿಸ್ತುಬದ್ಧ ತುಂಬು ಜೀವನ ನಡೆಸಿದ ಎಸ್.ಎಂ.ಕೃಷ್ಣ ಅವರ ನುಡಿ ನಮನ ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯಬೇಕು. ಆಡಂಬರಕ್ಕಿಂತ ಅರ್ಥಪೂರ್ಣವಾಗಿರಬೇಕು ಎಂದು ಬಹುತೇಕರು ಅಭಿಪ್ರಾಯಿಸಿದರು.




ಮೈಸೂರಿನಲ್ಲಿರುವ ಮಂಡ್ಯ ಜಿಲ್ಲಾ ಬಳಗ ಸಭಾಂಗಣದಲ್ಲಿ ಮಂಗಳವಾರ 'ಎಸ್.ಎಂ. ಕೃಷ್ಣರಿಗೆ ನುಡಿ ನಮನ' ಕಾರ್ಯಕ್ರಮದ ಪೂರ್ವಭಾವಿ ಸಭೆ ನಡೆಯಿತು.

ವೇದಿಕೆಯಲ್ಲಿ ಕೃಷ್ಣ ಅವರ ಭಾವಚಿತ್ರವನ್ನಿಟ್ಟು, ಅದರ ಮುಂಭಾಗ ದೀಪ ಬೆಳಗಿಸಬೇಕು. ಗಣ್ಯರು ಪುಷ್ಪನಮನ ಸಲ್ಲಿಸಿದ ಬಳಿಕ ನಿಗದಿತ ಸಮಯದಲ್ಲೇ ತಮ್ಮ ನುಡಿಗಳನ್ನಾಡಬೇಕು. ರಾಜಕೀಯ ಸಮಾವೇಶಗಳಂತೆ ದೀರ್ಘ ಭಾಷಣದ ಅಗತ್ಯವಿಲ್ಲ. ಮುಂಚಿತವಾಗಿ ಪಟ್ಟಿ ಮಾಡಿಕೊಂಡು ಅದರ ಪ್ರಕಾರವೇ ನುಡಿ ನಮನ ಸಲ್ಲಿಸಲು ಅವಕಾಶ ನೀಡಬೇಕು. ಆಹ್ವಾನಿತರು ಸೇರಿದಂತೆ ಯಾವುದೇ ವಿಚಾರದಲ್ಲೂ ಗೊಂದಲ ಉಂಟಾಗಬಾರದು. ವ್ಯವಸ್ಥಿತವಾಗಿ, ಅಚ್ಚುಕಟ್ಟಾಗಿ ಕಾರ್ಯಕ್ರಮ ಆಯೋಜಿಸಬೇಕು ಎಂದು ಸಲಹೆ ನೀಡಿದರು.

ಸಾಹಿತಿ ಪ್ರೊ.ಎಂ.ಕೃಷ್ಣೇಗೌಡರು ಕಾರ್ಯಕ್ರಮ ರೂಪುರೇಷೆ ಸಿದ್ಧಪಡಿಸುವ ಜವಾಬ್ದಾರಿ ನಿರ್ವಹಿಸುವುದಾಗಿ ತಿಳಿಸಿದರು. ಮಾಜಿ ಎಂಎಲ್‌ಸಿ ಮರಿತಿಬ್ಬೇಗೌಡ, ಮಾಜಿ ಸಚಿವ ಎಂ.ಶಿವಣ್ಣ, ಪ್ರೊ.ಕೆ.ಟಿ.ವೀರಪ್ಪ, ಪ್ರೊ.ಬಿ.ಕೆ.ಚಂದ್ರಶೇಖರಗೌಡ, ಜಯರಾಮು ಕಿಲಾರೆ, ಕೆ.ವಿ.ಶ್ರೀಧರ್, ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ, ಪ್ರಶಾಂತ್‌ಗೌಡ, ವಿಕ್ರಾಂತ್ ಪಿ.ದೇವೇಗೌಡ, ಪ್ರೊ.ಕಾಳಚನ್ನೇಗೌಡ, ಬೂಕನಕೆರೆ ವಿಜೇಂದ್ರ, ಕೆ.ವಿ.ಮಲ್ಲೇಶ್ ಸೇರಿದಂತೆ ಹಲವು ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.

ದೇಶ – ವಿದೇಶ

ಶೇಖ್ ಹಸೀನಾ ವಿರುದ್ಧ ಭ್ರಷ್ಟಾಚಾರದ ಆರೋಪ: ತನಿಖೆ ಆರಂಭಿಸಿದ ಬಾಂಗ್ಲಾ




ಢಾಕಾ: ರೂಪುರ್ ಪರಮಾಣು ವಿದ್ಯುತ್ ಸ್ಥಾವರದಲ್ಲಿ 5 ಬಿಲಿಯನ್ ಡಾಲರ್ ದುರುಪಯೋಗ ಪಡಿಸಿಕೊಂಡ ಆರೋಪಕ್ಕೆ ಸಂಬಂಧಿಸಿದಂತೆ ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಮತ್ತು ಅವರ ಕುಟುಂಬದ ವಿರುದ್ಧ ಭ್ರಷ್ಟಾಚಾರ ವಿರೋಧಿ ಸಮಿತಿಯು ತನಿಖೆಯನ್ನು ಪ್ರಾರಂಭಿಸಿದೆ ಎಂದು ವರದಿಯಾಗಿದೆ. ಬಾಂಗ್ಲಾದೇಶದಲ್ಲಿ ರಷ್ಯಾದ ಸರ್ಕಾರಿ ಸಂಸ್ಥೆಯಾದ ರೊಸಾಟಮ್ ನಿರ್ಮಿಸುತ್ತಿರುವ ರೂಪುರ್ ಪರಮಾಣು ವಿದ್ಯುತ್ ಸ್ಥಾವರ ನಿರ್ಮಾಣದಲ್ಲಿ ಭಾರತೀಯ ಕಂಪನಿಗಳು ತೊಡಗಿಸಿಕೊಂಡಿವೆ. ಮೊದಲ ಬಾಂಗ್ಲಾದೇಶದ ಪರಮಾಣು ವಿದ್ಯುತ್ ಸ್ಥಾವರವನ್ನು ರಾಜಧಾನಿ ಢಾಕಾದಿಂದ ಪಶ್ಚಿಮಕ್ಕೆ 160 ಕಿಮೀ ದೂರದಲ್ಲಿ ನಿರ್ಮಿಸಲಾಗುತ್ತಿದೆ.

ಹಸೀನಾ ಜೊತೆಗೆ ಅವರ ಮಗ ಸಜೀಬ್ ವಾಝೆದ್ ಜಾಯ್ ಮತ್ತು ಆಕೆಯ ಸೋದರ ಸೊಸೆ ಮತ್ತು ಯುಕೆ ಖಜಾನೆ ಸಚಿವೆ ಟುಲಿಪ್ ಸಿದ್ದಿಕ್ ಅವರನ್ನು ಸಹ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಬಿಡಿನ್ಯೂಸ್ ವರದಿ ಮಾಡಿದೆ. ರೂಪುರ್ ಪರಮಾಣು ವಿದ್ಯುತ್ ಸ್ಥಾವರ ಯೋಜನೆಯಲ್ಲಿ 5 ಬಿಲಿಯನ್ ಡಾಲರ್ ಹಣವನ್ನು ದುರುಪಯೋಗಪಡಿಸಿಕೊಂಡ ಆರೋಪವಿದೆ ಎಂದು ವರದಿಯಲ್ಲಿ ಹೇಳಲಾಗಿದೆ


ಕಾನ್‌ಸ್ಟೇಬಲ್ ಮನೆ ಮೇಲೆ ದಾಳಿ: 2.87 ಕೋಟಿ ನಗದು, 234 ಕೆ.ಜಿ. ಬೆಳ್ಳಿ ವಶ

ಭೋಪಾಲ್: ಮಧ್ಯಪ್ರದೇಶದಲ್ಲಿ ನಿವೃತ್ತ (ವಿಆರ್‌ಎಸ್) ಕಾನ್‌ಸ್ಟೇಬಲ್ ಮನೆ ಮೇಲೆ ದಾಳಿ ನಡೆಸಿದ ಲೋಕಾಯುಕ್ತರು 2.87 ಕೋಟಿ ನಗದು, 7.98 ಕೋಟಿ ಮೌಲ್ಯದ ಆಸ್ತಿ ಹಾಗೂ 234 ಕೆ.ಜಿ. ಬೆಳ್ಳಿ ವಶಪಡಿಸಿಕೊಂಡಿದ್ದಾರೆ. ಕಾನ್‌ಸ್ಟೇಬಲ್ ಸೌರಭ್ ಶರ್ಮಾ ನಿವಾಸ ಮತ್ತು ಕಚೇರಿಯಲ್ಲಿ ಶೋಧ ನಡೆಸಿದ ಲೋಕಾಯುಕ್ತರು ಸುಮಾರು 10 ಕೋಟಿ ಮೌಲ್ಯದ ಆಸ್ತಿ, ಬೆಳ್ಳಿ ಹಾಗೂ ನಗದನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಶರ್ಮಾ ಅವರ ತಂದೆ ಆರ್.ಕೆ.ಶರ್ಮಾ ಸರ್ಕಾರಿ ವೈದ್ಯರಾಗಿದ್ದರು. ಅವರು 2015ರಲ್ಲಿ ನಿಧನರಾದರು. ಅದೇ ವರ್ಷ ಸೌರಬ್ ಅನುಕಂಪದ ಕಾಯ್ದೆ ಅಡಿಯಲ್ಲಿ ರಾಜ್ಯ ಸಾರಿಗೆ ಇಲಾಖೆಯಲ್ಲಿ ಕಾನ್‌ಸ್ಟೇಬಲ್ ಉದ್ಯೋಗಕ್ಕೆ ಸೇರಿದರು. ನಂತರ ಅವರು 2023ರಲ್ಲಿ ಸ್ವಯಂ ನಿವೃತ್ತಿ ಪಡೆದರು ಎಂದು ಲೋಕಾಯುಕ್ತ ಪೊಲೀಸ್ ಮಹಾನಿರ್ದೇಶಕ ಜೈದೀಪ್ ಪ್ರಸಾದ್ ತಿಳಿಸಿದರು. ಭ್ರಷ್ಟ ಮಾರ್ಗಗಳಿಂದ ಸಂಪಾದಿಸಿದ ಹಣವನ್ನು ಬಳಸಿಕೊಂಡು, ಸೌರಬ್ ತಮ್ಮ ತಾಯಿ, ಪತ್ನಿ, ಅತ್ತೆ ಮತ್ತು ಆಪ್ತರ ಹೆಸರಿನಲ್ಲಿ ಶಾಲೆ ಮತ್ತು ಹೋಟೆಲ್‌ಗಳನ್ನು ಸ್ಥಾಪಿಸಿದ್ದಾರೆ ಎಂದು ಹೇಳಿದ್ದಾರೆ.




ಬಾಹ್ಯಾಕಾಶದಲ್ಲಿಯೇ ಸುನಿತಾ ವಿಲಿಯಮ್ಸ್ ಕ್ರಿಸ್ಮಸ್ ಆಚರಣೆ!

ವಾಷಿಂಗ್ಟನ್: ನಾಸಾ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಅವರು ಈ ಬಾರಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲೇ ಕ್ರಿಸ್ಮಸ್ ಆಚರಿಸಲಿದ್ದಾರೆ. ಸುನಿತಾ ಹಾಗೂ ಅವರ ಸಿಬ್ಬಂದಿ ಬಾಹ್ಯಾಕಾಶದಲ್ಲಿ ಕ್ರಿಸ್ಮಸ್ ಆಚರಣೆ ಮಾಡಲು ಸಿದ್ಧತೆ ಮಾಡಿಕೊಂಡಿದ್ದಾರೆ. ಸ್ಪೇಸ್‌ಎಕ್ಸ್ ಡ್ರ್ಯಾಗನ್ ಕ್ಯಾಪ್ಸುಲ್ ಕ್ರಿಸ್ಮಸ್ ಸಲುವಾಗಿ ಬಾಹ್ಯಾಕಾಶದಲ್ಲಿರುವವರಿಗೆ ಬೇಕಾದ ಅಗತ್ಯ ವಸ್ತು ಹಾಗೂ ಅವರ ಕುಟುಂಬಸ್ಥರು ನೀಡಿದ್ದ ಉಡುಗೊರೆಗಳನ್ನು ಇತ್ತೀಚೆಗೆ ಪೂರೈಕೆ ಮಾಡಿತ್ತು. ಇದಕ್ಕೆ ಕೃತಜ್ಞತೆ ಸಲ್ಲಿಸಿದ ಸುನಿತಾ ಭೂಮಿಯಿಂದ ದೂರವಿದ್ದರೂ ಕುಟುಂಬ ಮತ್ತು ಸ್ನೇಹಿತರೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗಿದ್ದಕ್ಕಾಗಿ ಸಂತೋಷ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ನಾಸಾ ತನ್ನ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದು, ಸುನಿತಾ ಹಾಗೂ ಅವರ ಸಂಗಡಿಗರು ಕ್ರಿಸ್ಮಸ್‌ಗಾಗಿ ಸಿದ್ಧತೆ ಮಾಡಿಕೊಂಡಿರುವುದು ಕಾಣಬಹುದಾಗಿದೆ. ಸುನಿತಾ ವಿಲಿಯಮ್ಸ್ ಮಾತನಾಡಿ "ನಾವು ಕ್ರಿಸ್‌ಮಸ್ ರಜಾದಿನಗಳಿಗೆ ತಯಾರಾಗುತ್ತಿದ್ದೇವೆ. ಬಾಹ್ಯಾಕಾಶ ನಿಲ್ದಾಣದಲ್ಲಿರುವ ನಮ್ಮ ಕುಟುಂಬದವರೆಲ್ಲರೊಂದಿಗೆ ಅದನ್ನು ಕಳೆಯಲು ಇದು ಉತ್ತಮ ಸಮಯ. ಇಲ್ಲಿ ನಾವು ಏಳು ಮಂದಿ ಇಲ್ಲಿದ್ದೇವೆ ಮತ್ತು ನಾವು ಒಟ್ಟಿಗೆ ಆನಂದಿಸಲಿದ್ದೇವೆ" ಎಂದು ಹೇಳಿದ್ದಾರೆ.



ಬೀಚ್ ಬಳಿ ಹಿಡನ್ ಕ್ಯಾಮರಾ ಇಟ್ಟು ಮಹಿಳೆಯರ ಚಿತ್ರೀಕರಣ, ಇಬ್ಬರ ಬಂಧನ


ರಾಮೇಶ್ವರಂ: ಹಿಂದೂಗಳ ಪವಿತ್ರ ಕ್ಷೇತ್ರ ರಾಮೇಶ್ವರಂನ ಅಗ್ನಿತೀರ್ಥಂ ಬೀಚ್‌ನಲ್ಲಿ ಡ್ರೆಸ್ ಬದಲಾಯಿಸುವ ಕೊಠಡಿಯೊಳಗೆ ರಹಸ್ಯ ಕ್ಯಾಮೆರಾ ಬಳಸಿ ಮಹಿಳೆಯರನ್ನು ಚಿತ್ರೀಕರಿಸಿದ ಇಬ್ಬರನ್ನು ಬಂಧಿಸಲಾಗಿದೆ. ರಾಮೇಶ್ವರಂ ರಾಮನಾಥಸ್ವಾಮಿ ದೇವಾಲಯಕ್ಕೆ ಹೆಸರುವಾಸಿಯಾಗಿದೆ.



ಬಂಧಿತ ಇಬ್ಬರನ್ನು ರಾಜೇಶ್ ಕಣ್ಣನ್ ಮತ್ತು ಆತನ ಸ್ನೇಹಿತ ಮೀರಾನ್ ಮೊಯ್ದೀನ್ ಎಂದು ಗುರುತಿಸಲಾಗಿದೆ. ಪುದುಕೊಟ್ಟೈ ಮೂಲದ ಮಹಿಳೆಯೊಬ್ಬರು ಬಟ್ಟೆ ಬದಲಾಯಿಸುವ ಕೊಠಡಿಯಲ್ಲಿ ರಹಸ್ಯ ಕ್ಯಾಮರಾವನ್ನು ಪತ್ತೆ ಹಚ್ಚಿದಾಗ ಘಟನೆ ಬೆಳಕಿಗೆ ಬಂದಿದೆ. ಇದನ್ನು ಕಂಡು ಬೆಚ್ಚಿಬಿದ್ದ ಮಹಿಳೆ ಕೂಡಲೇ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಬಳಿಕ ಬಟ್ಟೆ ಬದಲಾಯಿಸುವ ಕೊಠಡಿಯಲ್ಲಿ ಹುಡುಕಾಟ ನಡೆಸಿದಾಗ ಹಿಡನ್ ಕ್ಯಾಮರಾ ಪತ್ತೆಯಾಗಿದೆ. ರಾಮೇಶ್ವರಂ ಪಟ್ಟಣವು 64 'ತೀರ್ಥಗಳು' ಅಥವಾ ಪವಿತ್ರ ಜಲಮೂಲಗಳನ್ನು ಒಳಗೊಂಡಿದೆ. ಇವುಗಳಲ್ಲಿ 22 ರಾಮನಾಥಸ್ವಾಮಿ ದೇವಸ್ಥಾನದ ವ್ಯಾಪ್ತಿಯಲ್ಲಿವೆ. ಈ ತೀರ್ಥಗಳಲ್ಲಿ ಸ್ನಾನ ಮಾಡುವುದು ತಪಸ್ಸಿಗೆ ಸಮ ಎಂಬುದು ನಂಬಿಕೆಯಾಗಿದೆ. ಅಗ್ನಿತೀರ್ಥಂ ಬೀಚ್ ರಾಮೇಶ್ವರಂನ ಪ್ರಮುಖ ಯಾತ್ರಾ ಕ್ಷೇತ್ರಗಳಲ್ಲಿ ಒಂದಾಗಿದೆ. ಅಗ್ನಿತೀರ್ಥವನ್ನು ದೇವಾಲಯಕ್ಕೆ ಸಂಬಂಧಿಸಿದ ಪ್ರಾಥಮಿಕ ಕಡಲತೀರವೆಂದು ಪರಿಗಣಿಸಲಾಗಿದೆ.

ಏಕಾಏಕಿ ಕುಸಿದು ಬಿದ್ದ 533 ಮೀ. ಉದ್ದದ ಸೇತುವೆ

ಬ್ರೆಜಿಲ್: ಬ್ರೆಜಿಲ್‌ನ ಮರನ್ಹಾವೊ ಮತ್ತು ಟೊಕಾಂಟಿನ್ಸ್ ಅನ್ನು ಪರಸ್ಪರ ಸಂಪರ್ಕಿಸುವ ಸೇತುವೆಯೊಂದು ಕುಸಿದು ಬಿದ್ದಿದೆ. ಆ ವೇಳೆ ಸೇತುವೆಯ ಮೇಲೆ ಸಲ್ಫ್ಯೂರಿಕ್ ಆಮ್ಲವನ್ನು ಸಾಗಿಸುತ್ತಿದ್ದ ಟ್ಯಾಂಕರ್ ಟ್ರಕ್ ಕೆಳಗಿರುವ ನದಿಗೆ ಬಿದ್ದು ಅದರಲ್ಲಿದ್ದ ಸಲ್ಫ್ಯೂರಿಕ್ ಆಮ್ಲ ನೀರು ಪಾಲಾಗಿದೆ. ಇದರಿಂದ ಜನರು ಮತ್ತಷ್ಟು ಆತಂಕಕ್ಕೊಳಗಾಗಿದ್ದಾರೆ. 1960ರಲ್ಲಿ ನಿರ್ಮಿಸಲಾಗಿದೆ ಎಂದು ಹೇಳಲಾದ 533 ಮೀಟರ್ ಉದ್ದದ ಸೇತುವೆಯು 164 ಅಡಿ ಆಳವಿದ್ದು, ಇದರ ಕುಸಿತದಿಂದ ಟ್ಯಾಂಕರ್ ಟ್ರಕ್, ಎರಡು ಟ್ರಕ್‌ಗಳು, ಒಂದು ಕಾರು ಮತ್ತು ಬೈಕ್ ನದಿಗೆ ಬಿದ್ದಿದೆ ಎನ್ನಲಾಗಿದೆ. ಹಾಗಾಗಿ ರಕ್ಷಣಾ ಕಾರ್ಯಾಚರಣೆಯನ್ನು ನಡೆಸಲಾಗಿದೆ. ಆದರೆ ಆಸಿಡ್ ಸೋರಿಕೆ ಪತ್ತೆಯಾಗಿದ್ದು, ಈ ಘಟನೆಯಲ್ಲಿ ಈವರೆಗೆ 1 ಸಾವು ಸಂಭವಿಸಿದ್ದು, 10ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಸ್ಥಳಕ್ಕೆ ಭೇಟಿ ನೀಡಿದ ನಗರದ ಕೌನ್ಸಿಲ್ ಸದಸ್ಯ ಎಲಿಯಾಸ್ ಜೂನಿಯರ್, ಈ ಸೇತುವೆಯು ಘನ ವಾಹನಗಳ ಸಂಚಾರಕ್ಕೆ ಯೋಗ್ಯವಾಗಿಲ್ಲ ಎಂದು ಎಲಿಯಾಸ್ ತನ್ನ ವಿಡಿಯೊದಲ್ಲಿ ಹೇಳಿದ್ದಾರೆ.



ಮೈಸೂರು ಮಿತ್ರ ಬುಧವಾರ 25 ಡಿಸೆಂಬರ್ 2024

ಗ್ರಾಮಸ್ಥರ ಅಹವಾಲು ಸ್ವೀಕರಿಸಿದ ಸಂಸದ ಯದುವೀರ್



ಕುಶಾಲನಗರ ತಾಲೂಕಿನ ವಿವಿಧ ಗ್ರಾಮಸ್ಥರಿಂದ ಸಂಸದ ಯದುವೀರ್ ಅಹವಾಲು ಸ್ವೀಕರಿಸಿದರು.

ಮಡಿಕೇರಿ, ಡಿ.24–ಕೊಡಗು–ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕುಶಾಲನಗರ ತಾಲೂಕಿನ ವಿವಿಧ ಗ್ರಾಮಗಳಿಗೆ ತೆರಳಿ, ಅಲ್ಲಿನ ಸಮಸ್ಯೆ ಆಲಿಸಿದರು.

ಹೆಬ್ಬಾಲೆ, ಶಿರಂಗಾಲ, ತೊರೆನೂರು, ಚಿಕ್ಕ ಅಳುವಾರ, ಕುಶಾಲನಗರ, ಗುಡ್ಡೆಹೊಸೂರು ಗ್ರಾಮಗಳಿಗೆ ಭೇಟಿ ನೀಡಿದ ಸಂಸದರು, ಅಲ್ಲಿ ಸಭೆ ನಡೆಸಿ ಗ್ರಾಮಸ್ಥರು ಹಾಗೂ ಬಿಜೆಪಿ ಕಾರ್ಯಕರ್ತರಿಂದ ಅಹವಾಲು ಸ್ವೀಕರಿಸಿದರು.

ಈ ಸಂದರ್ಭ ಮಾತನಾಡಿದ ಯದುವೀರ್, ಸಂಸದರ ನಿಧಿಯಿಂದ ಗ್ರಾಮ ವ್ಯಾಪ್ತಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ಕೊಡಗಿನಲ್ಲಿ ಬಿಎಸ್‌ಎನ್‌ಎಲ್ ಟವರ್ ಸಮಸ್ಯೆ ನಿವಾರಣೆಗೆ ಈಗಾಗಲೇ ಸಂಬಂಧಿಸಿದವರಿಗೆ ಪತ್ರ ವ್ಯವಹಾರ ನಡೆಸಲಾಗಿದೆ. ಕುಶಾಲನಗರದವರೆಗೆ ರೈಲ್ವೆ ಯೋಜನೆಗೆ ಭೂಮಿ ಖರೀದಿಗೆ ರಾಜ್ಯ ಸರ್ಕಾರ ಮನಸ್ಸು ಮಾಡದ ಕಾರಣ ಯೋಜನೆ ನನೆಗುದಿಗೆ ಬಿದ್ದಿದೆ. ಈ ಹಿನ್ನೆಲೆಯಲ್ಲಿ ರೈಲ್ವೆ ಸಚಿವರ ಮೂಲಕ ಕೇಂದ್ರ ಸರ್ಕಾರದಿಂದಲೇ ಭೂಮಿ ಖರೀದಿ ಮಾಡಲು ಚಿಂತನೆ ಮಾಡಲಾಗಿದೆ ಎಂದು ಹೇಳಿದರು.

ಮೈಸೂರು–ಕುಶಾಲನಗರ ಚತುಷ್ಪಥ ಹೆದ್ದಾರಿ ಕಾಮಗಾರಿ ಪ್ರಗತಿಯಲ್ಲಿದೆ. ಕರಿಮೆಣಸು ಮೇಲಿನ ಜಿಎಸ್‌ಟಿ ವಿನಾಯಿತಿಯಿಂದ ಬೆಳೆಗಾರರಿಗೆ ಅನುಕೂಲ ಆಗಲಿದೆ. ರಾಜ್ಯ ಸರ್ಕಾರದಲ್ಲಿ ಅನುದಾನ ಕೊರತೆಯಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದೆ ಎಂದರು.

ಈ ಸಂದರ್ಭ ಮಾಜಿ ಶಾಸಕ ಅಪ್ಪಚ್ಚುರಂಜನ್, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಕಾರ್ಯದರ್ಶಿ ರಕ್ಷಿತ್ ಮಾವಾಜಿ, ಕುಶಾಲನಗರ ಅಧ್ಯಕ್ಷ ಚರಣ್ ಮತ್ತಿತರರು ಹಾಜರಿದ್ದರು.

ಅಮಿತ್ ಶಾ ವಿರುದ್ಧ ವಿವಿಧ ಸಂಘಟನೆ ಪ್ರತಿಭಟನೆ

● ಮಡಿಕೇರಿಯಲ್ಲಿ ಕೆಲಕಾಲ ರಸ್ತೆ ತಡೆ ● ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜೀನಾಮೆಗೆ ಆಗ್ರಹ



ಮಡಿಕೇರಿಯ ಜನರಲ್ ಕೆ.ಎಸ್.ತಿಮ್ಮಯ್ಯ ವೃತ್ತದಲ್ಲಿ ಗೃಹ ಸಚಿವ ಅಮಿತ್ ಶಾ ವಿರುದ್ಧ ವಿವಿಧ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಡಿ.24– ಡಾ.ಬಿ.ಆರ್. ಅಂಬೇಡ್ಕರ್ ಅವರ ಹೆಸರನ್ನು ಸಂಸತ್‌ನಲ್ಲಿ ಪ್ರಸ್ತಾಪಿಸಿ ಅವಹೇನ ಮಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ತಕ್ಷಣ ರಾಜೀನಾಮೆ ನೀಡಬೇಕು ಮತ್ತು ಅವರನ್ನು ದೇಶದಿಂದ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ನಗರದ ಜನರಲ್ ಕೆ.ಎಸ್.ತಿಮ್ಮಯ್ಯ ವೃತ್ತದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಅಂಬೇಡ್ಕರ್ ಹೆಸರು ನಮಗೆ ಶೋಕಿಯಲ್ಲ, ಸ್ಮರಣೆ, ಅಸ್ಮಿತೆ, ಬದುಕು' ಎನ್ನುವ ಘೋಷವಾಕ್ಯದಡಿ ದಲಿತ ಸಂಘಟನೆಗಳ ಒಕ್ಕೂಟ, ಸಮಾನ ಮನಸ್ಕರ ವೇದಿಕೆ ಮತ್ತು ಪ್ರಗತಿಪರ ಚಿಂತಕರ ಒಕ್ಕೂಟದಿಂದ ಜ.ತಿಮ್ಮಯ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ಮಾನವ ಸರಪಳಿ ರಚಿಸುವ ಮೂಲಕ ಕೆಲಕಾಲ ರಸ್ತೆ ತಡೆ ನಡೆಸಲಾಯಿತು.

ಶಾ ಕ್ಷಮೆ ಯಾಚಿಸಲಿ: ಇಡೀ ವಿಶ್ವದ ಗೌರವಕ್ಕೆ ಪಾತ್ರರಾಗಿ, ರಾಷ್ಟ್ರಕ್ಕೆ ಅತ್ಯಮೂಲ್ಯ ಸಂವಿಧಾನ ನೀಡಿದ ಅಂಬೇಡ್ಕರ್ ಅವರ ಹೆಸರನ್ನು ಸಂಸತ್‌ನಲ್ಲಿ ಅವಹೇಳನಕಾರಿಯಾಗಿ ಬಳಸಿರುವುದನ್ನು ಉಗ್ರವಾಗಿ ಖಂಡಿಸಲಾಗುವುದು. ಗೃಹ ಸಚಿವ ಅಮಿತ್ ಶಾ ರಾಷ್ಟ್ರದ ಜನತೆಯ ಮುಂದೆ ಕ್ಷಮೆಯಾಚನೆ ಮಾಡಬೇಕೆಂದು ಜಿಲ್ಲಾ ಅಹಿಂದ ಒಕ್ಕೂಟದ ಸ್ಥಾಪಕಾಧ್ಯಕ್ಷ ಟಿ.ಪಿ.ರಮೇಶ್ ಒತ್ತಾಯಿಸಿದರು.

ನೊಂದವರ ಧ್ವನಿಯಾಗಿ, ಸಾಮಾಜಿಕ ನ್ಯಾಯದ ಹರಿಕಾರರಾದ ಅಂಬೇಡ್ಕರ್ ಬಗ್ಗೆ ಮಾತನಾಡುವಾಗ ಎಚ್ಚರದಿಂದಿರಬೇಕು. ಅಂಬೇಡ್ಕರ್ ದೇಶಕ್ಕೆ ನೀಡಿದ ಸಂವಿಧಾನದ ಅಡಿಯಲ್ಲೇ ಕೇಂದ್ರ ಸಚಿವರಾಗಿರುವುದನ್ನು ಅಮಿತ್ ಶಾ ಮರೆತಿದ್ದಾರೆ. ಈ ರಾಷ್ಟ್ರದ ಸಂವಿಧಾನ, ತ್ರಿವರ್ಣ ಧ್ವಜದ ಬಗ್ಗೆ ಬಿಜೆಪಿಯವರಿಗೆ ಎಳ್ಳಷ್ಟು ಗೌರವವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಗತಿಪರ ಚಿಂತಕರ ಒಕ್ಕೂಟದ ಇಸಾಖ್ ಖಾನ್ ಮಾತನಾಡಿ, ದೇವ ಮಂದಿರ, ಮಸೀದಿಗಳ ವಿಚಾರಗಳ ಸಂದರ್ಭ ರಸ್ತೆಗಿಳಿಯುವ ಸಮುದಾಯದ ಸಂಘಟನೆಗಳು, ಸಮಾನತೆಯ ಸಮಾಜ ನಿರ್ಮಾಣಕ್ಕೆ ಹಾದಿ ಮಾಡಿ ಕೊಟ್ಟ ಅಂಬೇಡ್ಕರ್ ಅವರನ್ನು ಅವಹೇಳನ ಮಾಡಿದ ಸಂದರ್ಭ ರಸ್ತೆಗೇಕೆ ಇಳಿಯುತ್ತಿಲ್ಲ, ಅವರೆಲ್ಲಿದ್ದಾರೆ ಎಂದು ಪ್ರಶ್ನಿಸಿದರು. ಅಂಬೇಡ್ಕರ್ ಅವರನ್ನು ಅಪಹಾಸ್ಯ ಮಾಡಿರುವ ಗೃಹ ಸಚಿವ ಅಮಿತ್ ಶಾ ಅವರನ್ನು ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು.

ಬಿಜೆಪಿ ವಿಚಾರಧಾರೆ ಮಣಿಸಿ: ಸಮಾನ ಮನಸ್ಕರ ವೇದಿಕೆ ನೆರವಂಡ ಉಮೇಶ್ ಮಾತನಾಡಿ, ಗೃಹ ಸಚಿವರು ಅಂಬೇಡ್ಕರ್ ಹೆಸರನ್ನು ಅವಹೇಳನಕಾರಿಯಾಗಿ ಬಳಕೆ ಮಾಡಿರುವುದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು. ಬಿಜೆಪಿ ಸರ್ಕಾರದ ಮೂಲ ಉದ್ದೇಶ, ಸಂವಿಧಾನ ಆಶಯಗಳನ್ನು ಹಾಳು ಗೆಡವಿ, ಮತ್ತೆ ಸನಾತನ ಮನು ಸಂಸ್ಕೃತಿಯನ್ನು ಮರುಸ್ಥಾಪಿಸುವುದೇ ಆಗಿದೆ. ಗ್ರಾಮ ಪಂಚಾಯಿತಿಯಿಂದ ಸಂಸತ್ತಿನವರೆಗೆ ಬಿಜೆಪಿಯನ್ನು ಸೋಲಿಸಬೇಕೆಂದು ಹೇಳಿದರು.

ಕಾಂಗ್ರೆಸ್ ಮುಖಂಡ ಎಂ.ಲಕ್ಷ್ಮಣ್, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕರಾದ ಹೆಚ್.ಎಲ್.ದಿವಾಕರ್, ಡಾ.ಕಾವೇರಿ ಮಾತನಾಡಿದರು. ಪ್ರತಿಭಟನೆಯಲ್ಲಿ ದಲಿತ ಸಂಘಟನೆಗಳ ಒಕ್ಕೂಟದ ಸಂಚಾಲಕ ಮೋಹನ್ ಮೌರ್ಯ, ಕಾರ್ಯದರ್ಶಿ ಗಣೇಶ್, ಇಸಾಕ್ ಖಾನ್, ಪ್ರೇಂ ಕುಮಾರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಮುನೀರ್ ಅಹಮ್ಮದ್, ಟಿ.ಹೆಚ್. ಉದಯಕುಮಾರ್ ಹಾಗೂ ವಿವಿಧ ಸಂಘಟನೆಗಳ ವಿನಯ್, ಟಿ.ಈ. ಸುರೇಶ್, ಚಂದ್ರಶೇಖರ್, ಮೊಣ್ಣಪ್ಪ, ಲೀಲಾ ಶೇಷಮ್ಮ, ಕೆ.ಜಿ. ಪೀಟರ್, ಕೌಸರ್, ರಿಯಾಜುದ್ದೀನ್, ಖಲೀಲ್ ಭಾಷಾ ಇತರರು ಪಾಲ್ಗೊಂಡಿದ್ದರು.

ಮಡಿಕೇರಿಯಲ್ಲಿ ಗ್ರಾಮೀಣ ಕ್ರೀಡೋತ್ಸವ ಸಂಭ್ರಮ



ಮಡಿಕೇರಿಯಲ್ಲಿ ನಡೆದ ಗ್ರಾಮೀಣ ಕ್ರೀಡಾಕೂಟದ ಸೈಕಲ್ ಟೈಯರ್ ಉರುಳಿಸುವ ಸ್ಪರ್ಧೆಯಲ್ಲಿ ಮಕ್ಕಳು ಭಾಗವಹಿಸಿದರು.

ಮಡಿಕೇರಿ, ಡಿ.24– ಗ್ರಾಮೀಣ ಕ್ರೀಡೆ ಪುನರುಜ್ಜೀವನಕ್ಕಾಗಿ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಮಾನವ ಹಕ್ಕುಗಳ ಅಂತಾರಾಷ್ಟ್ರೀಯ ಒಕ್ಕೂಟದ ವತಿಯಿಂದ ವೀರನಾಡು ರಕ್ಷಣಾ ವೇದಿಕೆ ಸಹಯೋಗದಲ್ಲಿ 'ಗ್ರಾಮೀಣ ಕ್ರೀಡೋತ್ಸವ' ನಗರದಲ್ಲಿ ಸಂಭ್ರಮದಿಂದ ನಡೆಯಿತು.

ನಗರದ ಗಾಂಧಿ ಮೈದಾನದಲ್ಲಿ ನಡೆದ ಗ್ರಾಮೀಣ ಕ್ರೀಡಾಕೂಟದಲ್ಲಿ ಗೋಲಿ, ಬುಗುರಿ, ಲಗೋರಿ, ಚಕ್ರಗಾಡಿ ತಳ್ಳುವುದು, ಕ್ಯಾಟರ್ ಬಿಲ್ಲಿನಿಂದ ಕಲ್ಲು ಹೊಡೆಯುವುದು, ಕುಂಟೆ ಬಿಲ್ಲೆ, ಚಿಣ್ಣಿದಾಂಡ್, ಮಡಿಕೆ ಒಡೆಯುವು, ತೆಂಗಿನ ಕಾಯಿಗೆ ಕಲ್ಲು ಹೊಡೆಯುವುದು, ಕಪ್ಪೆ ಓಟ, ಕಾಳು ಹೆಕ್ಕುವುದು ಮೊದಲಾದ ಆಟಗಳಲ್ಲಿ ಮಕ್ಕಳು, ಯುವಕ–ಯುವತಿಯರು, ವೃದ್ಧರು ಪಾಲ್ಗೊಂಡು ಸಂಭ್ರಮಿಸಿದರು.

ಇದೇ ವೇಳೆ ಮಾನವ ಹಕ್ಕುಗಳ ಅಂತಾರಾಷ್ಟ್ರೀಯ ಒಕ್ಕೂಟದ ರಾಜ್ಯಾಧ್ಯಕ್ಷ ಹರೀಶ್ ಜಿ.ಆಚಾರ್ಯ ಮಾತನಾಡಿ, ಮರೆತು ಹೋಗುತ್ತಿರುವ ಗ್ರಾಮೀಣ ಕ್ರೀಡೆಗಳಿಗೆ ಮರುಜೀವ ತುಂಬುವ ನಿಟ್ಟಿನಲ್ಲಿ ಕ್ರೀಡೋತ್ಸವ ಆಯೋಜಿಸಲಾಗಿದೆ. ಇಂದಿನ ಯುವ ಸಮೂಹ ಮೊಬೈಲ್ ಪ್ರಭಾವಕ್ಕೆ ಸಿಲುಕಿ ಕ್ರೀಡಾ ಚಟುವಟಿಕೆಗಳಿಂದ ದೂರ ಸರಿದಿರುವುದಲ್ಲದೆ, ಅವರಿಗೆ ಗ್ರಾಮೀಣ ಆಟೋಟಗಳ ಬಗ್ಗೆ ಮಾಹಿತಿಗಳಿಲ್ಲ ಗ್ರಾಮೀಣ ಕ್ರೀಡೋತ್ಸವದ ಮೂಲಕ ನಮ್ಮ ಹಳೆಯ ಕ್ರೀಡೆಗಳನ್ನು ಅವರಿಗೆ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ ಎಂದರು.

ಉದ್ಯಮಿ ಕೆ.ಆರ್.ರವಿ ತೆಂಗಿನ ಕಾಯಿಗೆ ಕಲ್ಲು ಹೊಡೆಯುವ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಒಕ್ಕೂಟದ ಗೌರವಾಧ್ಯಕ್ಷ ದಾಮೋದರ್, ಮಡಿಕೇರಿ ತಾಲೂಕು ಅಧ್ಯಕ್ಷ ಪ್ರದೀಪ್ ಕರ್ಕೆರ, ಡಿವೈಎಸ್‌ಪಿ ಮಹೇಶ್, ಪ್ರಮುಖರಾದ ಪಿ.ಪಿ.ಚಾಮಿ ಹಾಜರಿದ್ದರು. ಒಕ್ಕೂಟದ ಪ್ರಮುಖರಾದ ಕೆ.ಆರ್.ದಿನೇಶ್ ಶೆಟ್ಟಿ, ಪ್ರದೀಪ್ ಕರ್ಕೆರ, ಲಕ್ಷ್ಮಣ್ ಹೊದ್ದೂರು, ಹರಿಣಾಕ್ಷಿ, ಶಭರಿ ಗ್ರಾಮೀಣ ಕ್ರೀಡಾಕೂಟದ ಮೇಲ್ವಿಚಾರಣೆ ವಹಿಸಿದ್ದರು.

ಹಸಿರ ಚಪ್ಪರ–ಸನ್ಮಾನ: ಕ್ರೀಡೋತ್ಸವ ನಂತರ ನಗರದ ಕಾವೇರಿ ಕಲಾ ಕ್ಷೇತ್ರದಲ್ಲಿ ಗ್ರಾಮೀಣ ಸೊಗಡಿನ ಹಸಿರ ಚಪ್ಪರದ ಮಾದರಿ ವೇದಿಕೆಯಲ್ಲಿ ನಡೆದ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಆಕರ್ಷಿಸಿತು.

ಇದೇ ಸಂದರ್ಭ ಹಿರಿಯ ಪೌರಕಾರ್ಮಿಕರು, ಶ್ರಮಿಕ ಬಂಧುಗಳು, ಸವಿತಾ ಸಮಾಜದವರು, ಕೃಷಿಕರು, ಮಾಜಿ ಸೈನಿಕರು, ಆಟೋ, ಟ್ಯಾಕ್ಸಿ ಹಿರಿಯ ಚಾಲಕರು, ಮಾಧ್ಯಮ ಕ್ಷೇತ್ರದ ಹಿರಿಯರು ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು.

ವ್ಯೂ ಪಾಯಿಂಟ್‌ನಲ್ಲಿ ತ್ಯಾಜ್ಯ ಎಸೆಯುವವರ ವಿರುದ್ಧ ಕ್ರಮಕ್ಕೆ ನಿರ್ದೇಶನ



ವಿರಾಜಪೇಟೆ ಮಲೆತಿರಿಕ್ಕೆ ಬೆಟ್ಟದ ವ್ಯೂ ಪಾಯಿಂಟ್‌ನಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ನೇತೃತ್ವದಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಯಿತು.

ವಿರಾಜಪೇಟೆ, ಡಿ.24– ಪ್ರಕೃತಿ ಉಳಿಸಿ ಬೆಳೆಸುವ ಜವಾಬ್ದಾರಿ ಕೇವಲ ಸರ್ಕಾರ ಹಾಗೂ ಸಂಘ–ಸಂಸ್ಥೆಗಳದ್ದು ಮಾತ್ರವಲ್ಲ. ಬದಲಾಗಿ ಸುಂದರ ಪ್ರಕೃತಿ ಉಳಿಸಿ ಮುಂದಿನ ಪೀಳಿಗೆಗೆ ನೀಡುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಶಾಸಕ ಎ.ಎಸ್.ಪೊನ್ನಣ್ಣ ತಿಳಿಸಿದರು.

ಪುರಸಭೆ ವತಿಯಿಂದ ನಗರದ ಮಲೆತಿರಿಕ್ಕೆ ಬೆಟ್ಟದ ವ್ಯೂ ಪಾಯಿಂಟ್‌ನಲ್ಲಿ ಹಮ್ಮಿಕೊಂಡಿದ್ದ ಸ್ವಚ್ಛತಾ ಅಭಿಯಾನದಲ್ಲಿ ಮಾತನಾಡಿದ ಅವರು, ಕೆಲ ಪ್ರವಾಸಿಗರು ಹಾಗೂ ಸ್ಥಳೀಯರ ಬೇಜವಾಬ್ದಾರಿತನದಿಂದ ಇಲ್ಲಿನ ಸುಂದರ ಪ್ರಕೃತಿ ಮಲಿನವಾಗುತ್ತಿದೆ. ಮೋಜು–ಮಸ್ತಿ ಮಾಡಿ ಮದ್ಯದ ಬಾಟಲ್, ತಿಂಡಿ–ತಿನಿಸುಗಳ ಪ್ಲಾಸ್ಟಿಕ್ ಕವರ್ ಸೇರಿದಂತೆ ತ್ಯಾಜ್ಯಗಳನ್ನು ಎಸೆದಿರುವುದು ಬೇಸರದ ಸಂಗತಿ. ಇನ್ನು ಮುಂದೆ ವ್ಯೂ ಪಾಯಿಂಟ್‌ನಲ್ಲಿ ತ್ಯಾಜ್ಯ ಹಾಗೂ ಕಸ ಎಸೆಯುವವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಪೊಲೀಸರಿಗೆ ನಿರ್ದೇಶಿಸಲಾಗಿದೆ ಎಂದು ಎಚ್ಚರಿಸಿದರು.

ಎಲ್ಲರೂ ಸೇರಿ ಒಮ್ಮೆ ಸ್ವಚ್ಛತೆ ಮಾಡಿದರೆ ಸಾಲದು, ಪ್ರಕೃತಿ ಮಲೀನವಾಗದಂತೆ ಪ್ರತಿಯೊಬ್ಬರು ಎಚ್ಚರಿಕೆ ವಹಿಸಬೇಕು. ಜೊತೆಗೆ ಪರಿಸರ ಸಂರಕ್ಷಣೆ ಜವಾಬ್ದಾರಿ ಅರಿಯಬೇಕು. ಇದರಿಂದ ಕೊಡಗಿನ ಸುಂದರ ಪ್ರಕೃತಿ ತಾಣವನ್ನು ಮತ್ತಷ್ಟು ನಿರ್ಮಿಸಬಹುದು ಎಂದರು.

ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ ಮಾತನಾಡಿ, ಮಲೆತಿರಿಕ್ಕೆ ಬೆಟ್ಟದ ವ್ಯೂ ಪಾಯಿಂಟ್ ನಗರದ ಸೌಂದರ್ಯ ವೀಕ್ಷಿಸುವವರಿಗೆ ಸುಂದರ ಪ್ರದೇಶವಾಗಿದೆ. ಶಾಸಕರ ನೇತೃತ್ವದಲ್ಲಿ ಪೌರಕಾರ್ಮಿಕರೊಂದಿಗೆ ಸ್ವಚ್ಛತಾ ಅಭಿಯಾನ ನಡೆಸಲಾಗಿದೆ. ಮುಂದೆ ವ್ಯೂ ಪಾಯಿಂಟ್ ಪ್ರವಾಸಿ ತಾಣವಾಗಿ ಗುರುತಿಸಲ್ಪಡಬೇಕು. ಈ ನಿಟ್ಟಿನಲ್ಲಿ ಶಾಸಕರು ವ್ಯೂ ಪಾಯಿಂಟ್ ಅಭಿವೃದ್ಧಿಗೆ ಅನುದಾನ ನೀಡುವುದಾಗಿ ತಿಳಿಸಿದ್ದಾರೆ. ವ್ಯೂ ಪಾಯಿಂಟ್‌ನಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ಸದಸ್ಯರಾದ ರಂಜಿ ಪೂಣಚ್ಚ, ಡಿ.ಪಿ.ರಾಜೇಶ್, ಮತೀನ್, ಮಹ್ಮದ್ ರಾಫಿ, ಸುಶ್ಮಿತಾ, ಅನಿತಾ, ಆತೀಫ್ ಮನ್ನಾ, ಶಭರೀಶ್ ಶೆಟ್ಟಿ, ಹಮೀದ್, ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ಹನೀಫ್, ಪೌರಕಾರ್ಮಿಕರು ಹಾಜರಿದ್ದರು.

ರಶೀದಿ ಇದ್ದರೆ ಪ್ರಕರಣ ದಾಖಲಿಸಬಹುದು

● ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಜಿಲ್ಲಾಧ್ಯಕ್ಷ ಶ್ರೀನಿಧಿ ಸಲಹೆ ● ಚಾಮರಾಜನಗರದಲ್ಲಿ ರಾಷ್ಟ್ರೀಯ ಗ್ರಾಹಕ ದಿನಾಚರಣೆ



ಚಾಮರಾಜನಗರ ಜಿಲ್ಲಾಡಳಿತ ಭವನದಲ್ಲಿ ನಡೆದ ರಾಷ್ಟ್ರೀಯ ಗ್ರಾಹಕ ದಿನಾಚರಣೆಯನ್ನು ಶಾಲಾ ಮಕ್ಕಳು ಉದ್ಘಾಟಿಸಿದರು.

> **6** ಪ್ರಕರಣಗಳಲ್ಲಿ ಸತ್ಯತೆ ಇದ್ದರೆ ಮಾತ್ರ ಆಯೋಗದ ಮುಂದೆ ದೂರು ಸಲ್ಲಿಸಬೇಕು. ಪ್ರಸ್ತುತ ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಕೋರ್ಸ್ ವ್ಯಾಸಂಗ ಮಾಡಿದರೆ ಕೆಲಸ ಕೊಡಿಸುವುದಾಗಿ ಮೋಸ ಮಾಡುವುದು, ಅಂಕಪಟ್ಟಿ ನೀಡಲು ತಡ ಮಾಡುವುದು, ಪದವಿ ಪ್ರಮಾಣಪತ್ರ ನೀಡದೆ ತಡ ಮಾಡಿ ತೊಂದರೆ ನೀಡಿದರೆ ಗ್ರಾಹಕರ ನ್ಯಾಯಾಲಯದಲ್ಲಿ ದೂರು ದಾಖಲಿಸಬಹುದು.
>
> -ಭಾರತಿ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಹಿಳಾ ಸದಸ್ಯೆ

ಚಾಮರಾಜನಗರ, ಡಿ.24– ದೈನಂದಿನ ಜೀವನದಲ್ಲಿ ಪ್ರತಿಯೊಬ್ಬರು ಗ್ರಾಹಕರೇ ಆಗಿರುವುದರಿಂದ ಗ್ರಾಹಕರ ಹಕ್ಕುಗಳ ಅರಿವು ಎಲ್ಲರಿಗೂ ಅವಶ್ಯವಾಗಿದೆ ಎಂದು ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಜಿಲ್ಲಾಧ್ಯಕ್ಷ ಹೆಚ್.ಎನ್.ಶ್ರೀನಿಧಿ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ ಸಹಯೋಗದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಗ್ರಾಹಕ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಹಕರು ವಸ್ತುವನ್ನು ಖರೀದಿಸಿದಾಗ ರಶೀದಿ ತೆಗೆದುಕೊಳ್ಳಬೇಕು. ಬಳಿಕ ಖರೀದಿಸಿದ ವಸ್ತು ಗುಣಮಟ್ಟದಿಂದ ಕೂಡಿಲ್ಲವೆಂಬುದು ಕಂಡುಬಂದಾಗ ಅಥವಾ ಯಾವುದಾದರೂ ನಷ್ಟ ಹಾಗೂ ತೊಂದರೆ ಉಂಟಾದಲ್ಲಿ ರಶೀದಿ ಮೂಲಕ ಗ್ರಾಹಕರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ಪರಿಹಾರ ಪಡೆಯಬಹುದು. ಯಾವುದೇ ವಸ್ತುವನ್ನು ಖರೀದಿಸುವಾಗ ಅದರ ಗುಣಮಟ್ಟವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ತೆಗೆದುಕೊಳ್ಳಿ ಎಂದು ಸಲಹೆ ನೀಡಿದರು.

ಗ್ರಾಹಕರಿಗೆ ಹೆಚ್ಚಿನ ಅರಿವು ಮೂಡಿಸಲು ಹಾಗೂ ಗ್ರಾಹಕರ ಕುಂದುಕೊರತೆಗಳನ್ನು ಜಿಲ್ಲಾ ಗ್ರಾಹಕ ನ್ಯಾಯಾಲಯದಲ್ಲಿ ಗ್ರಾಹಕ ಆಯೋಗಗಳಿಂದ ಪರಿಹರಿಸಿಕೊಳ್ಳುವ ಬಗ್ಗೆ ಗ್ರಾಹಕರ ದಿನ ಆಚರಿಸಲಾಗುತ್ತದೆ. ಈ ನಿಟ್ಟಿನಲ್ಲಿ ವಸ್ತುವನ್ನು ಖರೀದಿಸಿದಾಗ ತಪ್ಪದೆ ಸಂಬಂಧಿಸಿದ ರಶೀದಿಯನ್ನು ಪಡೆದುಕೊಳ್ಳಬೇಕು. ಅದೇ ರೀತಿ ಇತ್ತೀಚಿಗೆ ಹೆಚ್ಚುತ್ತಿರುವ ಆನ್‌ಲೈನ್ ಖರೀದಿ ವ್ಯವಹಾರಗಳ ಬಗ್ಗೆ ಎಚ್ಚರವಹಿಸುವಂತೆ ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ್ ಮಾತನಾಡಿ, ಕಾನೂನಿನ ಅಡಿಯಲ್ಲಿ ಎಲ್ಲರೂ ಸಮಾನರು. ಯಾರೇ ತಪ್ಪು ಮಾಡಿದರೂ ಕ್ಷಮೆ ಇರುವುದಿಲ್ಲ. ಸಂವಿಧಾನ ನಮಗೆ ಮೂಲಭೂತಹಕ್ಕು ಮತ್ತು ಕರ್ತವ್ಯ ನೀಡಿದೆ. ನಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಹಾಗೂ ಮತ್ತಷ್ಟು ಗ್ರಾಹಕರು ಕಾನೂನನ್ನು ಕನಿಷ್ಠ ಮಟ್ಟಿಗೆ ತಿಳಿದುಕೊಂಡಿರಬೇಕು ಎಂದರು.

ಕಾನೂನು ಮಾಪನ ಶಾಸ್ತ್ರ ಇಲಾಖೆ ಸಹಾಯಕ ನಿಯಂತ್ರಕ ಎನ್.ಶ್ರೀಧರ್ ತೂಕ ಮತ್ತು ಅಳತೆ ಕುರಿತು ತಿಳಿಸಿದರು. ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ ಉಪ ನಿರ್ದೇಶಕ ಯೋಗಾನಂದ ಮಾತನಾಡಿ, ಭಾರತದಲ್ಲಿ 1986 ಡಿ.24ರಂದು ಗ್ರಾಹಕರ ಸಂರಕ್ಷಣಾ ಕಾಯ್ದೆ ಜಾರಿಗೊಳಿಸಲಾಯಿತು. ಪ್ರತಿವರ್ಷ ಡಿ.24ರಂದು ರಾಷ್ಟ್ರೀಯ ಗ್ರಾಹಕರ ದಿನ ಆಚರಿಸಲಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಪಂ ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರದ ಶಿವರಾಜಮ್ಮ ಇತರರು ಉಪಸ್ಥಿತರಿದ್ದರು.

ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಪರಿಶೀಲನೆ



ಚಾಮರಾಜನಗರ ಜಿಲ್ಲಾ ಮತದಾರರ ಪಟ್ಟಿ ವೀಕ್ಷಕ ಪಿ.ಮಣಿವಣ್ಣನ್ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಕಾರ್ಯ ಪರಿಶೀಲಿಸಿದರು.

ಚಾಮರಾಜನಗರ, ಡಿ.24– ಜಿಲ್ಲಾ ಮತದಾರರ ಪಟ್ಟಿ ವೀಕ್ಷಕರು ಹಾಗೂ ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್ ಮಂಗಳವಾರ ಜಿಲ್ಲೆಗೆ ಭೇಟಿ ನೀಡಿ, ಭಾವಚಿತ್ರವಿರುವ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಕಾರ್ಯಗಳ ಪರಿಶೀಲನೆ ನಡೆಸಿದರು.

ಮೊದಲು ಕೊಳ್ಳೇಗಾಲ ತಾಲೂಕಿನ ಸತ್ತೇಗಾಲ ಗ್ರಾಮ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಸಂಬಂಧ ಪರಿಶೀಲನೆ ನಡೆಸಿ ಸಭೆ ನಡೆಸಿದರು. ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಕುರಿತಂತೆ ಹಕ್ಕು ಮತ್ತು ಆಕ್ಷೇಪಣೆಗಳ ಅವಧಿಯಲ್ಲಿ ಸ್ವೀಕೃತವಾಗಿರುವ ಅರ್ಜಿ ವಿಲೇವಾರಿ ಸಂಬಂಧ ಪರಿಶೀಲಿಸಿದರು.

ನಂತರ ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ನಮೂನೆ–6, 7 ಮತ್ತು 8ರ ಅರ್ಜಿಗಳನ್ನು ಪರಿಶೀಲಿಸಿದರು. ಸಂಬಂಧಪಟ್ಟ ಆಯಾ ಕ್ಷೇತ್ರದ ಚುನಾವಣಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿಗಳಿಂದ ಪಟ್ಟಿ ಪರಿಷ್ಕರಣೆ ಕಾರ್ಯಗಳ ಸಂಬಂಧ ವಿವರ ಪಡೆದುಕೊಂಡರು. ನಿಯಮಾನುಸಾರ ಪ್ರಕ್ರಿಯೆ ಪೂರ್ಣಗೊಳಿಸಿ ಅಂತಿಮ ಪಟ್ಟಿ ಪ್ರಕಟಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಇದೇ ವೇಳೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಉಪವಿಭಾಗಾಧಿಕಾರಿ ಬಿ.ಆರ್.ಮಹೇಶ್, ತಹಸೀಲ್ದಾರ್‌ಗಳಾದ ಬಸವರಾಜು, ಜಯಪ್ರಕಾಶ್, ಗುರುಪ್ರಸಾದ್, ಗಿರಿಜಾ, ರಮೇಶ್ ಬಾಬು, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿಗಳಾದ ಉಮೇಶ್, ಶ್ರೀನಿವಾಸ್, ಷಣ್ಮುಗಂ, ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ದೇವಸ್ಥಾನ ಕೋಣೆಗೆ ಬೆಂಕಿ

ಆಲೂರು, ಡಿ.24–ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಮಂಗಳವಾರ ಮಧ್ಯಾಹ್ನ ಗ್ರಾಮದ ಬಸ್ ನಿಲ್ದಾಣದ ವೆಂಕಟೇಸ್ವಾಮಿ ದೇವಾಲಯದ ಕೋಣೆಯೊಂದು ಸುಟ್ಟುಹೋಗಿದೆ.

ದೇವಸ್ಥಾನದ ಕೋಣೆ ಬಾಗಿಲು, ಹಾಗೂ ಅದರ ಪಕ್ಕದಲ್ಲಿ ಶೇಖರಿಸಲಾಗಿದ್ದ ಊಟದ ಟೇಬಲ್, ಶಾಮೀಯಾನ ಸಾಮಗ್ರಿಗಳು, ದೇವರ ಫೋಟೋಗಳು ಸೇರಿದಂತೆ ಇನ್ನಿತರ ವಸ್ತುಗಳು ಸಂಪೂರ್ಣ ಸುಟ್ಟುಹೋಗಿವೆ. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಬೆಂಕಿ ನಂದಿಸಿದರು.

ಮಕ್ಕಳ ರಕ್ಷಣೆಗೆ ಹೆಚ್ಚು ಒತ್ತು ನೀಡಬೇಕು



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಕಾರ್ಯಾಗಾರವನ್ನು ಎಸ್ಪಿ ಡಾ.ಬಿ.ಟಿ.ಕವಿತಾ ಉದ್ಘಾಟಿಸಿದರು.

ಚಾಮರಾಜನಗರ, ಡಿ.24–ಮಿನುಗುವ ನಕ್ಷತ್ರದಂತಿರುವ ಮಕ್ಕಳ ರಕ್ಷಣೆ ಸಮಾಜದ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ತಿಳಿಸಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಸಭಾಂಗಣದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಪೊಲೀಸ್, ಶಾಲಾ ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಹಯೋಗದಲ್ಲಿ 'ಶಾಲೆಯಲ್ಲಿದೆ ಶಿಕ್ಷಣದ ಜತೆ ರಕ್ಷಣೆ' ಶೀರ್ಷಿಕೆಯಡಿ ಆರ್‌ಟಿಇ ಕಾಯ್ದೆ ಪರಿಣಾಮಕಾರಿ ಅನುಷ್ಠಾನ ಕುರಿತ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಭೂಮಿಯಲ್ಲಿನ ಮಿನುಗುವ ನಕ್ಷತ್ರಗಳಿದ್ದಂತೆ. ಪ್ರಸ್ತುತ ಶಾಲೆ, ಮನೆ, ಸಮಾಜದಲ್ಲಿ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣಗಳು ವರದಿಯಾಗುತ್ತಿವೆ. ಮಕ್ಕಳ ರಕ್ಷಣೆಗೆ ಹೆಚ್ಚು ಒತ್ತು ನೀಡಬೇಕಾದ ಅಗತ್ಯವಿದೆ. ಮಕ್ಕಳ ಸುರಕ್ಷತೆ ಬಗ್ಗೆ ಖಾತರಿ ಪಡಿಸಿಕೊಳ್ಳಬೇಕಿದೆ. ಈ ದಿಸೆಯಲ್ಲಿ ಪ್ರತಿಯೊಬ್ಬರು ಮಕ್ಕಳ ಪೋಷಣೆ, ರಕ್ಷಣೆಗೆ ಆದ್ಯತೆ ನೀಡಬೇಕಿದೆ ಎಂದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್, ಜಿಪಂ ಸಿಇಓ ಪಿ.ಲಕ್ಷ್ಮೀ ಮಾತನಾಡಿದರು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಪ್ರಾಂಶುಪಾಲ ಕಾಶಿನಾಥ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಚಲುವರಾಜ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರೂಪಣಾಧಿಕಾರಿ ಜಿ.ಆರ್.ದಿನೇಶ್, ಸಾಂಸ್ಥಿಕ ರಕ್ಷಣಾಧಿಕಾರಿ ಕುಮಾರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಎ.ರಮೇಶ, ಸ್ವಯಂ ಸೇವಾ ಸಂಸ್ಥೆಯ ಗಂಗಾಧರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅಮಿತ್ ಶಾ ಹೇಳಿಕೆ ಖಂಡಿಸಿ ಚಾ.ನಗರದಲ್ಲಿ ಬೃಹತ್ ಪ್ರತಿಭಟನೆ



ಚಾಮರಾಜನಗರದಲ್ಲಿ ಕೇಂದ್ರ ಗೃಹ ಸಚಿವ ಅಮಿಶ್ ಶಾ ವಿರುದ್ಧ ವಿವಿಧ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಡಿ.24– ಅಂಬೇಡ್ಕರ್ ಅವರನ್ನು ಅವಮಾನಿಸುವಂತಹ ಹೇಳಿಕೆ ನೀಡಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿಶ್ ಶಾ ವಿರುದ್ಧ ತಾಲೂಕು ಆದಿಕರ್ನಾಟಕ ಜನಾಂಗದ ಗಡಿಮನೆ ಮತ್ತು ಕಟ್ಟೆಮನೆ ಯಜಮಾನರು, ಕುಲಸ್ಥರು, ಅಂಬೇಡ್ಕರ್ ಮತ್ತು ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರದಲ್ಲಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಕರಿನಂಜನಪುರ ರಸ್ತೆಯ ಅಂಬೇಡ್ಕರ್ ಭವನದ ಎದುರು ಸಮಾವೇಶಗೊಂಡ ಪ್ರತಿಭಟನಾಕಾರರು, ಸತ್ತಿ ರಸ್ತೆ, ಡಿವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನದವರೆಗೆ ಮೆರವಣಿಗೆ ನಡೆಸಿದರು. ಅಮಿತ್ ಶಾ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಿದರು.

ಅಮಿತ್ ಶಾ ಅವರು ಡಿ.17ರಂದು ಸಂಸತ್‌ನಲ್ಲಿ ಅಂಬೇಡ್ಕರ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದು, ಹಗುರವಾಗಿ ನಾಲಿಗೆ ಹರಿಬಿಟ್ಟಿರುವುದು ಆರ್‌ಎಸ್‌ಎಸ್ ಸಂಘಟನೆಯ ಕೋಮುವಾದಿ, ದೇಶದ್ರೋಹಿಗಳ ನಿಜವಾದ ಬಣ್ಣ ಬಯಲಾಗಿದೆ. ಅಂಬೇಡ್ಕರ್ ಅವರ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಈ ರೀತಿ ಮಾತಾನಾಡಿರುವುದು ಸಂವಿಧಾನ ಹಾಗೂ ಅಂಬೇಡ್ಕರ್ ಅವರಿಗೆ ಅಗೌರವವಾಗಿದೆ ಎಂದು ಪ್ರತಿಭಟನಾಕಾರರು ದೂರಿದರು.

ಪ್ರತಿಭಟನೆಯಲ್ಲಿ ಸಂಸದ ಸುನೀಲ್ ಬೋಸ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಡಾ.ಬಿ.ಆರ್. ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ್, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಯೋಜಕ ಕೆ.ಎಂ.ನಾಗರಾಜ್, ಮಹೇಶ್ ಕುದರ್, ಹಳೇಪುರ ಮಹೇಶ್, ಬಿಎಸ್‌ಪಿ ಜಿಲ್ಲಾಧ್ಯಕ್ಷ ಬ.ಮ.ಕೃಷ್ಣಮೂರ್ತಿ, ರಾಜ್ಯ ಕಾರ್ಯದರ್ಶಿ ನಾಗಯ್ಯ, ಗಡಿ ಯಜಮಾನರಾದ ಮಾಧು, ಮಂಜುನಾಥ್ ರವಿಕುಮಾರ್, ಹೊಂಗನೂರು ವೀರಣ್ಣ ರಾಮಸಮುದ್ರ ನಾಗರಾಜ್, ಚಾ.ನಗರ ನಾಗರಾಜು, ನಗರಸಭಾ ಸದಸ್ಯರಾದ ಚಿನ್ನಮ್ಮ, ಕಲಾವತಿ, ಎಂ.ಮಹೇಶ್, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಮುಂದಿನ ಎರಡ್ಮೂರು ವರ್ಷದಲ್ಲಿ 24 ಗಂಟೆಯೂ ನಿರಂತರ ನೀರು ಪೂರೈಕೆ

● ಉಸ್ತುವಾರಿ ಕಾರ್ಯದರ್ಶಿ ಸೆಲ್ವಕುಮಾರ್ ನೇತೃತ್ವದಲ್ಲಿ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆ ● ನಗರಪಾಲಿಕೆ ಆಯುಕ್ತ ಷರೀಫರಿಂದ ನೀರು ಪೂರೈಕೆ ಮಾಹಿತಿ

ಮೈಸೂರು, ಡಿ.24(ಎಸ್‌ಬಿಡಿ)– ಮೈಸೂರಿನ ನಾಗರಿಕರಿಗೆ ನಿರಂತರವಾಗಿ ನೀರು ಪೂರೈಸುವ ನಿಟ್ಟಿನಲ್ಲಿ ನಗರ ಪಾಲಿಕೆ ಕಾರ್ಯೋನ್ಮುಖವಾಗಿದ್ದು, ಇನ್ನು ಎರಡು–ಮೂರು ವರ್ಷಗಳಲ್ಲಿ ಯೋಜನೆ ಕಾರ್ಯಗತಗೊಳಿಸುವ ವಿಶ್ವಾಸ ವ್ಯಕ್ತವಾಗಿದೆ.

ಮೈಸೂರು ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಲೋಕೋಪಯೋಗಿ ಇಲಾಖೆ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ನಗರಪಾಲಿಕೆ ಆಯುಕ್ತ ಆಸಾದ್ ಉರ್‌ರೆಹಮಾನ್ ಷರೀಫ್ ಈ ವಿಷಯ ತಿಳಿಸಿದ್ದಾರೆ.

260 ಕೋಟಿ ಡಿಪಿಆರ್: ನಗರಕ್ಕೆ ಪ್ರಸ್ತುತ 320 ಎಂಎಲ್‌ಡಿ ನೀರು ಸರಬರಾಜು ಆಗುತ್ತಿದ್ದು, ಅದರಲ್ಲಿ 220–230 ಎಂಎಲ್‌ಡಿ ನೀರನ್ನು ವಿತರಣೆ ಮಾಡಲಾಗುತ್ತಿದೆ. ಸದ್ಯ ಐದು ವಾರ್ಡ್‌ಗಳಿಗೆ ದಿನದ 24 ಗಂಟೆ ನೀರು ಪೂರೈಸಲಾಗುತ್ತಿದ್ದು, ಉಳಿದೆಲ್ಲಾ ವಾರ್ಡ್‌ಗಳಿಗೂ ವಾರದ ಏಳೂ ದಿನ ಈ ಸೌಲಭ್ಯ ವಿಸ್ತರಿಸಲು 260ಕೋಟಿ ರೂ. ವೆಚ್ಚದ ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ. ಈ ಯೋಜನೆ ಕಾರ್ಯಗತವಾದರೆ ಮುಂದಿನ 2–3 ವರ್ಷಗಳಲ್ಲಿ ಇಡೀ ನಗರಕ್ಕೆ ದಿನದ 24 ಗಂಟೆ ನೀರು ಪೂರೈಸಬಹುದು ಎಂದು ಅವರು ವಿವರಿಸಿದರು.

ಸಂಸ್ಕರಣಾ ಘಟಕ: ನಗರದಲ್ಲಿ 300 ಎಂಎಲ್‌ಡಿ ಸಾಮರ್ಥ್ಯದ ಮಲಿನ ನೀರು ಸಂಸ್ಕರಣಾ ಘಟಕ ನಿರ್ಮಾಣಕ್ಕೆ ಡಿಪಿಆರ್ ತಯಾರಾಗುತ್ತಿದೆ. ವಿಶ್ವಬ್ಯಾಂಕ್ ನೆರವಿನಿಂದ ಈ ಯೋಜನೆ ಕಾರ್ಯಗತಗೊಳಿಸುವ ಬಗ್ಗೆ ಚರ್ಚಿಸಲಾಗುತ್ತಿದೆ. ನಗರದಲ್ಲಿ ಪ್ರತಿನಿತ್ಯ 550 ಟನ್ ತ್ಯಾಜ್ಯ ಸಂಗ್ರಹವಾಗುತ್ತಿದ್ದು, ಇದರಲ್ಲಿ 150 ಟನ್ ಸಂಸ್ಕರಣೆ ಮಾಡಲಾಗುತ್ತಿದೆ. ಶೇ.90ರಷ್ಟು ಹಸಿ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸುತ್ತಿರುವುದರಿಂದ ಸಂಸ್ಕರಣೆಗೆ ಅನುಕೂಲವಾಗಿದೆ ಎಂದು ಪಾಲಿಕೆ ಆಯುಕ್ತರು ತಿಳಿಸಿದರು.

ಸ್ಮಾರ್ಟ್‌ಕ್ಲಾಸ್ ಸೌಲಭ್ಯ: ಜಿಲ್ಲೆಯ 49 ಪ್ರೌಢಶಾಲೆಗಳಿಗೆ ಸ್ಮಾರ್ಟ್‌ಕ್ಲಾಸ್ ಸೌಲಭ್ಯ ಒದಗಿಸಲು 1.58 ಕೋಟಿ ರೂ. ಟೆಂಡರ್ ಕರೆದಿದ್ದು, ಮುಂದಿನ ಜನವರಿಯೊಳಗೆ ಅನುಷ್ಠಾನವಾಗಲಿದೆ. ಹೆಚ್ಚುವರಿ ನಿರ್ಮಾಣದ ಕಾಮಗಾರಿಗಳಿಗೆ ಪಂಚಾಯತ್‌ರಾಜ್ ಇಲಾಖೆಗೆ ಅನುದಾನ ನೀಡಿದ್ದು, ಕಾಮಗಾರಿ ಆರಂಭವಾಗಬೇಕಿದೆ. ಸಮಾಜ ಕಲ್ಯಾಣ ಇಲಾಖೆ ವತಿಯಿಂದ 14 ವಿದ್ಯಾರ್ಥಿ ನಿಲಯಗಳ ಕಾಮಗಾರಿ ಆರಂಭಿಸಲಾಗಿದೆ. 29 ಲಕ್ಷ ವೆಚ್ಚದಲ್ಲಿ ಕೆಲ ದುರಸ್ತಿ ಕಾಮಗಾರಿ ನಡೆಸಲಾಗುತ್ತಿದೆ. ಆಯುಷ್ ಇಲಾಖೆ ವತಿಯಿಂದಲೂ ಮೂರು ಕಾಮಗಾರಿಗಳನ್ನು ಆರಂಭಿಸಲಾಗಿದೆ ಎಂದು ಡಿಡಿಪಿಐ ಜವರೇಗೌಡ ವಿವರಿಸಿದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಬಿ.ಬಸವರಾಜು, ಜಿಲ್ಲೆಯಲ್ಲಿ 2500 ಅಂಗನವಾಡಿ ಕೇಂದ್ರಗಳಿದ್ದು, ಸರ್ಕಾರದ ಸೂಚನೆಯಂತೆ ಪೌಷ್ಟಿಕಾಂಶದ ಪದಾರ್ಥಗಳನ್ನು ವಿತರಿಸಲಾಗುತ್ತಿದೆ. ಶಿಥಿಲಗೊಂಡಿರುವ ಅಂಗನವಾಡಿ ಕಟ್ಟಡಗಳ ದುರಸ್ತಿ ಹಾಗೂ ಹೊಸ ಅಂಗನವಾಡಿ ಕೇಂದ್ರಗಳ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಇದೇ ವೇಳೆ ತಿಳಿಸಿದರು.

ದಾಸ್ತಾನಿಗೆ ಮೇವು ಖರೀದಿ: ಜಿಲ್ಲೆಯಲ್ಲಿ ಸದ್ಯ ಮೇವಿನ ಕೊರತೆಯಿಲ್ಲವಾದರೂ ಮುಂಜಾಗ್ರತಾ ಕ್ರಮವಾಗಿ 90 ದಿನಗಳಿಗೆ ಅಗತ್ಯವಿರುವಷ್ಟು ಖರೀದಿಸಲಾಗುತ್ತಿದೆ. ಅಲ್ಲದೆ ಮುಂದಿನ ಬೇಸಿಗೆಯಲ್ಲಿ ಮೇವಿನ ಕೊರತೆ ಉಂಟಾಗದಂತೆ ಜಿಲ್ಲೆಗೆ ಅಗತ್ಯವಿರುವ 11,298 ಮೇವಿನ ಕಿಟ್‌ಗಳನ್ನು ಖರೀದಿಸಿದ್ದು, ಪೂರೈಕೆ ವೇಳೆ ತಾಲೂಕುಗಳಲ್ಲಿ ದಾಸ್ತಾನು ಮಾಡಲಾಗುತ್ತದೆ. ಜಾನುವಾರು ಗಣತಿ ಮುಂದುವರೆದಿದ್ದು, ಕಾಲುಬಾಯಿ ಜ್ವರ ನಿಯಂತ್ರಣಕ್ಕೆ ಬಂದಿದೆ. ಹೈನುಗಾರಿಕೆ ಉತ್ತಮವಾಗಿದ್ದು ಹಾಲು ಉತ್ಪಾದನೆ ಪ್ರತಿನಿತ್ಯ 10 ಲಕ್ಷ ಲೀಟರ್ ದಾಟಿದೆ. 4.50 ಲಕ್ಷ ಮಾರಾಟವಾಗುತ್ತಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ 50 ಸಾವಿರ ಲೀಟರ್ ಹೆಚ್ಚು ಉತ್ಪಾದನೆಯಾಗುತ್ತಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆ ಉಪ ನಿರ್ದೇಶಕ ಡಾ.ನಾಗರಾಜ್ ವಿವರಿಸಿದರು.

ಕೃಷಿಹೊಂಡಕ್ಕೆ ಹಿಂದೇಟು: ಕೃಷಿ ಹೊಂಡ ನಿರ್ಮಾಣಕ್ಕೆ ಶೇ.40ರಷ್ಟು ಸಬ್ಸಿಡಿ ನೀಡುತ್ತಿರುವುದರಿಂದ ರೈತರು ಹಿಂದೇಟು ಹಾಕುತ್ತಿದ್ದಾರೆ. ಬೇರೆ ಯೋಜನೆಗಳಲ್ಲಿ ಶೇ.70–80ರಷ್ಟು ಸಬ್ಸಿಡಿ ಇದೆ. ಕೃಷಿಹೊಂಡದ ಸುತ್ತಲೂ ತಂತಿಬೇಲಿ ನಿರ್ಮಾಣ ಮಾಡಬೇಕಿರುವ ಕಾರಣ ಆರ್ಥಿಕ ಹೊರೆಯಾಗುತ್ತಿದೆ ಎಂದು ರೈತರು ಹೇಳುತ್ತಿರುವುದಾಗಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ರವಿ ಹೇಳಿದರು.



ಮೈಸೂರಿನ ಜಿಪಂ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, ಜಿಪಂ ಸಿಇಓ ಕೆ.ಎಂ.ಗಾಯತ್ರಿ ಇದ್ದರು.

ರೇಷ್ಮೆಗೂಡು ಮಾರುಕಟ್ಟೆಗೆ ಜಾಗ ಗುರುತಿಸಿ

ಜಿಲ್ಲೆಯಲ್ಲಿ ರೇಷ್ಮೆಗೂಡು ಉತ್ಪಾದನೆ ಹೆಚ್ಚಾಗುತ್ತಿದ್ದು, ಪ್ರತಿನಿತ್ಯ 2–3 ಟನ್ ಗೂಡು ಮಾರುಕಟ್ಟೆಗೆ ಬರುತ್ತಿದೆ. 5 ಟನ್ ಗೂಡು ಬಂದಾಗ ಜಾಗದ ಸಮಸ್ಯೆ ಆಗುವುದರಿಂದ ಪ್ರತ್ಯೇಕ ಎರಡು ಜಾಗ ಕೊಡುವಂತೆ ಬಂಡೀಪಾಳ್ಯ ಎಪಿಎಂಸಿಗೆ ಪತ್ರ ಬರೆಯಲಾಗಿದೆಯಾದರೂ ಅಲ್ಲಿನ 86 ಎಕರೆ ಜಾಗ ಪೂರ್ಣವಾಗಿ ಬಳಕೆಯಾಗಿರುವುದರಿಂದ ಜಾಗದ ಕೊರತೆ ಇದೆ ಎಪಿಎಂಸಿ ಅಧಿಕಾರಿಗಳು ತಿಳಿಸಿದ ಹಿನ್ನೆಲೆಯಲ್ಲಿ ಬಂಡೀಪಾಳ್ಯ ಆಸುಪಾಸಿನಲ್ಲೇ ರೇಷ್ಮೆಗೂಡು ಮಾರುಕಟ್ಟೆಗೆ ಪ್ರತ್ಯೇಕ ಜಾಗ ಗುರುತಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸೆಲ್ವಕುಮಾರ್ ಸೂಚಿಸಿದರು.

ಅನುದಾನ ಬಳಸದಿದ್ದರೆ ಅಧಿಕಾರಿಗಳೇ ನೇರ ಹೊಣೆ

ಮೈಸೂರು: ವಿವಿಧ ಯೋಜನೆಗಳಡಿ ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಬಳಕೆಯಾಗದೆ ವಾಪಸ್ ಆದರೆ ಸಂಬಂಧಪಟ್ಟ ಅಧಿಕಾರಿಗಳನ್ನೇ ನೇರ ಹೊಣೆ ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸೆಲ್ವಕುಮಾರ್ ಎಚ್ಚರಿಕೆ ನೀಡಿದರು. ಅನುದಾನ ಸರ್ಕಾರಕ್ಕೆ ವಾಪಸ್ ಆಗದಂತೆ ನಿಗದಿತ ದಿನದೊಳಗೆ ಸಮರ್ಪಕವಾಗಿ ಬಳಸಿಕೊಳ್ಳುವುದು ಅಧಿಕಾರಿಗಳ ಜವಾಬ್ದಾರಿ. ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನಗಳನ್ನು ನಿಗದಿತ ಕಾರ್ಯಗಳಿಗೆ ಖರ್ಚು ಮಾಡಬೇಕು. ಉದ್ದೇಶಿತ ಕಾಮಗಾರಿಗಳನ್ನು ತಕ್ಷಣವೇ ಆರಂಭಿಸಬೇಕು. ಟೆಂಡರ್ ಪ್ರಕ್ರಿಯೆ ಹಂತದಲ್ಲಿದ್ದರೆ ತ್ವರಿತವಾಗಿ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ತಿಳಿಸಿದರು. ಇದೇ ವೇಳೆ ಮುಖ್ಯ ಯೋಜನಾಧಿಕಾರಿ ಕೆ.ಬಿ.ಪ್ರಭುಸ್ವಾಮಿ, ಕೇಂದ್ರ ಮತ್ತು ರಾಜ್ಯವಲಯದಿಂದ ಜಿಲ್ಲೆಯ ವಿವಿಧ ಇಲಾಖೆಗಳಿಗೆ ಬಿಡುಗಡೆಯಾಗಿರುವ ಅನುದಾನ, ಖರ್ಚು ಮತ್ತು ಟೆಂಡರ್ ಹಂತದಲ್ಲಿರುವ ಕಾಮಗಾರಿಗಳ ವಿವರ ನೀಡಿದರು.

ಎಸ್‌ಆರ್ ದರ ಗಗನಕ್ಕೆ: ಕೊರೊನಾ ಬಂದ ಮೇಲೆ ಎಸ್‌ಆರ್ ದರವನ್ನು ಅಧಿಕವಾಗಿ ದಾಖಲಿಸುತ್ತಿದ್ದಾರೆ. ಹೊಸ ಗುತ್ತಿಗೆದಾರರು ವಹಿವಾಟು ಗುರಿ ಉದ್ದೇಶದಿಂದ ಹೀಗೆ ಮಾಡುತ್ತಿದ್ದಾರೆ. ಆದರೆ ಹಳೆಯ ಗುತ್ತಿಗೆದಾರರಿಂದ ಈ ಸಮಸ್ಯೆ ಇಲ್ಲ. ಹೊಸದಾಗಿ ಕಾಮಗಾರಿ ಮಾಡಲಿರುವವರು ಎಸ್‌ಆರ್ ದರ ಹೆಚ್ಚಿಸುತ್ತಿರುವುದರಿಂದ ಮರು ಟೆಂಡರ್ ಕರೆಯುವಂತಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇಂಜಿನಿಯರ್‌ಗಳು ತಿಳಿಸಿದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, ಜಿಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ವೇದಿಕೆಯಲ್ಲಿದ್ದರು. ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಉಪ ವಿಭಾಗಾಧಿಕಾರಿ ಕೆ.ಆರ್.ರಕ್ಷಿತ್, ಮುಖ್ಯ ಯೋಜನಾಧಿಕಾರಿ ಕೆ.ಬಿ.ಪ್ರಭುಸ್ವಾಮಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಎ.ಎಸ್.ರಂಜಿತ್‌ಕುಮಾರ್, ಜಿಲ್ಲಾ ಆರ್‌ಸಿಎಚ್ ಜಯಂತ್, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಕಾರ್ಯಪಾಲಕ ಇಂಜಿನಿಯರ್ ತಿಪ್ಪಾರೆಡ್ಡಿ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ರಾಘವೇಂದ್ರ, ಪರಿಶಿಷ್ಟವರ್ಗಗಳ ಕಲ್ಯಾಣ ಇಲಾಖೆ ಯೋಜನಾಧಿಕಾರಿ ಮಲ್ಲೇಶ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿದ್ದರು.

ವಿಶ್ವ ಗ್ರಾಹಕರ ದಿನ ವಿಶಿಷ್ಟ ಆಚರಣೆ



ಮೈಸೂರು ಗ್ರಾಹಕ ಪರಿಷತ್ ಹಾಗೂ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಎನ್‌ಎಸ್‌ಎಸ್ ಘಟಕದ ಸಹಯೋಗದೊಂದಿಗೆ ವಿಶ್ವ ಗ್ರಾಹಕರ ದಿನವನ್ನು ವಿಶಿಷ್ಟವಾಗಿ ಮಂಗಳವಾರ ಆಚರಿಸಲಾಯಿತು.

ಮೈಸೂರು, ಡಿ.24(ಎಸ್‌ಪಿಎನ್)– ಕರ್ನಾಟಕ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಮೈಸೂರು ಗ್ರಾಹಕ ಪರಿಷತ್ ಹಾಗೂ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಎನ್‌ಎಸ್‌ಎಸ್ ಘಟಕದ ಸಹಯೋಗದೊಂದಿಗೆ ವಿಶ್ವ ಗ್ರಾಹಕರ ದಿನವನ್ನು ವಿಶಿಷ್ಟವಾಗಿ ಮಂಗಳವಾರ ಆಚರಿಸಲಾಯಿತು. 1986ರ ಗ್ರಾಹಕರ ಕಾಯ್ದೆಯನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದೆ. ಇದರ ಮಹತ್ವವನ್ನು ಪ್ರತಿಯೊಬ್ಬ ಗ್ರಾಹಕರು ತಿಳಿದುಕೊಳ್ಳಬೇಕು. ಅಂತೆಯೇ ದಸರಾ ವಸ್ತು ಪ್ರದರ್ಶನದಲ್ಲಿ ಇಲ್ಲಿನ ವರ್ತಕರು, ಖರೀದಿಸುವ ಪದಾರ್ಥಗಳ ಬೆಲೆ ವ್ಯತ್ಯಾಸವಾದರೆ, ಗ್ರಾಹಕರ ಕೋರ್ಟ್‌ನಲ್ಲಿ ಪ್ರಶ್ನಿಸಿ, ಗ್ರಾಹಕರು ನ್ಯಾಯ ಪಡೆದುಕೊಳ್ಳಬಹುದು ಎಂದು ಮೈಗ್ರಾಪ ಸದಸ್ಯರು ಗ್ರಾಹಕರಲ್ಲಿ ಜಾಗೃತಿ ಮೂಡಿಸಿದರು. ಇದೇ ಸಂದರ್ಭದಲ್ಲಿ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ವಿಶ್ವ ಗ್ರಾಹಕರ ದಿನಾಚರಣೆಯ ಮಹತ್ವದ ಕುರಿತು ಬೀದಿ ನಾಟಕದ ಪ್ರದರ್ಶಿಸಿ, ವಿವಿಧ ಫಲಕಗಳನ್ನು ಪ್ರದರ್ಶಿಸಿ ಗ್ರಾಹಕರಲ್ಲಿ ಜಾಗೃತಿ ಮೂಡಿಸಿದರು. ಈ ವೇಳೆ ಮೈಗ್ರಾಪ ಸದಸ್ಯರಾದ ಭಾಮಿ ವಿ.ಶೆಣೈ, ದಯಾನಂದ ಸಾಗರ್, ಎಸ್.ವಿ.ಶಂಕರ್, ಶೇಷಾದ್ರಿಪುರಂ ಕಾಲೇಜು ಎನ್‌ಎಸ್‌ಎಸ್ ಘಟಕದ ಸಂಯೋಜನಾಧಿಕಾರಿ ಪಿ.ಆರ್.ಗುರುಮೂರ್ತಿ ಭಟ್ ಉಪನ್ಯಾಸ ಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಒಂದು ರಾಷ್ಟ್ರ ಒಂದು ಚುನಾವಣೆ: ಜ.8ಕ್ಕೆ ಜಂಟಿ ಸದನ ಸಮಿತಿ ಮೊದಲ ಸಭೆ

ನವದೆಹಲಿ: ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಉದ್ದೇಶದ ಚುನಾವಣಾ ಸುಧಾರಣೆಯ ಮಸೂದೆ ಕುರಿತು ಚರ್ಚಿಸಲು ಜನವರಿ 8 ರಂದು 39 ಸದಸ್ಯರ ಮೊದಲ ಜಂಟಿ ಸಂಸದೀಯ ಸಮಿತಿಯ ಸಭೆ ನಡೆಯಲಿದೆ. ಬಿಜೆಪಿ ಸದಸ್ಯ ಪಿ.ಪಿ. ಚೌಧರಿ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯಲ್ಲಿ ಅಧಿಕಾರಿಗಳು ಮಸೂದೆ ಕುರಿತು ವಿವರ ನೀಡಲಿದ್ದಾರೆ. ಸಂವಿಧಾನ (129 ನೇ ತಿದ್ದುಪಡಿ) ಮಸೂದೆ ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳ (ತಿದ್ದುಪಡಿ) ಮಸೂದೆಯನ್ನು ಕಳೆದ ವಾರ ಲೋಕಸಭೆಯಲ್ಲಿ ಮಂಡಿಸಲಾಗಿತ್ತು. ಚಳಿಗಾಲದ ಅಧಿವೇಶನದ ಕೊನೆಯ ದಿನವಾದ ಶುಕ್ರವಾರ ಸಂಸತ್ತಿನ ಜಂಟಿ ಸದನ ಸಮಿತಿಗೆ ಒಪ್ಪಿಸಲಾಗಿತ್ತು.

ಕೊಳಲು–ಪಿಟೀಲು ವಾದನದ ಸಮ್ಮಿಲನ; ಶಾಸ್ತ್ರೀಯ ಸಂಗೀತದೊಂದಿಗೆ ಮೂಡಿದ ವರ್ಣಚಿತ್ರ

● ಗಂಜೀಫ ಕಲೆಯ ಖ್ಯಾತ ಕಲಾವಿದ ರಘುಪತಿ ಭಟ್ ಕುಂಚದಲ್ಲಿ ಅರಳಿದ ಮಹಾಕಾಳಿ, ರಾಧಾಕೃಷ್ಣ ಚಿತ್ರ ● ಶಾಸ್ತ್ರೀಯ ಗಾಯನದ ರಸಧಾರೆ ಆಸ್ವಾದಿಸಿ ಸಂಭ್ರಮಿಸಿದ ಶ್ರೋತೃಗಳು

ಮೈಸೂರು,ಡಿ.24(ಪಿಎಂ)– ಕೊಳಲು ಮತ್ತು ಪಿಟೀಲು ವಾದನದ ಫ್ಯೂಶನ್ ಸಂಗೀತದ ಸಮ್ಮಿಲನದಲ್ಲಿ ಸೂಸಿದ ರಾಗ ಮಾಧುರ್ಯಕ್ಕೆ ಸಭಿಕರು ಮನಸೋತರೆ, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಗಾಯನವು ಶ್ರೋತೃಗಳನ್ನು ಮಂತ್ರ ಮುಗ್ಧರನ್ನಾಗಿಸಿತು. ಈ ಗಾಯನದೊಂದಿಗೆ ಗಂಜೀಫ ಕಲೆಯ ಖ್ಯಾತ ಕಲಾವಿದ ರಘುಪತಿ ಭಟ್, ಮೂಡಿಸಿದ ವರ್ಣಚಿತ್ರ ಪ್ರೇಕ್ಷಕರ ಮನಮುದಗೊಳಿಸಿತು. ಜೊತೆಗೆ ಗೇಯ ನೃತ್ಯ ನಾಟಕವು ಕೃಷ್ಣನ ಬಾಲಲೀಲೆಯನ್ನು ಪ್ರಧಾನವಾಗಿ ಅನಾವರಣಗೊಳಿಸಿತು.


ಮೈಸೂರು ಅರಮನೆ ವೇದಿಕೆಯಲ್ಲಿ ಕಂಡುಬಂದ ಸಾಂಸ್ಕೃತಿಕ ವೈಭವವಿದು. ಅರಮನೆ ಮಂಡಳಿ ವತಿಯಿಂದ ಹಮ್ಮಿಕೊಂಡಿರುವ ಫಲಪುಷ್ಪ ಪ್ರದರ್ಶನದ ಪ್ರಯುಕ್ತ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದು, ಅಂತೆಯೇ ನಾಲ್ಕನೇಯ ದಿನವಾದ ಮಂಗಳವಾರ ಇಂತಹ ಕಲಾಪ್ರಕಾರಗಳು ಸಭಿಕರನ್ನು ಸಂಭ್ರಮದಲ್ಲಿ ತೇಲುವಂತೆ ಮಾಡಿದವು. ಶಡಜ್ ಗೊಡ್ಖಿಂಡಿ (ಕೊಳಲು) ಮತ್ತು ಅಪೂರ್ವ ಕೃಷ್ಣ (ಪಿಟೀಲು ವಾದನ) ಹಾಗೂ ತಂಡದವರ ಫ್ಯೂಶನ್ ಸಂಗೀತವು ಸಪ್ತಸ್ವರದ ರಸಧಾರೆ ಹರಿಸಿ ನಾದದ ಮಾಧುರ್ಯ ಹೊಮ್ಮಿಸಿ, ಸಂಗೀತದ ತರಂಗದಲ್ಲಿ ಸಭಿಕರು ಮೈಮರೆಯುವಂತೆ ಮಾಡಿತು. ಪ್ರಧಾನವಾಗಿ ಕೊಳಲು ಮತ್ತು ಪಿಟೀಲು ವಾದನದಲ್ಲಿ 'ರೋಜಾ' ಸಿನಿಮಾದ 'ರೋಜಾ ಜಾನೇ ಮನ್' ಗಾಯನ ಹೊಮ್ಮಿದರೆ, ಡ್ರಮ್, ಮೃದಂಗ ಹಾಗೂ ಕೀಬೋರ್ಡ್ ಸಂಗೀತವು ಮೇಳೈಸಿದಾಗ, ತಲೆದೂಗಿದ ಶ್ರೋತೃಗಳು ಅಭಿಮಾನದಿಂದ ಚಪ್ಪಾಳೆ ಮಳೆ ಸುರಿಸಿದರು.

ಬಳಿಕ ಪಹಾಡಿ ರಾಗದಲ್ಲಿ ಪಿಟೀಲು ಹಾಗೂ ಕೊಳಲಿನ ವಾದ್ಯ ಸಂಗೀತ ಸೂಸಿ ಸಭಿಕರ ಮೋಡಿ ಮಾಡಿತು. ಜೊತೆಗೆ 'ಮೂಡಲ ಮನೆಯ ಮುತ್ತಿನ ನೀರಿನ ಯರಕವಾ ಹೊಯ್ದಾ' ಗಾನವು ವಾದ್ಯ ಸಂಗೀತದಲ್ಲಿ ಸೂಸುತ್ತಿದ್ದಂತೆ ಸಭಿಕರು ನಲಿದಾಡಿ ಸಂಭ್ರಮಿಸಿದರು.

ನಂತರ ಸಿದ್ದಾರ್ಥ ಬೆಲ್ಮಣ್ಣು ಅವರಿಂದ ಆರಂಭಗೊಂಡ 'ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ' ಹಾಗೂ ಇದರೊಂದಿಗೆ ಗಂಜೀಫ ಕಲೆಯ ಖ್ಯಾತ ಕಲಾವಿದ ರಘುಪತಿ ಭಟ್ ಅವರ ವರ್ಣಚಿತ್ರ ಅನಾವರಣಕ್ಕೆ ವೇದಿಕೆ ತೆರೆದುಕೊಂಡಿತು. ಶಹನ ಕನಾಡ ರಾಗ ಹಾಗೂ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಪದ್ಧತಿಯಲ್ಲಿ 'ಭವಾನಿ ಶ್ರೀದೇವಿ ನಾರಾಯಣಿ...' ಗೀತೆಯನ್ನು ಸಿದ್ಧಾರ್ಥ ಬೆಲ್ಮಣ್ಣು ಹಾಡುತ್ತಿದ್ದರೆ, ವೇದಿಕೆಯ ಒಂದು ಬದಿಯಲ್ಲಿ ರಘುಪತಿ ಭಟ್ ಅವರ ಕುಂಚದ ಕೈಚಳಕ ಆರಂಭಗೊಂಡಿತ್ತು. ಗಾಯನ ಮುಗಿಯುತ್ತಿದ್ದಂತೆ 10 ತಲೆ, 10 ಕೈ ಮತ್ತು 10 ಕಾಲುಗಳನ್ನು ಹೊಂದಿರುವ ಮಹಾಕಾಳಿಯ ಚಿತ್ರ ಮೂಡಿ ಸಭಿಕರಲ್ಲಿ ಭಕ್ತಿಭಾವ ಮೂಡಿಸಿತು.


ಯಮುನಾ ಕಲ್ಯಾಣಿ ರಾಗದಲ್ಲಿ 'ಕೃಷ್ಣ ನೀ ಬೇಗನೇ ಬಾರೋ...' ಗೀತೆಯನ್ನು ಸಿದ್ಧಾರ್ಥ ಬೆಲ್ಮಣ್ಣು ಸಾದರಪಡಿಸಿದರು. ಈ ಹಾಡು ಸಹ ಮುಗಿಯುವ ವೇಳೆಗೆ ರಘುಪತಿ ಭಟ್ ಅವರು, ತಮ್ಮ ಕುಂಚದಲ್ಲಿ ರಾಧಾಕೃಷ್ಣನ ವರ್ಣಚಿತ್ರ ಅನಾವರಣಗೊಳಿಸಿದರು. ಕೃಷ್ಣ ಮತ್ತು ರಾಧೆಯ ಮನಮೋಹಕ ಚಿತ್ರ ಕಂಡ ಸಭಿಕರು ಚಪ್ಪಾಳೆಯ ಮಳೆಗರೆದರು.

ಅಂತಿಮವಾಗಿ ಕೃಷ್ಣನ ಲೀಲೆಯ ನೃತ್ಯ ನಾಟಕ ಪ್ರದರ್ಶನಕ್ಕೆ ವೇದಿಕೆ ತೆರೆದುಕೊಂಡಿತು. ಪದ್ಮಭೂಷಣ ಡಿ.ವಿ.ಗುಂಡಪ್ಪ ವಿರಚಿತ ಗೇಯ ನೃತ್ಯ ನಾಟಕ 'ಶ್ರೀಕೃಷ್ಣ ಲೀಲಾ ವಿಭೂತಿ' ಪ್ರದರ್ಶನವು ಕೃಷ್ಣನ ಬಾಲಲೀಲೆಯನ್ನು ಪ್ರಧಾನವಾಗಿ ಅನಾವರಣಗೊಳಿಸಿತು. ವಿದುಷಿ ಡಾ.ನಾಗಲಕ್ಷ್ಮೀ ನಾಗರಾಜನ್ ನೇತೃತ್ವದಲ್ಲಿ ಚಂಪಕ ಅಕಾಡೆಮಿ ತಂಡದ 40 ಮಂದಿ ಕಲಾವಿದರು ಈ ಪ್ರದರ್ಶನ ನೀಡಿ ಪ್ರೇಕ್ಷಕರ ಅಭಿಮಾನಕ್ಕೆ ಪಾತ್ರರಾದರು. ಕೃಷ್ಣನ ಪಾತ್ರದಲ್ಲಿ ನೃತ್ಯಾಭಿನಯ ನೀಡಿದ ಡಾ.ನಾಗಲಕ್ಷ್ಮೀ ನಾಗರಾಜನ್ ಸಭಿಕರಿಂದ ಅಭಿಮಾನದ ಚಪ್ಪಾಳೆ ಪಡೆಯುವಲ್ಲಿ ಯಶಸ್ವಿಯಾದರು. ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಸೇರಿದಂತೆ ಮತ್ತಿತರ ಗಣ್ಯರು ಹಾಜರಿದ್ದರು.





ಅರಮನೆ ವೇದಿಕೆಯಲ್ಲಿ ಮಂಗಳವಾರ ಶಡಜ್ ಗೊಡ್ಖಿಂಡಿ (ಕೊಳಲು) ಮತ್ತು ಅಪೂರ್ವ ಕೃಷ್ಣ (ಪಿಟೀಲು ವಾದನ) ಅವರ ಫ್ಯೂಶನ್ ಸಂಗೀತ ಕಾರ್ಯಕ್ರಮ ನಡೆಯಿತು. ಮತ್ತೊಂದು ಚಿತ್ರದಲ್ಲಿ ಸಿದ್ಧಾರ್ಥ ಬೆಲ್ಮಣ್ಣು ಶಾಸ್ತ್ರೀಯ ಗಾಯನ ಸಾದರಪಡಿಸಿದ್ದನ್ನು ಕಾಣಬಹುದು.



ಗಂಜೀಫ ಕಲೆಯ ಖ್ಯಾತ ಕಲಾವಿದ ರಘುಪತಿ ಭಟ್ ಅವರು ಮಹಾಕಾಳಿಯ ವರ್ಣಚಿತ್ರ ಮೂಡಿಸಿದ ಕ್ಷಣ.



ಕೃಷ್ಣನ ಲೀಲೆಯ ನೃತ್ಯ ನಾಟಕ ಪ್ರದರ್ಶನದ ದೃಶ್ಯ.

ಯುವ ಸಮಾಜವಾದಿಗಳು ನ್ಯಾಯಯುತ ದುಡಿಮೆ ಹಣವನ್ನು ಕೂಡಿಡುವುದು ಒಳ್ಳೆಯದು

● ಹಿರಿಯ ಸಮಾಜವಾದಿ ಕಿಶನ್ ಪಟ್ನಾಯಕ್ ಪತ್ನಿ ವಾಣಿದಾಸ್ ಕಿವಿಮಾತು ● ತಮ್ಮ ಪತಿ ಅಂತಿಮ ದಿನಗಳಲ್ಲಿ ಅನುಭವಿಸಿದ ಸಂಕಷ್ಟ ಪರಿಸ್ಥಿತಿ ಆಧರಿಸಿ ಈ ಹಿತನುಡಿ

ಮೈಸೂರು, ಡಿ.24(ಎಸ್‌ಪಿಎನ್)– ಇಂದಿನ ಯುವ ಸಮಾಜವಾದಿಗಳು, ತಮ್ಮ ಮುಂದಿನ ಭವಿಷ್ಯಕ್ಕಾಗಿ ನ್ಯಾಯಯುತ ದುಡಿಮೆಯಿಂದ ಗಳಿಸಿದ ಸ್ವಲ್ಪ ಹಣವನ್ನು ಕೂಡಿಟ್ಟುಕೊಳ್ಳುವಂತೆ ಹಿರಿಯ ಸಮಾಜವಾದಿ, ಮಾಜಿ ಸಂಸದ ಕಿಶನ್ ಪಟ್ನಾಯಕ್ ಅವರ ಪತ್ನಿ ವಾಣಿದಾಸ್ ಸಲಹೆ ನೀಡಿದರು.

ಮೈಸೂರು ಹಾರ್ಡ್ವಿಕ್ ಪಿಯು ಕಾಲೇಜು ಆವರಣದ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಸಂವಾದದಲ್ಲಿ ಮಾಜಿ ಸಂಸದ ಕಿಶನ್ ಪಟ್ನಾಯಕ್ ಪತ್ನಿ ವಾಣಿದಾಸ್ ಪಾಲ್ಗೊಂಡು ಮಾತನಾಡಿದರು.

ಕಿಶನ್ ಪಟ್ನಾಯಕ್ ಅತೀ ಚಿಕ್ಕ ವಯಸ್ಸಿನಲ್ಲಿ ಸಂಸದರಾಗಿ, ಶಾಸಕರಾಗಿ ಆಯ್ಕೆಯಾಗಿದ್ದರು. ಇವರನ್ನು ಮದುವೆಯಾಗಿದ್ದೇ ನನ್ನ ಪುಣ್ಯ. ಮಹಾರಾಷ್ಟ್ರದ ಪುಣೆಯ ಆಶ್ರಮವೊಂದರಲ್ಲಿ ಆಶ್ರಯ ಪಡೆದು, ಪುಣೆಯ ಕರ್ವೆ ಶಾಲೆಯಲ್ಲಿ 10 ತರಗತಿಯವರೆಗೆ ಮರಾಠಿ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ, ಜೊತೆಗೆ ಸಂಗೀತವನ್ನು ಕಲಿಯತೊಡಗಿದೆ. ಒಡಿಸ್ಸಾದ ನಮ್ಮ ಹಳ್ಳಿಯಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣವೆಂಬುದು ಕನಸ್ಸಿನ ಮಾತು ಎಂದರು.

ನನಗೆ 10 ವರ್ಷ ಆಗಿದ್ದಾಗ ಮನೆಯಲ್ಲಿ ಮದುವೆ ಮಾಡಲು ಮುಂದಾಗಿದ್ದರು. ಹಸೆಮಣೆ ಏರಬೇಕಿದ್ದ ನಾನು, ಅಲ್ಲಿ ನಡೆದಿದ್ದೆ ಬೇರೆ. ಕೊನೆಗೆ 'ಅಪಶಕುನ' ಎಂದು ಹೇಳಿ ನನ್ನ ಮದುವೆ ಮುರಿದು ಬಿತ್ತು. ಯಾಕೆ ಮುರಿದುಬಿತ್ತು ಎಂಬುದು ನನಗೆ ತಿಳಿಯಲೇ ಇಲ್ಲ. ಅಂದಿನಿಂದ ನನ್ನ ತಂದೆ–ತಾಯಿ ಹಾಗೂ ಕುಟುಂಬದವರಿಂದ ತಿರಸ್ಕಾರಗೊಂಡು ಮನೆ ಬಿಡುವ ಪ್ರಸಂಗ ಬಂತು. ಅಲ್ಲಿಂದ ಹೊರಟು ಮಹಾರಾಷ್ಟ್ರದ ಪುಣೆಗೆ ಬಂದ ಕಷ್ಟದ ದಿನಗಳನ್ನು ನೆನೆದರು.

ಪುಣೆಯಲ್ಲಿ ಶಿಕ್ಷಣದ ಜೊತೆಗೆ ಪಂ.ಬಿನಾಯಕ್ ರಾವ್ ಪಟವರ್ಧನ್ ಅವರ ಬಳಿ ಸಂಗೀತ ಕಲಿತು. ಮುಂದೆ ಇದೇ ನನಗೆ ಅನ್ನ ಕೊಡುವ ವೃತ್ತಿಯಾಯಿತು ಎಂದ ವಾಣಿದಾಸ್, ರಾಮ್‌ಕದಂ, ಅನಂತ್, ಕೃಷ್ಣ ಕಲ್ಲೆ, ಆಶಾ ಭೋಸ್ಲೆ ಸೇರಿದಂತೆ ಇತರೆ ಸಿನಿಮಾ ನಿರ್ದೇಶಕರು, ಗಾಯಕರ ಸಂಪರ್ಕಕ್ಕೆ ಬಂದು ತನ್ನ ಜೀವನದ ದಿಕ್ಕೆ ಬದಲಾಯಿತು. ಮುಂದೆ ಪರಿಚಿತರೊಬ್ಬರು ಮದುವೆ ಪ್ರಸ್ತಾಪ ಮುಂದಿಟ್ಟರು. ಕಿಶನ್ ಪಟ್ನಾಯಕ್ ಅವರೊಂದಿಗೆ ಕೆಲ ಷರತ್ತಿನೊಂದಿಗೆ ನನ್ನ, ಅವರ ಮದುವೆಯಾಯಿತು ಎಂದರು. ಕಿಶನ್ ಪಟ್ನಾಯಕ್ ಸಮಾಜವಾದಿ ಹಿನ್ನೆಲೆಯಲ್ಲಿ ರಾಜಕಾರಣ ಪ್ರಾರಂಭಿಸಿದ್ದರೂ ಎಂದಿಗೂ ಆಸ್ತಿ, ಸಂಪತ್ತು ಮಾಡಬೇಕೆಂಬ ಮನಸ್ಸು ಮಾಡಿದವರಲ್ಲಾ, ಶಾಸಕರಾಗಿ, ಸಂಸದರಾಗಿದ್ದರೂ ಅವರಿಗೆ ಸ್ವಂತ ನೆಲೆ ಇರಲಿಲ್ಲ. ನಾನು ಮಹಾರಾಷ್ಟ್ರದಿಂದ ಒಡಿಸ್ಸಾಗೆ ಹೋದ ಮೇಲೆ ಕಷ್ಟಪಟ್ಟು ಕೇಂದ್ರೀಯ ವಿದ್ಯಾಲಯದಲ್ಲಿ ಸಂಗೀತ ಶಿಕ್ಷಕಿಯಾಗಿ ಸೇರಿಕೊಂಡೆ. ಆ ಸಂಬಳದಲ್ಲಿ ಬದುಕು ಕಟ್ಟಿಕೊಂಡೆ. ಯುವ ಸಂಸದರಾಗಿದ್ದ ಕಿಶನ್‌ಜೀ ಅವರು ಎಂದಿಗೂ ಸರ್ಕಾರಿ ಸವಲತ್ತುಗಳನ್ನು ಬಳಸಿಕೊಳ್ಳಲು ಒಪ್ಪದಿದ್ದ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿದರು.

ಮೈಸೂರಿನ ಸಂಸದರಾಗಿದ್ದ ಯಶೋಧರ ತುಳಸಿ ದಾಸಪ್ಪ, ಬಿಹಾರ ಈಗಿನ ಸಿಎಂ ನಿತೀಶ್ ಕುಮಾರ್, ಲಾಲು ಪ್ರಸಾದ್ ಯಾದವ್, ಉತ್ತರ ಪ್ರದೇಶದ ಮುಲಾಯ್‌ಸಿಂಗ್ ಯಾದವ್, ಮಾಜಿ ಪ್ರಧಾನಿ ಇಂದಿರಾಗಾಂಧಿ ಸೇರಿದಂತೆ ಭಾರತೀಯ ರಾಜಕಾರಣದ ದಿಗ್ಗಜರೆಲ್ಲಾ ಇವರ ಸಂಪರ್ಕದಲ್ಲಿದ್ದರು. ಒಮ್ಮೆ ಇಂದಿರಾಗಾಂಧಿಯವರು ಕಿಶನ್ ಜೀ ಅವರನ್ನು ಕರೆಯಿಸಿ, ನೀವು ಕಾಂಗ್ರೆಸ್ ಸೇರಿಕೊಳ್ಳಿ, ನಿಮ್ಮನ್ನು ಯಾವುದಾದರೂ ಒಂದು ರಾಜ್ಯಕ್ಕೆ ರಾಜ್ಯಪಾಲರಾಗಿ ನೇಮಕ ಮಾಡುತ್ತೇನೆ ಎಂದಿದ್ದರು. ಇದಕ್ಕೆ ಕಿಶನ್‌ಜಿ ಒಪ್ಪಿರಲಿಲ್ಲ. ಅಲ್ಲದೆ, ದೇಶ ರಾಜಕೀಯ ವ್ಯಕ್ತಿಗಳೊಂದಿನ ಕೆಲ ಘಟನೆಗಳನ್ನು ಉಲ್ಲೇಖಿಸಿದರಲ್ಲದೆ, ನಿತೀಶ್ ಕುಮಾರ್, ಲಾಲುಪ್ರಸಾದ್ ಯಾದವರೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದ ಪ್ರಸಂಗವನ್ನು ವಿವರಿಸಿದರು.

ಕಿಶನ್ ಪಟ್ನಾಯಕ್ ಸಾಯುವ ಮುನ್ನ ಹೈದರಾಬಾದಿನಲ್ಲಿ ಪರಿಚಿತರು ಆಯೋಜಿಸಿದ್ದ ಖಾಸಗಿ ಕಾರ್ಯಕ್ರಮಕ್ಕೆ ಹೋಗಿದ್ದರು. ಆ ಕಾರ್ಯಕ್ರಮದಲ್ಲಿ ಆರೋಗ್ಯ ಹದಗೆಟ್ಟು ನಂತರ ಮೂರು ದಿನ ರೈಲಿನಲ್ಲಿ ಪಯಣಿಸಿ, ಒಡಿಸ್ಸಾಗೆ ಬಂದಿದ್ದರು. ಪರಿಚಿತರು ಈ ಸಂದರ್ಭದಲ್ಲಿ ನಡೆದು ರೀತಿ ಕಿಶನ್ ಪಟ್ನಾಯಕ್ ಬಾರಿ ನೊಂದಿದ್ದರು. ಅಷ್ಟರಲ್ಲಿ ಕಿಶನ್‌ಜಿ ತುಂಬಾ ಸೊರಗಿದ್ದರು. ಸೂಕ್ತ ಚಿಕಿತ್ಸೆ ಪಡೆಯಲು ಹಣಕಾಸಿನ ತೊಂದರೆಯಾಗಿ ಸಾವನ್ನಪ್ಪಿದ ಕಹಿ ಘಟನೆಯನ್ನು ವಿವರಿಸಿದರು. ಕಿಶನ್ ಜೀ ಅವರ ಆದರ್ಶ ಬದುಕು ಅವರ ಕೊನೆಗಾಲದಲ್ಲಿ ಕೈಹಿಡಿಯಲಿಲ್ಲ. ಜ್ವರದಿಂದ ಬಳಲುತ್ತಿದ್ದ ಅವರಿಗೆ ಸೂಕ್ತ ಚಿಕಿತ್ಸೆ ಕೊಡಿಸಲು ನನ್ನಿಂದ ಸಾಧ್ಯವಾಗಲಿಲ್ಲ. ಹಾಗಾಗಿ ಇಂದಿನ ಯುವ ಸಮಾಜವಾದಿಗಳು, ಮುಪ್ಪಿನ ಜೀವನಕ್ಕಾಗಿ ನ್ಯಾಯ ಮಾರ್ಗದಲ್ಲಿ ಗಳಿಸಿದ ಹಣವನ್ನು ಕೂಡಿಟ್ಟುಕೊಳ್ಳುವಂತೆ ಕಿವಿಮಾತು ಹೇಳಿದರು. ಈ ವೇಳೆ ಸಿಆರ್‌ಪಿಎಫ್ ನಿವೃತ್ತ ಐಜಿಪಿ ಕೆ.ಅರ್ಕೇಶ್ ಸಂವಾದ ನಡೆಸಿಕೊಟ್ಟರು. ಈ ವೇಳೆ ಹಿರಿಯ ರಂಗಕರ್ಮಿ ರಾಜೇಶ್ ಬಸವಣ್ಣ, ಅಭಿರುಚಿ ಗಣೇಶ್, ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ. ರಂಗಸ್ವಾಮಿ ಸೇರಿದಂತೆ ಇತರರು ಸಂವಾದದಲ್ಲಿ ಉಪಸ್ಥಿತರಿದ್ದರು.





ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ ಸಂವಾದದಲ್ಲಿ ಮಾಜಿ ಸಂಸದ ಕಿಶನ್ ಪಟ್ನಾಯಕ್ ಪತ್ನಿ ವಾಣಿದಾಸ್ ಪಾಲ್ಗೊಂಡಿದ್ದರು. ಮತ್ತೊಂದು ಚಿತ್ರದಲ್ಲಿ ಪ್ರಗತಿಪರ ಮುಖಂಡರನ್ನು ಕಾಣಬಹುದು.

> **"** ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಒಡಿಸ್ಸಾ ಅಭಿವೃದ್ಧಿ ಕಂಡಿಲ್ಲ. ಇಂದಿಗೂ ಆದಿವಾಸಿಗಳು, ಬುಡಕಟ್ಟು ಜನರು ಹಸಿವಿನಿಂದ ಬಳಲುತ್ತಿದ್ದಾರೆ. ಆರೋಗ್ಯ ಹದಗೆಟ್ಟರೆ ಸೂಕ್ತ ಚಿಕಿತ್ಸೆ ಪಡೆಯಲು ಅಲ್ಲಿನ ಆಸ್ಪತ್ರೆಗಳಲ್ಲಿ ಮೂಲಸೌಕರ್ಯಗಳಿಲ್ಲ. ಒಟ್ಟಿನಲ್ಲಿ ಅಲ್ಲಿ ಗ್ರಾಮೀಣರ ಬದುಕು ಕಷ್ಟದಲ್ಲಿದೆ. ಕೇಂದ್ರದಲ್ಲಿರುವ ಮೋದಿ ಸರ್ಕಾರ, ಸಮಾಜವಾದಿಗಳನ್ನು ಕೇಂದ್ರದ ತನಿಖಾ ಸಂಸ್ಥೆಗಳ ಮೂಲಕ ಹೆದರಿಸಿ, ತಮ್ಮ ತೆಕ್ಕೆಗೆ ತೆಗೆದುಕೊಳ್ಳುತ್ತಿರುವುದು ಬೇಸರ ಸಂಗತಿ. –
> ವಾಣಿ ದಾಸ್, ಹಿರಿಯ ಸಮಾಜವಾದಿ ಕಿಶನ್ ಪಟ್ನಾಯಕ್ ಪತ್ನಿ

ಮೈಸೂರು ಮಿತ್ರ

ಬುಧವಾರ 25 ಡಿಸೆಂಬರ್ 2024

ಶಿಥಿಲಗೊಂಡ ಹಳೇ ತರಕಾರಿ ಮಾರುಕಟ್ಟೆ ಕಟ್ಟಡ ನೆಲಸಮ

● ಕಟ್ಟಡ ಕೆಡವಲು ಸಹಕರಿಸಿದ ವ್ಯಾಪಾರಿಗಳು ● ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಕಾರ್ಯಾಚರಣೆ ಕೈಗೊಂಡ ಪುರಸಭಾಧಿಕಾರಿಗಳು



ತಿ.ನರಸೀಪುರದಲ್ಲಿ ಶಿಥಿಲಗೊಂಡಿದ್ದ ಹಳೇ ಮಾರುಕಟ್ಟೆ ಕಟ್ಟಡವನ್ನು ಪುರಸಭೆ ಅಧಿಕಾರಿಗಳು ಜೆಸಿಬಿ ಮೂಲಕ ನೆಲಸಮಗೊಳಿಸಿದರು.

ತಿ.ನರಸೀಪುರ, ಡಿ.24– ಪಟ್ಟಣದಲ್ಲಿ ಶಿಥಿಲಗೊಂಡಿದ್ದ ಹಳೇ ತರಕಾರಿ ಮಾರುಕಟ್ಟೆ ಕಟ್ಟಡವನ್ನು ಪುರಸಭಾಧಿಕಾರಿಗಳು ಪೊಲೀಸ್ ಅಧಿಕಾರಿಗಳ ಸಹಕಾರದೊಂದಿಗೆ ಮಂಗಳವಾರ ನೆಲಸಮಗೊಳಿಸಿದರು.

ಪುರಸಭೆ ಆಸ್ತಿಯಾಗಿದ್ದ ಹಳೇ ತರಕಾರಿ ಮಾರುಕಟ್ಟೆ ಶಿಥಿಲಗೊಂಡು ಬಳಕೆಗೆ ಯೋಗ್ಯವಾಗಿಲ್ಲದ ಹಿನ್ನೆಲೆಯಲ್ಲಿ ಅದನ್ನು ಕೆಡವಿ ಒಕ್ಕಲೆಬ್ಬಿಸಿದ್ದ ತರಕಾರಿ ವ್ಯಾಪಾರಿಗಳಿಗೆ ಸ್ಥಳಾವಕಾಶ ಕಲ್ಪಿಸಿಕೊಡಬೇಕೆಂಬ ಉದ್ದೇಶದಿಂದ ಪುರಸಭೆ ಅಧಿಕಾರಿಗಳು ಮೇಲಾಧಿಕಾರಿಗಳ ಆದೇಶದೊಂದಿಗೆ ಜೆಸಿಬಿ ಮೂಲಕ ಹಳೇ ಕಟ್ಟಡ ನೆಲಸಮಗೊಳಿಸಿದರು.

ಈ ಮಾರುಕಟ್ಟೆ ಕಟ್ಟಡದಲ್ಲಿ ವ್ಯಾಪಾರ ಮಾಡುತ್ತಿದ್ದ ವ್ಯಾಪಾರಿಗಳಿಗೆ ಅಂಗಡಿ ತೆರವುಗೊಳಿಸುವಂತೆ ಪುರಸಭೆ ಅಧಿಕಾರಿಗಳು ನೋಟಿಸ್ ನೀಡಿದ್ದ ಹಿನ್ನೆಲೆಯಲ್ಲಿ ವ್ಯಾಪಾರಿಗಳು ಸ್ವಯಂ ಪ್ರೇರಿತರಾಗಿ ತೆರವುಗೊಳಿಸಿ ಕಟ್ಟಡ ನೆಲಸಮಕ್ಕೆ ಅಧಿಕಾರಿಗಳಿಗೆ ಸಹಕಾರ ನೀಡಿದರು.

ಕಳೆದ ಕೆಲ ತಿಂಗಳ ಹಿಂದೆ ರಸ್ತೆ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಬೀದಿಬದಿ ವ್ಯಾಪಾರಿಗಳನ್ನು ತೆರವು ಮಾಡಿಸಲಾಗಿತ್ತು. ಈ ಹಿನ್ನಲೆಯಲ್ಲಿ ದಸಂಸ ಕಾರ್ಯಕರ್ತರು ಪುರಸಭೆ ಮುಂಭಾಗ ಧರಣಿ ನಡೆಸಿ ಶಿಥಿಲ ಕಟ್ಟಡ ಕೆಡವಿ ಎತ್ತಂಗಡಿ ಮಾಡಲಾದ ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡಿಕೊಡುವಂತೆ ಆಗ್ರಹಿಸಿದ್ದರು. ಬೀದಿಬದಿ ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡಿ ನಂತರ ಅವರನ್ನು ತೆರವು ಮಾಡಿಸಬೇಕೆಂದು ನಿಕಟಪೂರ್ವ ಅಧ್ಯಕ್ಷ ಮದನ್ ರಾಜ್ ಪುರಸಭೆ ವಿಶೇಷ ಸಭೆಯಲ್ಲಿ ವಿಷಯ ಪ್ರಸ್ತಾಪ ಮಾಡಿದ್ದರು. ಇದೀಗ ಅಂತಿಮವಾಗಿ ನೂರಾರು ವರ್ಷಗಳ ಹಳೇ ಮಾರುಕಟ್ಟೆ ಕಟ್ಟಡವನ್ನು ನೆಲಸಮ ಮಾಡಲಾಗಿದ್ದು, ಯಾವುದೇ ವ್ಯಾಪಾರಿಗಳು ಕಾರ್ಯಾಚರಣೆಗೆ ವಿರೋಧ ವ್ಯಕ್ತಪಡಿಸಲಿಲ್ಲ. ಸ್ಥಳದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಿ ಮಾರುಕಟ್ಟೆ ರಸ್ತೆ ಬಂದ್ ಮಾಡಲಾಗಿತ್ತು.

ಸಮಾಜ ಸೇವಕ, ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್ ಮಾತನಾಡಿ, ಕಳೆದ 60 ವರ್ಷಗಳಿಂದ ನಮ್ಮ ತಂದೆ ನಂತರ ನಾನು ಇದೇ ಕಟ್ಟಡದಲ್ಲಿ ವ್ಯಾಪಾರ ಮಾಡುತ್ತಾ ಬಂದಿದ್ದೇನೆ. ಪುರಸಭೆ ಅಧಿಕಾರಿಗಳು ಹಳೇ ಕಟ್ಟಡ ನೆಲಸಮ ಮಾಡಿ ಬೀದಿ ಬದಿ ವ್ಯಾಪಾರಿಗಳಿಗೆ ಅನುಕೂಲ ಕಲ್ಪಿಸಿಕೊಡುವ ಉದ್ದೇಶದಿಂದ ನಮಗೆ ನೋಟಿಸ್ ನೀಡಿದ್ದರು. ರಸ್ತೆ ಬದಿ ವ್ಯಾಪಾರಿಗಳು ನಮ್ಮ ಸಹೋದರರೇ. ಅವರು ಗಾಳಿ, ಮಳೆ, ಚಳಿ ಎನ್ನದೇ ವ್ಯಾಪಾರ ಮಾಡುತ್ತಾರೆ. ಅವರಿಗೆ ವ್ಯಾಪಾರಕ್ಕೆ ಅವಕಾಶ ಮಾಡಿಕೊಡುವ ಭರವಸೆ ಹಿನ್ನೆಲೆಯಲ್ಲಿ ನಾನು ಸ್ವಯಂ ಪ್ರೇರಿತನಾಗಿ ಅಂಗಡಿ ತೆರವುಗೊಳಿಸಿ ಕಟ್ಟಡ ನೆಲಸಮಕ್ಕೆ ಸಹಕಾರ ನೀಡಿದ್ದೇನೆ. ನಾನು ಸಮಾಜ ಸೇವಕನಾಗಿರಲು ಬಯಸುತ್ತೇನೆಯೇ ಹೊರತು ಸಮಾಜ ಕಂಟಕನಾಗಿ ಇರಲು ಬಯಸುವುದಿಲ್ಲ. ಹಾಗಾಗಿ ಪುರಸಭೆ ಹಾಗೂ ಪೊಲೀಸ್ ಇಲಾಖೆಯವರು ಮುಂದಿನ ದಿನಗಳಲ್ಲಿ ತೆರವು ಮಾಡಿಸಿದ ಜಾಗದಲ್ಲೇ ನನಗೆ ಪರ್ಯಾಯ ವ್ಯವಸ್ಥೆ ಮಾಡಿಕೊಡುವ ಭರವಸೆ ನೀಡಿದ್ದು, ಅವರ ಮಾತಿನ ಮೇಲೆ ನನಗೆ ಭರವಸೆ ಇದೆ ಎಂದರು.



ದಸಂಸ ಜಿಲ್ಲಾ ಸಂಚಾಲಕ ಡಾ. ಚಂದ್ರಶೇಖರ್ ಮಾತನಾಡಿ, ಈ ಹಿಂದೆ ಪುರಸಭೆ ಹಾಗೂ ಪೊಲೀಸ್ ಇಲಾಖೆ ಬೀದಿಬದಿ ವ್ಯಾಪಾರಿಗಳನ್ನು ಏಕಾಏಕಿ ತೆರವುಗೊಳಿಸಿದ್ದರು. ಅವರಿಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಪುರಸಭೆ ಎದುರು ಸಮಿತಿ ಧರಣಿ ನಡೆಸಿತ್ತು. ಈಗ ಪುರಸಭೆ ಹಾಗೂ ಪೊಲೀಸ್ ಇಲಾಖೆಯವರು ಮುಂದಾಗಬಹುದಾದ ಅನಾಹುತ ತಡೆಗಟ್ಟುವ ನಿಟ್ಟಿನಲ್ಲಿ ಹಳೇ ಮಾರುಕಟ್ಟೆ ಕಟ್ಟಡ ತೆರವುಗೊಳಿಸಿ, ಎಲ್ಲಾ ಬೀದಿಬದಿ ವ್ಯಾಪಾರಿಗಳಿಗೆ ವ್ಯವಸ್ಥಿತವಾಗಿ ವ್ಯಾಪಾರ ಮಾಡಲು ಅನುಕೂಲ ಕಲ್ಪಿಸಿಕೊಡಲು ಮುಂದಾಗಿರುವುದು ಸ್ವಾಗತಾರ್ಹವಾಗಿದ್ದು, ಹಳೇ ಕಟ್ಟಡದಲ್ಲಿ ವ್ಯಾಪಾರ ಮಾಡುತ್ತಿದ್ದವರಿಗೆ ತಕ್ಷಣವೇ ಪರ್ಯಾಯ ವ್ಯವಸ್ಥೆ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಪುರಸಭೆ ಹಳೇ ಮಾರುಕಟ್ಟೆ ಕಟ್ಟಡ ಶಿಥಿಲವಾಗಿದ್ದ ಕಾರಣ ಸಂಬಂಧಿಸಿದ ಅಧಿಕಾರಿಗಳ ಅನುಮತಿ ಪಡೆದು ನೆಲಸಮ ಮಾಡಲಾಗಿದೆ. ಅಲ್ಲದೇ ಈ ಹಿಂದೆ ಬೀದಿಬೀದಿ ವ್ಯಾಪಾರಿಗಳನ್ನು ತೆರವುಗೊಳಿಸುವ ವೇಳೆ ವ್ಯಾಪಾರಸ್ಥರಿಗೆ ಕೊಟ್ಟ ಮಾತಿನಂತೆ ಮಾರುಕಟ್ಟೆ ಒಳಗೆ ನಿರ್ಮಿಸಿರುವ ಮಳಿಗೆಯಲ್ಲಿ ತಾತ್ಕಾಲಿಕವಾಗಿ ತುಕಾರಿ ಮಾರಾಟ ಮಾಡಲು ಅವಕಾಶ ಕಲ್ಪಿಸಿಕೊಡಲಾಗುತ್ತದೆ. ಕೆಡವಲಾದ ಹಳೇ ಕಟ್ಟಡದಲ್ಲಿ ವ್ಯಾಪಾರ ಮಾಡುತ್ತಿದ್ದವರಿಗೆ ತೆರವಾದ ಜಾಗದಲ್ಲೇ ಸ್ಥಳಾವಕಾಶ ಮಾಡಿಕೊಡಲಾಗುತ್ತದೆ. ಮಾರುಕಟ್ಟೆ ಮಳಿಗೆಯಲ್ಲಿ ವ್ಯಾಪಾರ ಮಾಡಲು ಫಲಾನುಭವಿಗಳನ್ನು ಲಾಟರಿ ಮೂಲಕ ಆಯ್ಕೆ ಮಾಡಲಾಗುತ್ತದೆ.
-ಬಿ.ಕೆ.ವಸಂತಕುಮಾರಿ,
ಪುರಸಭೆ ಮುಖ್ಯಾಧಿಕಾರಿ.

ತಗಡೂರಲ್ಲಿ ಪಿಎಸಿಎಸ್ ನೂತನ ಕಟ್ಟಡ ಉದ್ಘಾಟನೆ



ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡವನ್ನು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಉದ್ಘಾಟಿಸಿದರು.

ತಗಡೂರು, ಡಿ.24– ಗ್ರಾಮದಲ್ಲಿ 30 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡವನ್ನು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ತಗಡೂರು ಕ್ಷೇತ್ರದ ದೊಡ್ಡ ಗ್ರಾಮವಾಗಿದ್ದು, ಈಗಾಗಲೇ ಸಾಕಷ್ಟು ಅನುದಾನ ನೀಡಿ ಅಭಿವೃದ್ಧಿಗೊಳಿಸಿದ್ದೇವೆ. ಮುಂದಿನ ದಿನಗಳಲ್ಲಿ ಈ ಗ್ರಾಮಕ್ಕೆ ಹೆಚ್ಚಿನ ಅನುದಾನ ನೀಡಿ ಮತ್ತಷ್ಟು ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಿದರು.

ಅಲ್ಲದೇ ಗ್ರಾಮದಲ್ಲಿ ಗೌತಮ ಯುವಕರ ಸಮೂಹ ಉದ್ಘಾಟಿಸಿ ಮಾತನಾಡಿದ ಯತೀಂದ್ರ, ಅಂಬೇಡ್ಕರ್ ಸಂವಿಧಾನ ರಚಿಸದಿದ್ದರೇ ನಾನು ಶಾಸಕನಾಗುತ್ತಿರಲಿಲ್ಲ. ತಂದೆ ಮುಖ್ಯಮಂತ್ರಿಯೂ ಆಗುತ್ತಿರಲಿಲ್ಲ. ಆದರೆ ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾತನಾಡಿರುವುದು ಖಂಡನೀಯ ಎಂದರು.

ಈ ವೇಳೆ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಬಸವರಾಜ್, ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಗ್ರಾಪಂ ಅಧ್ಯಕ್ಷೆ ಚಂದ್ರವತಿ, ಉಪಾಧ್ಯಕ್ಷ ಹಾಗೂ ಪಿಎಸಿಎಸ್ ಅಧ್ಯಕ್ಷ ಗುರು ಮಲ್ಲೇಶ್, 21 ಕೋಮಿನ ಯಜಮಾನ ಗೌಡಿಕೆ ರವಿಶಂಕರ್, ಪಿಎಸಿಎಸ್ ಉಪಾಧ್ಯಕ್ಷ ಜೈ ಪ್ರಕಾಶ್, ಗ್ರಾಪಂ ಸದಸ್ಯರಾದ ಮುದ್ದು ಮಾದಶೆಟ್ಟಿ, ಮಾದಶೆಟ್ಟಿ, ಸಂಪತ್ ಕುಮಾರ್, ಚಿಕ್ಕಸ್ವಾಮಿ, ಸರಿತಾ, ಮಹೇಶ್, ಕಾಂತರಾಜ್, ಸ್ವಾಮಿ, ಮಾದಪ್ಪ, ಪಟೇಲ್ ನಾಗಪ್ಪ, ನಟೇಶ್, ಮಹ ದೇವು, ಸಣ್ಣಶೆಟ್ಟಿ, ಬಸವೇಗೌಡ, ಪುಟ್ಟಣ್ಣ, ಪಾಪಣ್ಣ, ಬಾಲು, ಗೌತಮ್ ಯುವಕ ಸಂಘದ ಅಧ್ಯಕ್ಷ ಬಿ.ಮಹದೇವ್ ಸೇರಿದಂತೆ ಇನ್ನಿತರರಿದ್ದರು.

ಕೋಟೆಯಲ್ಲಿ ಅಮಿತ್ ಶಾ ವಿರುದ್ಧ ಪ್ರತಿಭಟನೆ



ಕೋಟೆಯಲ್ಲಿ ಅಮಿತ್ ಶಾ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಹೆಚ್.ಡಿ.ಕೋಟೆ, ಡಿ.24– ಡಾ.ಬಿ.ಆರ್. ಅಂಬೇಡ್ಕರ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿ ದೇಶ ದ್ರೋಹ ಕಾಯ್ದೆಯಡಿ ಬಂಧಿಸುವಂತೆ ಆಗ್ರಹಿಸಿ ಹ್ಯಾಂಡ್‌ಪೋಸ್ಟ್ ಯರಹಳ್ಳಿ ಮತ್ತು ಯರಹಳ್ಳಿ ಕಾವಲ್ ಗ್ರಾಮಸ್ಥರು ಮಂಗಳವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ತಾಲೂಕಿನ ಹ್ಯಾಂಡ್‌ಪೋಸ್ಟ್ ಯರಹಳ್ಳಿ ಗ್ರಾಮದಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ನಂತರ ಹ್ಯಾಂಡ್‌ಪೋಸ್ಟ್ ಸರ್ಕಲ್‌ನಲ್ಲಿ ಮಾನವ ಸರಪಳಿ ನಿರ್ಮಿಸಿ, ಬಳಿಕ ಕಾಲ್ನಡಿಗೆ ಜಾಥಾ ಮೂಲಕ ಪಟ್ಟಣದ ಮಿನಿ ವಿಧಾನಸೌಧಕ್ಕೆ ಆಗಮಿಸಿದ ಪ್ರತಿಭಟನಾಕಾರರು ಅಮಿತ್ ಶಾ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ಮಾತನಾಡಿ, ಕೂಡಲೇ ಅಮಿತ್ ಶಾ ವಿರುದ್ಧ ರಾಷ್ಟ್ರಪತಿಗಳು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೇ ದೇಶಾದ್ಯಂತ ಚಳವಳಿ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು. ಬಳಿಕ ತಹಸೀಲ್ದಾರ್ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಯರಹಳ್ಳಿ ಗ್ರಾಮದ ಯಜಮಾನರಾದ ಸೋಮೇಶ, ಸುರೇಶ್, ಸಿದ್ದಯ್ಯ, ಗುರುಬಸವಯ್ಯ, ನಂಜುಂಡಯ್ಯ, ಗ್ರಾಪಂ ಮಾಜಿ ಸದಸ್ಯರಾದ ಭೀಮಯ್ಯ, ಕೇಶವಮೂರ್ತಿ, ಮುಖಂಡರಾದ ನಾಗರಾಜು, ಈಶ್ವರ, ಶ್ರೀನಿವಾಸಮೂರ್ತಿ, ವೇದಮೂರ್ತಿ, ದಸಂಸ ಜಿಲ್ಲಾ ಸಂಚಾಲಕ ನಿಂಗರಾಜ, ಸಿದ್ದಯ್ಯ, ಮಹೇಶ್, ಯರಹಳ್ಳಿ ಕಾವಲ್ ಗ್ರಾಮಸ್ಥರಾದ ರಮೇಶ್, ನಿಂಗರಾಜು, ಸೋಮಯ್ಯ, ನಿಂಗಯ್ಯ, ಪ್ರಕಾಶ್, ಕುಮಾರ್ ಇತರರಿದ್ದರು.

ರಾಷ್ಟ್ರೀಯ ಗಣಿತ ದಿನಾಚರಣೆ

ಮೈಸೂರು, ಡಿ.24– ಮೈಸೂರು ಜಿಪಂ ವತಿಯಿಂದ, ಮೈಸೂರು ಜಿಲ್ಲಾ ವ್ಯಾಪ್ತಿಯ, ಮೈಸೂರು ಗ್ರಾಮಾಂತರ ಬೋಗಾದಿ ಸರ್ಕಾರಿ ಪ್ರೌಢಶಾಲೆಯಲ್ಲಿ ಖ್ಯಾತ ಗಣಿತ ಶಾಸ್ತ್ರಜ್ಞ ಶ್ರೀಶ್ರೀನಿವಾಸ ರಾಮಾನುಜಂ ಜನ್ಮ ದಿನಾಚರಣೆಯನ್ನು ರಾಷ್ಟ್ರೀಯ ಗಣಿತ ದಿನವನ್ನಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮೈಸೂರು ಜಿಪಂ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ ಕೆ.ಬಿ., ಬಿಇಓ ಪ್ರಕಾಶ್ ಎಂ., ಮೈಸೂರು ಶಾಲಾ ಶಿಕ್ಷಣ ಉಪನಿರ್ದೇಶಕರ ಕಚೇರಿಯ ವಿಷಯ ಪರಿವೀಕ್ಷಕರಾದ ಮನೋರಮಾ ಪಿ., ಮೈಸೂರು ಸರ್ಕಾರಿ ಪ್ರೌಢಶಾಲೆ, ಬೋಗಾದಿ, ಮುಖ್ಯ ಶಿಕ್ಷಕರಾದ ಲಿಂಗರಾಜು. ಎಸ್.ಎನ್, ಶ್ರೀಸಿದ್ದಾರ್ಥ ಹೆಚ್.ಹೆಚ್.ಲಿಂಗರಾಜೇಗೌಡರು, ವಿನೋದ್, ಜಿಪಂ ಎನ್‌ಆರ್‌ಡಿಎಂಎಸ್ ಅಧಿಕಾರಿಗಳು ಹಾಗೂ ಸಹ ಶಿಕ್ಷಕರು, ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಡಿ.30, ಮ.ಬೆಟ್ಟಕ್ಕೆ ಸದ್ಭಾವನಾ ಪಾದಯಾತ್ರೆ



ಸುದ್ದಿಗೋಷ್ಠಿಯಲ್ಲಿ ಗಾವಡಗೆರೆ ಮಠದ ಆಡಳಿತಾಧಿಕಾರಿ ಶಿಲ್ಪಾ ಮಾತನಾಡಿದರು.

ಹುಣಸೂರು, ಡಿ.24– ತಾಲೂಕಿನ ಗಾವಡಗೆರೆ ಗುರುಲಿಂಗ ಜಂಗಮ ದೇವರ ಮಠದಿಂದ ಸಮಾಜದ ಶಾಂತಿ ಸೌಹಾರ್ದತೆಗಾಗಿ ಡಿ.30ರಂದು ಶ್ರೀಮಲೆ ಮಹದೇಶ್ವರ ಬೆಟ್ಟಕ್ಕೆ 9ನೇ ವರ್ಷದ ಸದ್ಭಾವನಾ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಮಠದ ಆಡಳಿತಾಧಿಕಾರಿ ಶಿಲ್ಪಾ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಡಿ.30ರ ಅಮಾವಾಸ್ಯೆಯಂದು ಮಠದ ಗದ್ದುಗೆಯಲ್ಲಿ ರುದ್ರಾಭಿಷೇಕದ ಬಳಿಕ ವಿಶೇಷ ಪೂಜೆ ಸಲ್ಲಿಸಿ ನಟರಾಜ ಸ್ವಾಮೀಜಿ, ನರಸೀಪುರದ ಮಠದ ಸ್ವಾಮೀಜಿ ಹಾಗೂ ಮೈಸೂರಿನ ರಾಘವೇಂದ್ರ ಮಠದ ಶ್ರೀಗಳು ನೂರಾರು ಭಕ್ತರೊಂದಿಗೆ ಪಾದಯಾತ್ರೆಗೆ ಚಾಲನೆ ನೀಡಿ ತಾವೂ ಕೂಡ ಪಾಲ್ಗೊಳ್ಳುವರು ಎಂದರು.

ಅಂದು ಬೆಳಗ್ಗೆ ಮಠದಿಂದ ಹೊರಡುವ ಸದ್ಭಾವನಾ ಪಾದಯಾತ್ರೆ ಕೆ.ಆರ್.ನಗರದ ಕಂತೇನಹಳ್ಳಿ ಮೂಲಕ ಲಾಲನ ದೇವನಹಳ್ಳಿಯಲ್ಲಿ ತಂಗಲಿದ್ದು, ಡಿ.31ರಂದು ಬೆಳಗ್ಗೆ ಹೊರಟು ಮೈಸೂರಿನ ಕನಕ ಭವನದಲ್ಲಿ ವಾಸ್ತವ್ಯ ಹೂಡಲಿದೆ. ಜ.1ರಂದು ಬೆಳಗ್ಗೆ ಹೊರಟು ಸಂಜೆಗೆ ನರಸೀಪುರ ಜೆಎಸ್‌ಎಸ್ ಕಲ್ಯಾಣ ಮಂಟಪದಲ್ಲಿ ವಾಸ್ತವ್ಯ ಹೂಡಲಿದೆ. ಡಿ.2 ರಂದು ಬೆಳಗ್ಗೆ ಹೊರಟು ಸಂಜೆ ಕೊಳ್ಳೇಗಾಲದ ಜೆಎಸ್‌ಎಸ್ ಹಾಸ್ಟೆಲ್‌ನಲ್ಲಿ ವಾಸ್ತವ್ಯ ಹೂಡಲಿದೆ. ಡಿ.3ರಂದು ಬೆಳಗ್ಗೆ ಹೊರಟು ಸಂಜೆ ಹನೂರಿನ ಗೌರಿಶಂಕರ ಕಲ್ಯಾಣ ಮಂಟಪದಲ್ಲಿ ವಾಸ್ತವ್ಯ ಹೂಡಲಿದೆ. ಡಿ.4 ಬೆಳಗ್ಗೆ ಹೊರಟು ಸಂಜೆ ಮಹದೇಶ್ವರಬೆಟ್ಟದ ತಾಳುಬೆಟ್ಟದಲ್ಲಿ ವಾಸ್ತವ್ಯ ಹೂಡಲಿದೆ. ಡಿ.5 ರಂದು ಬೆಳಗ್ಗೆ ಹೊರಟು ಮಧ್ಯಾಹ್ನದ ವೇಳೆಗೆ ಮಹದೇಶ್ವರ ಬೆಟ್ಟ ತಲುಪಲಿದೆ ಎಂದರು.

ಯಾತ್ರೆ ಉದ್ದಕ್ಕೂ ಬೆಳಗ್ಗೆ ಉಪಾಹಾರ, ಮಧ್ಯಾಹ್ನ ಹಾಗೂ ರಾತ್ರಿ ಊಟ, ಕುಡಿಯಲು ಶುದ್ಧ ನೀರು ಅಲ್ಲದೆ ವೈದ್ಯಕೀಯ ಸೇವೆಯನ್ನು ಮಾಡಲಾಗಿದೆ. ಯಾತ್ರೆ ಪ್ರಾರಂಭದಲ್ಲಿ ಕೆ.ಆರ್.ನಗರದ ಸಚಿನ್ ಮೆಡಿಕಲ್‌ನವರು ಯಾತ್ರಿಗಳಿಗೆ ಮೆಡಿಕಲ್ ಕಿಟ್ ನೀಡುವ ಜೊತೆಗೆ ಯಾತ್ರೆಯ ಉದ್ದಕ್ಕೂ ಪ್ರತಿದಿನ ವೈದ್ಯಕೀಯ ಸೇವೆ ನೀಡಲಿದ್ದಾರೆ ಎಂದರು.

ಪಾದಯಾತ್ರೆ ಸಾಗುವ ಮಾರ್ಗದುದ್ದಕ್ಕೂ ಪ್ರತಿದಿನ ರಾತ್ರಿ ತಂಗುವ ಸ್ಥಳದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಠದ ವ್ಯವಸ್ಥಾಪಕ ಮಲ್ಲೇಶ್, ಮುಖ್ಯ ಶಿಕ್ಷಕ ಹೆಚ್.ಸಿ. ಮಂಜುನಾಥ್ ಉಪಸ್ಥಿತರಿದ್ದರು.

ಡಿಟಿಎಂಎನ್‌ನಲ್ಲಿ ಶಾಲಾ ವಸಂತೋತ್ಸವ



ಶಾಲಾ ವಸಂತೋತ್ಸವ ಕಾರ್ಯಕ್ರಮ ನಡೆಯಿತು.

ಬೆಟ್ಟದಪುರ, ಡಿ.24– ವಿದ್ಯಾರ್ಥಿಗಳು ಸಮಾಜದ ಬೆನ್ನೆಲುಬು. ಅವರು ಸಮಾಜದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಅವರಿಗೆ ಶಿಕ್ಷಕರು, ಪೋಷಕರು ಮತ್ತು ಸಮಾಜದ ಎಲ್ಲಾ ವರ್ಗಗಳು ಸಹಕರಿಸಬೇಕು ಎಂದು ವಿರಾಜಪೇಟೆಯ ಅರಮೇರಿ ಕಳಂಚೇರಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ತಿಳಿಸಿದರು.

ಇಲ್ಲಿನ ವಿಜಯಗಿರಿ ಎಜುಕೇಷನ್ ಟ್ರಸ್ಟ್ ಡಿಟಿಎಂಎನ್ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಶಾಲಾ ವಸಂತೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಶಿಕ್ಷಣ ಕೊಡಿಸುವುದು ಅಷ್ಟು ಸುಲಭದ ಮಾತಲ್ಲ. ಈ ಸಂಸ್ಥೆ ಕಳೆದ 23 ವರ್ಷಗಳಿಂದ ಬೆಳೆದು ಬಂದಿರುವ ಪರಿ ನಿಜಕ್ಕೂ ಮೆಚ್ಚುವಂತದ್ದು, ಅಲ್ಲದೇ ಈ ಸಂಸ್ಥೆ ಮುಂದಿನ ದಿನಗಳಲ್ಲಿ ಸಿಬಿಎಸ್‌ಸಿ ಹಾಗೂ ವಿದ್ಯಾರ್ಥಿಗಳ ವಸತಿ ನಿಲಯ ಮಾಡಲು ಹೊರಟಿರುವುದು ಪ್ರಶಂಸನೀಯ ಎಂದರು.

ಬಿಇಓ ರವಿಪ್ರಸನ್ನ ಮಾತನಾಡಿದರು. ಇದೇ ವೇಳೆ ಪ್ರಾಥಮಿಕ ವಿಭಾಗದಲ್ಲಿ ಅತೀ ಹೆಚ್ಚು ಅಂಕಗಳಿಸಿದ ಹಾಗೂ ಉತ್ತಮ ಹಾಜರಾತಿ ಇರುವ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಗೌರವಿಸಲಾಯಿತು. ಪುಟಾಣಿಗಳ ನೃತ್ಯ ಎಲ್ಲರ ಗಮನ ಸೆಳೆಯಿತು. ಸಂಸ್ಥೆ ಅಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ಶ್ರೀಶೈಲ, ಖಜಾಂಚಿ ಪಿ.ರವಿ, ಆಡಳಿತ ಅಧಿಕಾರಿ ಜೆ.ಸಿ.ನಟರಾಜ್, ನಿರ್ದೇಶಕ ಗುರುದತ್ತ, ವಿಜಯ್ ಕುಮಾರ್, ಕೃಷ್ಣಮೂರ್ತಿ, ಜ್ಞಾನಾನಂದ, ಸರೋಜಮ್ಮ, ಪಿಡಿಓ ಮಂಜುನಾಥ್, ಕಾರ್ಯದರ್ಶಿ ಪಾಂಡು, ಸಿಆರ್‌ಪಿ ಚಂದ್ರಶೇಖರ್, ಪುಟ್ಟಸ್ವಾಮಿ, ಚಿತ್ರಪೂರ್ಣಿಮಾ, ಕೌಸಲ್ಯ, ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕಿ ಜಯಂತಿ, ಪ್ರೌಢಶಾಲಾ ವಿಭಾಗದ ಮುಖ್ಯೋಪಾಧ್ಯಾಯ ಮುರಳೀಕೃಷ್ಣ, ಕಾಲೇಜು ವಿಭಾಗದ ಪ್ರಾಂಶುಪಾಲ ಸತೀಶ್ ಸೇರಿದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಗ್ರಾಮಸ್ಥರು ಹಾಗೂ ಪೋಷಕರು ಉಪಸ್ಥಿತರಿದ್ದರು.

ಪ್ರತಿಭಾ ಕಾರಂಜಿ: ಪ್ರಗತಿ ವಿದ್ಯಾಸಂಸ್ಥೆ ಮಕ್ಕಳ ಸಾಧನೆ



ಪ್ರತಿಭಾ ಕಾರಂಜಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಸರಗೂರು, ಡಿ.24– ಮೈಸೂರಿನಲ್ಲಿ ನಡೆದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಪಟ್ಟಣದ ಪ್ರಗತಿ ವಿದ್ಯಾಸಂಸ್ಥೆ ವಿದ್ಯಾರ್ಥಿಗಳು ಪದ್ಯ ವಾಚನ ಹಾಗೂ ಆಶುಭಾಷಣ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಶಾಲೆಯ ವಿದ್ಯಾರ್ಥಿನಿ ವಿ.ತೇಜಸ್ವಿನಿ ಪದ್ಯ ವಾಚನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾದರೇ, ಮತ್ತೋರ್ವ ವಿದ್ಯಾರ್ಥಿನಿ ಚಾತುರ್ಯ ಆಶುಭಾಷಣ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಗಳಿಸಿದ್ದಾಳೆ. ಪ್ರಶಸ್ತಿ ಗಳಿಸಿದ ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿ, ರಾಜಮ್ಮ ಲಿಂಗಯ್ಯ ಫೌಂಡೇಶನ್ ಹಾಗೂ ಪ್ರಗತಿ ಶಿಕ್ಷಕ ವರ್ಗ ಅಭಿನಂದಿಸಿದೆ.

ಅರ್ಜಿ ಅಹ್ವಾನ

ಮೈಸೂರು, ಡಿ.24– ನಂಜನಗೂಡು ನಗರಸಭೆ ವತಿಯಿಂದ ಅಮೃತ್ 2.0 ಯೋಜನೆಯಡಿ ಅಮೃತ್ ಮಿತ್ರ ಕಾರ್ಯಕ್ರಮದ ತಾಂತ್ರಿಕೇತರ ಚಟುವಟಿಕೆಯಲ್ಲಿ ನಗರಸಭಾ ವ್ಯಾಪ್ತಿಯಲ್ಲಿರುವ ಕೆಂಪೇಗೌಡ ಪಾರ್ಕ್, ಬಸವೇಶ್ವರ ಪಾರ್ಕ್, ವಾರ್ಡ್ ನಂ.23 ಹಾಗೂ ಕೆಂಪೇಗೌಡ ಪಾರ್ಕ್ ವಾರ್ಡ್ ನಂ.22 ಗಳನ್ನು ನಿರ್ವಹಣೆ ಮಾಡಲು ಡೇ–ನಲ್ಮ್ ಅಭಿಯಾನದಡಿ ರಚಿತವಾದ ಅರ್ಹ ಮಹಿಳಾ ಸ್ವ ಸಹಾಯ ಸಂಘಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಮಹಿಳಾ ಸ್ವಸಹಾಯ ಸಂಘಗಳು ನಂಜನಗೂಡಿನ ನಗರಸಭೆಯಲ್ಲಿ ಅರ್ಜಿ ಪಡೆದು, ಭರ್ತಿ ಮಾಡಿ ಡಿ.31ರೊಳಗೆ ಕಚೇರಿಗೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ವಿಜೃಂಭಣೆಯ ವಾಟಾಳು ಶ್ರೀಗಳ ವರ್ಧಂತ್ಯೋತ್ಸವ



ಶ್ರೀಸಿದ್ಧಲಿಂಗಶಿವಾಚಾರ್ಯ ಸಾಮೀಜಿ ಅವರಿಗೆ ಮಾಜಿ ಸಚಿವ ಎನ್.ಮಹೇಶ್ ಹುಟ್ಟುಹಬ್ಬದ ಶುಭ ಕೋರಿದರು.

ತಿ.ನರಸೀಪುರ, ಡಿ.24– ತಾಲೂಕಿನ ವಾಟಾಳು ಸೂರ್ಯ ಸಿಂಹಾಸನ ಮಠಾಧ್ಯಕ್ಷ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಗಳ 77ನೇ ವರ್ಧಂತ್ಯೋ ತ್ಸವ ವಿಜೃಂಭಣೆಯಿಂದ ನಡೆಯಿತು.

ಶ್ರೀಗಳ ವರ್ಧಂತ್ಯೋತ್ಸವ ಅಂಗವಾಗಿ ಮಠದಲ್ಲಿ ಮಂಗಳವಾರ ವಿಶೇಷ ಪೂಜಾ ಕೈಂಕರ್ಯ ನಡೆಯಿತು. ವಿವಿಧ ಹೂಗಳಿಂದ ಗದ್ದುಗೆಯನ್ನು ಅಲಂಕರಿಸಲಾಗಿತ್ತು. ನಂತರ ವಾಟಾಳು ಶ್ರೀಗಳನ್ನು ಭಕ್ತರು, ಗ್ರಾಮಸ್ಥರು ಅಲಂಕೃತ ವಾಹನದಲ್ಲಿ ಗ್ರಾಮದ ಬೀದಿಗಳಲ್ಲಿ ಮೆರವಣಿಗೆ ಮಾಡುವ ಮೂಲಕ ಭಕ್ತಿಭಾವದೊಂದಿಗೆ ಹುಟ್ಟುಹಬ್ಬ ಆಚರಿಸಿ ಸಂಭ್ರಮಿಸಿದರು.

ಶ್ರೀಗಳು ಮೆರವಣಿಗೆಯಲ್ಲಿ ಆಗಮಿಸಿ ವಿಶೇಷವಾಗಿ ನಿರ್ಮಿಸಿದ್ದ ವೇದಿಕೆಯಲ್ಲಿ ಆಸೀನರಾಗುತ್ತಿದ್ದಂತೆ ವಿವಿಧ ಜಿಲ್ಲೆ ಮತ್ತು ತಾಲೂಕುಗಳಿಂದ ಬಂದಿದ್ದ ಭಕ್ತ ಸಮೂಹ ಶ್ರೀಗಳಿಗೆ ಪುಷ್ಪಗುಚ್ಛ ನೀಡಿ ಹುಟ್ಟುಹಬ್ಬದ ಶುಭ ಕೋರಿ ಆಶೀರ್ವಾದ ಪಡೆದುಕೊಂಡರು. ಶ್ರೀಗಳ ಜನ್ಮದಿನ ಅಂಗವಾಗಿ ಮಠದ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣ ಶಿಬಿರ ಹಮ್ಮಿಕೊಂಡು ರೋಗಿಗಳಿಗೆ ಆರೋಗ್ಯ ಪರೀಕ್ಷೆ ನಡೆಸಿ ಔಷಧಗಳನ್ನು ವಿತರಿಸಲಾಯಿತು. ಮಠದ ಮುಂಭಾಗ ಕಿರಗಸೂರು ರಾಜಪ್ಪ ತಂಡದಿಂದ ಭಜನಾ ಕಾರ್ಯಕ್ರಮ ನಡೆಯಿತು. ಎಲ್ಲಾ ಭಕ್ತರಿಗೆ ಮಠದ ವತಿಯಿಂದ ಬೆಳಗ್ಗೆ ಉಪಹಾರ, ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಲಾಗಿತ್ತು.

ಶ್ರೀಗಳಿಗೆ ಜನ್ಮದಿನದ ಶುಭ ಕೋರಿ ಮಾತನಾಡಿದ ಮಾಜಿ ಶಾಸಕ ಎಂ. ಅಶ್ವಿನ್ ಕುಮಾರ್, ವಾಟಾಳು ಮಠವು ಸರ್ವ ಜನಾಂಗದ ಶಾಂತಿಯ ತೋಟವಾಗಿದೆ. ಇಲ್ಲಿ ಜಾತಿ ಭೇದವಿಲ್ಲದೇ ಎಲ್ಲರನ್ನೂ ಒಂದೇ ಸಮಾನವಾಗಿ ಕಾಣಲಾಗುತ್ತದೆ. ಸತತ 8 ವರ್ಷಗಳಿಂದ ಸ್ವಾಮೀಜಿಯವರ ಜನ್ಮ ವರ್ಧಂತ್ಯೋತ್ಸವದಲ್ಲಿ ಭಾಗವಹಿಸಿ ಶ್ರೀಗಳ ಆಶೀರ್ವಾದ ಪಡೆದಿದ್ದೇನೆ. ಭಗವಂತ ಶ್ರೀಗಳಿಗೆ ಆಯಸ್ಸು, ಆರೋಗ್ಯ ಕೊಟ್ಟು ಜನಸೇವೆ ಮಾಡುವ ಶಕ್ತಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.

ಮಾಜಿ ಸಚಿವ ಎನ್.ಮಹೇಶ್ ಮಾತನಾಡಿ, ಶ್ರೀಗಳ ಜಯಂತಿಯನ್ನು ಹಬ್ಬದಂತೆ ಆಚರಿಸಲಾಗುತ್ತಿದೆ. ಎಲ್ಲಾ ಸಮಾಜದವರು ಒಟ್ಟಾಗಿ ಶ್ರೀಗಳಿಗೆ ಶುಭ ಕೋರುತ್ತಿದ್ದಾರೆ. ವೈಯಕ್ತಿಕವಾಗಿ ನಾನು ಪ್ರತಿ ವರ್ಷ ಶ್ರೀಗಳ ಆಶೀರ್ವಾದ ಪಡೆಯುತ್ತಿದ್ದೇನೆ. ದೇವರು ಅವರಿಗೆ ಮತ್ತಷ್ಟು ಆರೋಗ್ಯ, ಆಯಸ್ಸು ಕರುಣಿಸಲಿ ಎಂದರು.

ಮಾಜಿ ಶಾಸಕರಾದ ಎಸ್.ಕೃಷ್ಣಪ್ಪ, ನಂಜುಂಡಸ್ವಾಮಿ, ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಮಹದೇವಯ್ಯ, ಬಿಜೆಪಿ ಮುಖಂಡ ಡಾ.ರೇವಣ್ಣ, ಧರ್ಮಸೇನಾ, ಎಸ್‌ಎಂಆರ್ ಪ್ರಕಾಶ್, ಪುರಸಭೆ ಸದಸ್ಯ ಎಸ್.ಕೆ.ಕಿರಣ್, ಬಿಜೆಪಿ ಕ್ಷೇತ್ರಾಧ್ಯಕ್ಷ ಸತ್ಯಪ್ಪ, ಸಾಲೂರು ಸ್ವಾಮೀಜಿ, ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ತಾಯೂರು ಪ್ರಕಾಶ್, ಆಡಿಟರ್ ಮಂಜು, ಮೂಗೂರು ಕುಮಾರಸ್ವಾಮಿ, ಬಿ.ವೀರಭದ್ರಪ್ಪ, ಕುರುಬೂರು ಶಿವು, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆಬ್ಬೇಹುಂಡಿ ಸೋಮ ಶೇಖರಪ್ಪ, ಮೆಡಿಕಲ್ ಕುಮಾರ್, ಡಾ.ಮಲ್ಲಿಕಾರ್ಜುನ ಸ್ವಾಮಿ, ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಮಠಕ್ಕೆ ಆಗಮಿಸಿ ಶ್ರೀಗಳಿಗೆ ಜನ್ಮದಿನದ ಶುಭ ಕೋರಿದರು.

ಜ.13ರಿಂದ ಶ್ರೀತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ

ವಿವಿಧ ಸೇವೆಗಳ ಸುಂಕದ ಬಹಿರಂಗ ಹರಾಜು



ಮೂಗೂರು ದೇವಾಲಯ ಆವರಣದಲ್ಲಿ ಬಹಿರಂಗ ಹರಾಜು ನಡೆಯಿತು.


ಮೂಗೂರು, ಡಿ.24– ಜನವರಿ 13ರಿಂದ 17ರವರೆಗೆ ಗ್ರಾಮದಲ್ಲಿ ನಡೆಯುವ ಶ್ರೀತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ದೇವಾಲಯದ ವಿವಿಧ ಸೇವೆಗಳ ಸುಂಕ ಮಾರಾಟದ ಬಾಬ್ತು 1 ವರ್ಷದ ಅವಧಿಗೆ ಬಹಿರಂಗ ಹರಾಜು ಪ್ರಕ್ರಿಯೆ ನಾಡ ಕಚೇರಿಯ ಉಪ ತಹಸೀಲ್ದಾರ್ ಲಕ್ಷ್ಮಿ ಸಮ್ಮುಖದಲ್ಲಿ ದೇವಾಲಯದ ಆವರಣದಲ್ಲಿ ಮಂಗಳವಾರ ನಡೆಯಿತು.

ಗ್ರಾಮದ ಮುಖಂಡರಾದ ಎಂ.ಎಂ. ಜಗದೀಶ್ ಮಾತನಾಡಿ, ಮುಡಿ ತೆಗೆಯುವ ಬಿಡ್‌ದಾರರು ಮುಡಿ ತೆಗೆಯಲು ನಿಗದಿ ದರಕ್ಕಿಂತ ಹೆಚ್ಚಿನ ಹಣವನ್ನು ಭಕ್ತರಿಂದ ವಸೂಲಿ ಮಾಡುತ್ತಿದ್ದಾರೆ. ಇದನ್ನು ತಡೆಗಟ್ಟಲು ಸೂಕ್ತ ಸ್ಥಳಗಳಲ್ಲಿ ದರ ಫಲಕ ಹಾಕಬೇಕು. ಅಲ್ಲದೇ ಸುಲಿಗೆಕೋರರ ವಿರುದ್ಧ ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು. ಈ ಬಾರಿಯ ಜಾತ್ರಾ ಮಹೋತ್ಸವ ಹರಾಜು ಪ್ರಕ್ರಿಯೆಗೆ ನಿರುತ್ಸಾಹದಿಂದ ಕೆಲವೇ ಮಂದಿ ಪಾಲ್ಗೊಂಡರು. ಕಳೆದ ಬಾರಿ 8 ಲಕ್ಷದ 6100 ರೂಗೆ ಹರಾಜು ನಡೆದಿತ್ತು ಈ ಬಾರಿ ದೇವಾಲಯದ ವಿವಿಧ ಸೇವೆಯಲ್ಲಿನ ಹರಾಜಿನ ಆದಾಯ 11 ಲಕ್ಷದ 64.200 ರೂ.ಗಳನ್ನು ದಾಖಲಿಸಿದೆ.

ದೇವಾಲಯದ ಆವರಣದಲ್ಲಿ ನಡೆದ ಹರಾಜಿನಲ್ಲಿ ಮಹೇಶ್ ಮುಡಿ ಸೇವೆಯಲ್ಲಿನ ಸುಂಕದ ಬಾಬ್ತು 2.70 ಲಕ್ಷ ರೂ., ಶಿವಣ್ಣ ಧೂಪ ಮಾರುವ ಹಕ್ಕು 40,600 ರೂ, ಎಂ.ಕುಮಾರ್ ಬಾಯಿ ಬೀಗ 1 ಸಾವಿರ ರೂ., ದೇವರಾಜು ಲಾಡು ಪ್ರಸಾದ ಮಾರಾಟದ ಸುಂಕ 6 ಲಕ್ಷದ 22 ಸಾವಿರ, ರಾಮು ಫ್ಯಾನ್ಸಿ ಸರಕುಗಳು ಮಾರಾಟ 2,30,200 ರೂ.ಗಳಿಗೆ ಹರಾಜಿನಲ್ಲಿ ಬಿಡ್ ಹಕ್ಕನ್ನು ತಮ್ಮದಾಗಿಸಿಕೊಂಡರು.

ಈ ವೇಳೆ ಗ್ರಾಪಂ ಅಧ್ಯಕ್ಷ ಎಂ.ಡಿ. ಲೋಕೇಶ್, ಕಂದಾಯ ಇಲಾಖೆ ಉಪ ತಹಸೀಲ್ದಾರ್ ಲಕ್ಷ್ಮಿ, ಗೌಡರ ಎಂ.ಪಿ. ನಾಗರಾಜು, ಪಾರುಪತ್ತೇದಾರ್ ಸಾಗರ್, ಗ್ರಾಮ ಲೆಕ್ಕಾಧಿಕಾರಿ ಆನಂದ್, ಸಂತೋಷ್, ಪ್ರಮೋದ್, ಗ್ರಾಪಂ ಮಾಜಿ ಸದಸ್ಯ ಮಾದೇಶ್, ಡೇರಿ ನಾಗೇಂದ್ರ ನಾಗರಾಜು, ಸ್ವಾಮಿ, ಮುಖ್ಯಪೇದೆ ಚಂದ್ರಶೇಖರ್, ಕುಮಾರ್, ರೇವಣ್ಣ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಕಲೀಲ್ ನಿಧನ



ಹೆಚ್.ಡಿ.ಕೋಟೆ, ಡಿ.24– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ಜುನೈದ್ ಅವರ ಸಹೋದರ ಕಲೀಲ್ (38) ಸೋಮವಾರ ನಿಧನರಾದರು. ಮೃತರು ಐವರು ಅಕ್ಕಂದಿರು, ಅಣ್ಣ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಂಜನಗೂಡು ತಾಲೂಕಿನ ಹೆಡಿಯಾಲದ ರುದ್ರಭೂಮಿಯಲ್ಲಿ ಮಂಗಳವಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಂತೂ ಅರ್ಜುನನ ಪ್ರತಿಮೆ ಪ್ರತಿಷ್ಠಾಪನೆ

ಮೈಸೂರು, ಡಿ.24(ಎಂಟಿವೈ)– ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಮದವೇರಿದ ಒಂಟಿಸಲಗನ ದಾಳಿಯಲ್ಲಿ ಮೃತಪಟ್ಟ ದಸರಾ ಅರ್ಜುನನ ಪ್ರತಿಮೆಯನ್ನು ಹಾಸನದ ಯಸಳೂರಿನಲ್ಲಿ ಮಂಗಳವಾರ ಪ್ರತಿಷ್ಠಾಪನೆ ಮಾಡಲಾಯಿತು.

ವಿವಿಧ ಗ್ರಾಮಗಳಲ್ಲಿ ಉಪಟಳ ನೀಡುತ್ತಿದ್ದ ಕಾಡಾನೆ ಸೆರೆಗೆ ಅರಣ್ಯ ಇಲಾಖೆ 2023ರ ಡಿ.3ರಂದು ಹಾಸನದ ಯಸಳೂರಿನ ದಬ್ಬಳಿಕಟ್ಟೆ ಎಂಬಲ್ಲಿ ಕಾರ್ಯಾಚರಣೆ ನಡೆಸುವ ವೇಳೆ ಅರ್ಜುನನ ಮೇಲೆರಗಿ ಹತ್ಯೆಗೈದಿತ್ತು. ಅರ್ಜುನ ಮರಣವನ್ನಪ್ಪಿದ ಸ್ಥಳದಲ್ಲಿ ಸ್ಮಾರಕ ನಿರ್ಮಿಸಲು ಸಾರ್ವಜನಿಕ ವಲಯದಿಂದ ಒತ್ತಾಯ ಕೇಳಿ ಬಂದಿತ್ತು.

ಈ ಹಿನ್ನೆಲೆಯಲ್ಲಿ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಅರ್ಜುನ ಮರಣವನ್ನಪ್ಪಿದ ಸ್ಥಳ ಹಾಗೂ ಆತ ನೆಲೆಸಿದಂತಹ ಬಳ್ಳೆ ಶಿಬಿರದಲ್ಲಿ ಎರಡು ಪ್ರತ್ಯೇಕ ಸ್ಮಾರಕದೊಂದಿಗೆ ಅರ್ಜುನನ ಪ್ರತಿಮೆ ಪ್ರತಿಷ್ಠಾಪಿಸಲು ಆದೇಶಿಸಿದ್ದರು.

ಅರ್ಜುನ ಮೃತಪಟ್ಟ ಒಂದು ವರ್ಷದ ಸ್ಮರಣಾರ್ಥ ಪ್ರತಿಮೆ ಪ್ರತಿಷ್ಠಾಪಿಸಲು ಉದ್ದೇಶಿಸಲಾಗಿತ್ತು ಆದರೆ ಪ್ರತಿಮೆ ನಿರ್ಮಾಣ ಕಾರ್ಯ ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ ಹೊಸ ವರ್ಷದ ಆರಂಭದಲ್ಲಿ ಪ್ರತಿಮೆ ಪ್ರತಿಷ್ಠಾಪಿಸಲು ನಿರ್ಧರಿಸಲಾಗಿತ್ತು.

ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ನಾಗರಹೊಳೆ ಅಭಯಾರಣ್ಯದ ಬಳ್ಳೆ ಆನೆ ಶಿಬಿರದಲ್ಲಿ ಫೈಬರ್‌ನಿಂದ ಅರ್ಜುನನ ಪ್ರತಿಮೆ ನಿರ್ಮಾಣ ಕಾರ್ಯ ಮೂರು ತಿಂಗಳಿನಿಂದ ಭರದಿಂದ ಸಾಗಿತ್ತು.

ಪ್ರತಿಮೆ ನಿರ್ಮಾಣ ಕಾರ್ಯ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸೋಮವಾರ ಬಳ್ಳೆ ಶಿಬಿರದಿಂದ ಹಾಸನದ ಯಸಳೂರಿಗೆ ಅರ್ಜುನನ ಪ್ರತಿಮೆಯನ್ನು ಲಾರಿಯಲ್ಲಿ ಕೊಂಡೊಯ್ಯಲಾಗಿತ್ತು. ಇಂದು ಬೆಳಗ್ಗೆ ಹಾಸನದ ಡಿಸಿಎಫ್ ಸೌರಭ್ ಕುಮಾರ್ ನೇತೃತ್ವದಲ್ಲಿ ಅರ್ಜುನ ಮಡಿದ ಸ್ಥಳದಲ್ಲಿ ಅವನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಯಿತು.

ಪ್ರತಿಮೆ ಸುತ್ತಲೂ ಸಣ್ಣಪುಟ್ಟ ಕಾಮಗಾರಿ ನಡೆಸಬೇಕಾಗಿದ್ದು ಅದು ಪೂರ್ಣಗೊಂಡ ನಂತರ ಅರಣ್ಯ ಸಚಿವ ಈಶ್ವರ್ ಬಿ ಖಂಡ್ರೆ ಅವರು ಅರ್ಜುನನ ಪ್ರತಿಮೆಯನ್ನು ಅನಾವರಣಗೊಳಿಸಲಿದ್ದಾರೆ.

ಮತ್ತೊಂದು ಪ್ರತಿಮೆ ನಿರ್ಮಾಣ ಕಾರ್ಯವೂ ಅಂತಿಮ ಹಂತ ತಲುಪಿದ್ದು ಅದನ್ನು ಬಳ್ಳೆ ಆನೆ ಶಿಬಿರದ ಸಮೀಪ ಪ್ರತಿಷ್ಠಾಪಿಸಲಾಗುತ್ತದೆ. ಈ ಎರಡು ಪ್ರತಿಮೆಗಳನ್ನು ಒಂದೇ ದಿನ ಉದ್ಘಾಟಿಸಲು ಚಿಂತಿಸಲಾಗಿದೆ.

ಫೈಬರ್‌ನಲ್ಲಿ ತಯಾರಿಸಿರುವ ಅರ್ಜುನನ ಪ್ರತಿಮೆ ನೋಡಲು ಸುಂದರವಾಗಿದ್ದು, ಅರ್ಜುನನ ಪ್ರತಿರೂಪದಂತೆ ಭಾಸವಾಗುತ್ತದೆ. ಈ ಪ್ರತಿಮೆ 2.98 ಮೀಟರ್ ಎತ್ತರ, 3.74 ಮೀಟರ್ ಉದ್ದ, 4.29 ಮೀಟರ್ ಎದೆ ಸುತ್ತಳತೆ ಹಾಗೂ 650 ಕೆಜಿ ತೂಕ ಹೊಂದಿದೆ.

ಅಪಾರ ಅಭಿಮಾನಿಗಳಲ್ಲಿ ಸಾರ್ಥಕ ಭಾವ

"ಅರ್ಜುನ, ಒಂದು ರೀತಿಯಲ್ಲಿ ನಮ್ಮ ನಾಡಿನ ಸಾಂಸ್ಕೃತಿಕ ರಾಯಭಾರಿ. ದಸರಾ ಆನೆ ಅರ್ಜುನ ನಮ್ಮ ಹೆಮ್ಮೆ. ಜನರ ಬಾಯಲ್ಲಿ ಇಷ್ಟೊಂದು ವಿಶ್ವಾಸ, ಪ್ರಶಂಸೆಗೆ ಪಾತ್ರವಾದ ದಸರಾ ರಾಯಭಾರಿಗಳು ಅಪರೂಪ. ಹೆಸರಿಗೆ ತಕ್ಕಂತೆ ಗಾಂಭೀರ್ಯ, ಬಲ ಹೊಂದಿದ್ದ ಅರ್ಜುನ ಜನರ ಮನದಲ್ಲಿ ಶಾಶ್ವತವಾಗಿ ಉಳಿದು ಹೋಗಿದ್ದಾನೆ.

- ಎ.ಪಿ.ನಾಗೇಶ್, ಮೈಸೂರು ಸಂಸ್ಕೃತಿ ಪ್ರೇಮಿ

(ಇತ್ತೀಚೆಗೆ ಅರ್ಜುನನ ಸ್ಮರಣಾರ್ಥ ಅರ್ಥಪೂರ್ಣ ಕಾರ್ಯಕ್ರಮ ಆಯೋಜಿಸಿದ್ದವರು)



ಅರ್ಜುನ ಮಡಿದ ಸ್ಥಳದಲ್ಲಿ ಪ್ರತಿಷ್ಠಾಪಿಸಲಾದ ಅರ್ಜುನನ ಪ್ರತಿಮೆ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಪುಷ್ಪ–2 (ಕ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುಐ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪುಷ್ಪ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ) + ಬೇಬಿ ಜಾನ್ (ಹಿಂ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಪ್ರಭಾ	
ಪುಷ್ಪ–2 (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಯುಐ (2024) (ಕ): ಬೆ.9.30ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಮ.2.35ಕ್ಕೆ, ಸಂ.5ಕ್ಕೆ, ರಾ.7.25ಕ್ಕೆ, ಮಾರ್ಕೋ (ಮ): ರಾ.9.55ಕ್ಕೆ.
ಸ್ಕ್ರೀನ್ 2	ಯುಐ (2024) (ಕ): ಬೆ.9ಕ್ಕೆ, ಪುಷ್ಪಾ 2 (ತೆ): ಮ.12.05ಕ್ಕೆ, ವಿಡುತಲೈ 2 (ತ): ಮ.3.55ಕ್ಕೆ, ರಾ.10.05ಕ್ಕೆ, ವನ್ವಾಸ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 3	ಇಡಿ ಎಕ್ಸ್ಟ್ರಾ ಡಿಸೆಂಟ್ (ಮ): ಬೆ.9.50ಕ್ಕೆ, ಪುಷ್ಪಾ 2 (ಕ): ಮ.12.15ಕ್ಕೆ, ಸಂ.6.10ಕ್ಕೆ, ಹರಿದಾಸರ ದಿನಚರಿ (ಕ): ಸಂ.4.05ಕ್ಕೆ, ಬಚ್ಚಲ ಮಲ್ಲಿ (ತೆ): ರಾ.10.05ಕ್ಕೆ,
ಸ್ಕ್ರೀನ್ 4	ಯುಐ (2024) (ಕ): ಬೆ.8.30ಕ್ಕೆ, ಬೆ.11.10ಕ್ಕೆ, ಮ.1.50ಕ್ಕೆ, ಸಂ.4.30.ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಐಸಿಸಿ ಚಾಂಪಿಯನ್ಸ್ ಟ್ರೋಫಿ

ಫೆ.23ರಂದು ದುಬೈನಲ್ಲಿ ಇಂಡೋ–ಪಾಕ್ ಕದನ



ಬೆಂಗಳೂರು, ಡಿ.24– ಭಾರಿ ವಿವಾದಕ್ಕೆ ಒಳಗಾಗಿದ್ದ ಐಸಿಸಿ ಚಾಂಪಿಯನ್ಸ್ ಟ್ರೋಫಿಯ ಅಧಿಕೃತ ವೇಳಾಪಟ್ಟಿಯನ್ನು ಐಸಿಸಿ ಮಂಗಳವಾರ ಸಂಜೆ ಬಿಡುಗಡೆಗೊಳಿಸಿದೆ.

2025ರ ಫೆಬ್ರವರಿ 19 ರಿಂದ ಮಾರ್ಚ್ 9ರವರೆಗೆ ಒಟ್ಟು 19 ದಿನಗಳ ಕಾಲ ಕ್ರಿಕೆಟ್ ಪ್ರೇಮಿಗಳಿಗೆ ರಸದೌತಣವನ್ನು ಉಣಬಡಿಸಲಿದೆ. ಫೆ.19ರಂದು ಆತಿಥೇಯ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ನಡುವೆ ಕರಾಚಿಯಲ್ಲಿ ಉದ್ಘಾಟನಾ ಪಂದ್ಯ ನಡೆಯಲಿದೆ.

ಎ ಗುಂಪಿನಲ್ಲಿ ಭಾರತ: ಒಟ್ಟು 8 ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದು, ಟೂರ್ನಿಯಲ್ಲಿ ಫೈನಲ್ ಸೇರಿದಂತೆ ಒಟ್ಟು 15 ಪಂದ್ಯಗಳು ನಡೆಯಲಿವೆ. ಎ ಗುಂಪಿನಲ್ಲಿ ಪಾಕಿಸ್ತಾನ, ಭಾರತ, ನ್ಯೂಜಿಲೆಂಡ್, ಬಾಂಗ್ಲಾದೇಶ ತಂಡಗಳಿದ್ದರೆ, ಬಿ ಗುಂಪಿನಲ್ಲಿ ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ಆಫ್ಘಾನಿಸ್ತಾನ, ಇಂಗ್ಲೆಂಡ್ ತಂಡಗಳಿವೆ. ಲೀಗ್ ಹಂತದಲ್ಲಿ ಎಲ್ಲಾ ತಂಡಗಳು ತಲಾ 3 ಪಂದ್ಯಗಳನ್ನು ಆಡಲಿವೆ.

ಈಗಾಗಲೇ ತೀರ್ಮಾನಿಸಿರುವ ಪ್ರಕಾರ ಟೂರ್ನಿಯು ಹೈಬ್ರಿಡ್ ಮಾದರಿಯಲ್ಲಿ ನಡೆಯಲಿರುವುದರಿಂದ ಫೆ.20 ರಂದು ಭಾರತ ತನ್ನ ಪ್ರಥಮ ಪಂದ್ಯವನ್ನು ಬಾಂಗ್ಲಾದೇಶ, 2ನೇ ಪಂದ್ಯ ಫೆ.23ರಂದು ಪಾಕಿಸ್ತಾನ, ಮಾ.2ರಂದು ನ್ಯೂಜಿಲೆಂಡ್ ವಿರುದ್ಧ ಆಡಲಿದೆ. ಭಾರತದ ಎಲ್ಲಾ ಪಂದ್ಯಗಳು ದುಬೈನಲ್ಲೇ ನಡೆಯಲಿದೆ. ಉಳಿದ ಪಂದ್ಯಗಳು ಪಾಕಿಸ್ತಾನದ ರಾವಲ್ಪಿಂಡಿ, ಲಾಹೋರ್ ಮತ್ತು ಕರಾಚಿಯಲ್ಲಿ ನಡೆಯಲಿದೆ.

ಸೆಮಿಫೈನಲ್ ಪಂದ್ಯಗಳು ಮಾ.4, 5ರಂದು ನಡೆಯಲಿದ್ದು, ಮಾ.9ರಂದು ಫೈನಲ್ ಪಂದ್ಯ ನಡೆಯಲಿದೆ. ಫೈನಲ್ ಪಂದ್ಯಕ್ಕೆ ಮೀಸಲು ದಿನ ಇದೆ. ಭಾರತ ಅರ್ಹತೆ ಪಡೆಯಲಿ ಅಥವಾ ಪಡೆಯದೇ ಇರಲಿ ಮೊದಲ ಸೆಮಿಫೈನಲ್ ಯುಎಇಯಲ್ಲಿ ನಡೆಯಲಿದೆ. ಫೈನಲ್ ಪಂದ್ಯ ಲಾಹೋರ್‌ನಲ್ಲಿ ನಿಗದಿಯಾಗಿದೆ. ಭಾರತ ಫೈನಲ್‌ಗೆ ಬಂದಲ್ಲಿ ಪಂದ್ಯ ಯುಎಇನಲ್ಲಿ ನಡೆಯಲಿದೆ.

ಚಾಂಪಿಯನ್ಸ್ ಟ್ರೋಫಿ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ
ಫೆ.19	ಪಾಕಿಸ್ತಾನ V/s ನ್ಯೂಜಿಲೆಂಡ್	ಕರಾಚಿ
ಫೆ.20	ಬಾಂಗ್ಲಾದೇಶ V/s ಭಾರತ	ದುಬೈ
ಫೆ.21	ಆಫ್ಘಾನಿಸ್ತಾನ V/s ದಕ್ಷಿಣ ಆಫ್ರಿಕಾ	ಕರಾಚಿ
ಫೆ.22	ಆಸ್ಟ್ರೇಲಿಯಾ V/s ಇಂಗ್ಲೆಂಡ್	ಲಾಹೋರ್
ಫೆ.23	ಪಾಕಿಸ್ತಾನ V/s ಭಾರತ	ದುಬೈ
ಫೆ.24	ಬಾಂಗ್ಲಾದೇಶ V/s ನ್ಯೂಜಿಲೆಂಡ್	ರಾವಲ್ಪಿಂಡಿ
ಫೆ.25	ಆಸ್ಟ್ರೇಲಿಯಾ V/s ದಕ್ಷಿಣ ಆಫ್ರಿಕಾ	ರಾವಲ್ಪಿಂಡಿ
ಫೆ.26	ಆಫ್ಘಾನಿಸ್ತಾನ V/s ಇಂಗ್ಲೆಂಡ್	ಲಾಹೋರ್
ಫೆ.27	ಪಾಕಿಸ್ತಾನ V/s ಬಾಂಗ್ಲಾದೇಶ	ರಾವಲ್ಪಿಂಡಿ
ಫೆ.28	ಆಫ್ಘಾನಿಸ್ತಾನ V/s ಆಸ್ಟ್ರೇಲಿಯಾ	ಲಾಹೋರ್
ಮಾ.1	ದಕ್ಷಿಣ ಆಫ್ರಿಕಾ V/s ಇಂಗ್ಲೆಂಡ್	ಕರಾಚಿ
ಮಾ.2	ನ್ಯೂಜಿಲೆಂಡ್ V/s ಭಾರತ	ದುಬೈ
ಮಾ.4	ಮೊದಲ ಸೆಮಿಫೈನಲ್	ದುಬೈ
ಮಾ.5	2ನೇ ಸೆಮಿಫೈನಲ್	ಲಾಹೋರ್
ಮಾ.9	ಫೈನಲ್ ಲಾಹೋರ್ (ಭಾರತ ಅರ್ಹತೆ ಪಡೆದರೆ ದುಬೈ)	
ಮಾ.10	ಮೀಸಲು ದಿನ	

ಎಲ್ಲಾ ಪಂದ್ಯಗಳು ಮಧ್ಯಾಹ್ನ 2.30ಕ್ಕೆ ಆರಂಭವಾಗಲಿದ್ದು, ಸ್ಟಾರ್ ಸ್ಪೋರ್ಟ್ಸ್‌ನಲ್ಲಿ ನೇರಪ್ರಸಾರ ಇರಲಿದೆ.

ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿನ 9000 ವಿವಿಧ ಹುದ್ದೆಗಳ ಭರ್ತಿ

● ನಾಲ್ಕು ನಿಗಮದಲ್ಲೂ ಪಾರದರ್ಶಕ, ನೇರ ನೇಮಕ ವ್ಯವಸ್ಥೆ ● 20 ಹೊಸ ಅಂಬಾರಿ ಉತ್ಸವ್ ಬಸ್‌ಗಳಿಗೆ ಚಾಲನೆ ● ಹೊಸ ಬಸ್‌ಗಳ ಮೈಸೂರು ಸೇರಿ ಹಲವೆಡೆ ಸಂಚಾರಕ್ಕೆ ಅನುವು

ಬೆಂಗಳೂರು, ಡಿ.24(ಕೆಎಂಶಿ)–ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಖಾಲಿ ಇರುವ 9,000 ವಿವಿಧ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಇಂದಿಲ್ಲಿ ತಿಳಿಸಿದ್ದಾರೆ.

ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ನಾಲ್ಕು ನಿಗಮಗಳಲ್ಲೂ ಪಾರದರ್ಶಕವಾಗಿ ಪ್ರತ್ಯೇಕ ನೇರ ನೇಮಕಾತಿ ನಡೆಯಲಿದೆ.

ನಗರದಲ್ಲಿ ಸಾರಿಗೆ ನಿಗಮದ 20 ಹೊಸ ಅಂಬಾರಿ ಉತ್ಸವ್ ಸ್ಲೀಪರ್ ಬಸ್‌ಗಳ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಹೊಸ ಹುದ್ದೆಗಳ ನೇಮಕಾತಿಗೆ ಸರ್ಕಾರ ಅನುಮತಿ ನೀಡಿರುವುದಲ್ಲದೆ, ನಿಗಮದ ಮಾರ್ಗಸೂಚಿಯಂತೆ ನೇಮಕಾತಿ ಪ್ರಕ್ರಿಯೆ ನಡೆಯಲಿದೆ.

ಈಗಾಗಲೇ ಕೆಲವೆಡೆ ಚಾಲಕರು ಮತ್ತು ನಿರ್ವಾಹಕರನ್ನು ಮೊದಲ ಹಂತದಲ್ಲಿ ಭರ್ತಿ ಮಾಡುವ ಕೆಲಸ ಆರಂಭಗೊಂಡಿದೆ.

ನಿಗಮಕ್ಕೆ 3,000ಕ್ಕೂ ಹೆಚ್ಚು ವಿವಿಧ ಮಾದರಿ ಬಸ್‌ಗಳು ಸೇರ್ಪಡೆಯಾಗಲಿದ್ದು, ಅದಕ್ಕೆ ತಕ್ಕಂತೆ ನೌಕರರ ನೇಮಕಾತಿ ಪ್ರಕ್ರಿಯೆಗೂ ಚಾಲನೆ ನೀಡಿದ್ದೇವೆ ಎಂದರು.



ಕಳೆದ ಕೆಲವು ದಿನಗಳ ಹಿಂದೆ ನಿಗಮಕ್ಕೆ 20 ವೋಲ್ವೊ ಬಸ್‌ಗಳು ಸೇರ್ಪಡೆಗೊಂಡವು. ಇದೀಗ ಅದೇ ಪ್ರಮಾಣದಲ್ಲಿ ಅಂಬಾರಿ ಉತ್ಸವ್ ಸ್ಲೀಪರ್ ಬಸ್‌ಗಳೂ ಸೇರ್ಪಡೆಗೊಳ್ಳುತ್ತಿವೆ.

ಅಂಬಾರಿ ಉತ್ಸವ್ ಸ್ಲೀಪರ್ ಬಸ್ 40 ಬರ್ಥ್‌ಗಳನ್ನು ಒಳಗೊಂಡಿರುತ್ತದೆ. ಇದು ವಾಯುಗತಿ ಶಾಸ್ತ್ರ ವಿನ್ಯಾಸ ಹಾಗೂ ಉತ್ತಮ ಇಂಧನ ದಕ್ಷತೆ ಹೊಂದಿರುತ್ತವೆ.

ವಿದ್ಯುತ್ ಚಾಲಿತ 750 ಬಸ್‌ಗಳ ಖರೀದಿಗೆ ಸಂಪುಟ ಒಪ್ಪಿಗೆ ನೀಡಿದ್ದು, ಅವೂ ಸೇರಲಿವೆ ಪರಿಸರ ಸಂರಕ್ಷಣೆ ದೃಷ್ಟಿಯಿಂದ ಬಸ್‌ಗಳನ್ನು ನಗರ ಪ್ರದೇಶಗಳಲ್ಲಿ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು.

ಹೊಸದಾಗಿ ಬರುತ್ತಿರುವ ಬಸ್‌ಗಳನ್ನು ಮೈಸೂರು, ದಾವಣಗೆರೆ, ಶಿವಮೊಗ್ಗ ಅಲ್ಲದೆ, ಜಿಲ್ಲಾ ಕೇಂದ್ರಗಳ ನಡುವೆಯೂ ಸಂಚಾರಕ್ಕೆ ಬಿಡಲಾಗುವುದು ಎಂದರು.

ಬೆಂಗಳೂರಿನಲ್ಲಿ ಇಬ್ಬರು ಬಾಣಂತಿಯರ ಸಾವು

ಬೆಂಗಳೂರು, ಡಿ.24– ಬೆಳಗಾವಿ, ಬಳ್ಳಾರಿ ಬೆನ್ನಲ್ಲೇ ರಾಜ್ಯ ರಾಜಧಾನಿ ಬೆಂಗಳೂರಿನಲ್ಲೂ ಬಾಣಂತಿ ಸಾವಿನ ಸರಣಿ ಮುಂದುವರೆದಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ಒಬ್ಬರು ಮೃತಪಟ್ಟರೆ, ಖಾಸಗಿ ಆಸ್ಪತ್ರೆಯಲ್ಲಿ ಮತ್ತೊಂದು ಸಾವು ಸಂಭವಿಸಿದೆ.

ಪಶ್ಚಿಮ ಬಂಗಾಳ ಮೂಲದ ತಾಲುಕ್ದಾರ್ ಮಂಡಲ್ ಎಂಬ 27 ವರ್ಷದ ಮಹಿಳೆ ವಾಣಿ ವಿಲಾಸ್ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ಮಹಿಳೆಗೆ ಎಲ್ಲಾ ಅಗತ್ಯ ಚಿಕಿತ್ಸೆ ನೀಡಲಾಗಿದ್ದು, ಅತಿಯಾದ ರಕ್ತಸ್ರಾವದಿಂದ ಆಕೆ ಸಾವನ್ನಪ್ಪಿದ್ದಾಳೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಎರಡನೇ ಮಗುವಿನ ಹೆರಿಗೆಗಾಗಿ ಭಾನುವಾರ ಬೆಳಗ್ಗೆ ಮಹಿಳೆ ಕೆಸಿ ಜನರಲ್ ಆಸ್ಪತ್ರೆಗೆ ದಾಖಲಾಗಿದ್ದರು. ಸಂಜೆ ವೇಳೆಗೆ ಸಹಜ ಹೆರಿಗೆ ಮೂಲಕ ಮಗುವಿಗೆ ಜನ್ಮ ನೀಡಿದ್ದರು. ರಾತ್ರಿ ವೇಳೆ ಅತೀವ ರಕ್ತಸ್ರಾವವಾಗಿದ್ದು, ಹೀಗಾಗಿ ವಾಣಿ ವಿಲಾಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು ಎಂದು ತಿಳಿದುಬಂದಿದೆ.

ಹೆಚ್ಚಿನ ಚಿಕಿತ್ಸೆಗಾಗಿ ವಾಣಿ ವಿಲಾಸ್ ಆಸ್ಪತ್ರೆಗೆ ಕರೆತರಲಾಗಿದ್ದು, ಮಹಿಳೆಗೆ ಅಗತ್ಯ ಚಿಕಿತ್ಸೆಗಳನ್ನ ನೀಡಲಾಗಿತ್ತು. ಆದರೆ, ಸೋಮವಾರ ಮೃತಪಟ್ಟಿದ್ದಾರೆ. ಚಿಕಿತ್ಸೆಯಲ್ಲಿ ಯಾವುದೇ ನಿರ್ಲಕ್ಷ್ಯವಾಗಿಲ್ಲ ಎಂದು ವೈದ್ಯರು ಹೇಳಿದ್ದಾರೆ.

ಇನ್ನೊಂದು ಸಾವಿನಲ್ಲಿ ಕಳೆದ ತಿಂಗಳು ಗಂಡು ಮಗುವಿಗೆ ಜನ್ಮ ನೀಡಿ, ಶಸ್ತ್ರಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಕಡೂರು ಮೂಲದ ಅನುಷಾ ಎಂಬುವವರು ಮೃತಪಟ್ಟಿದ್ದಾರೆ.

ಸ್ಫೋಟಕ ವಸ್ತುಗಳ ಘಟಕದಲ್ಲಿ ಭಾರಿ ಸ್ಫೋಟ; 12 ಮಂದಿ ಸಾವು

ಇಸ್ತಾಂಬುಲ್: ವಾಯುವ್ಯ ಟರ್ಕಿಯಲ್ಲಿ ಮಂಗಳವಾರ ಸ್ಫೋಟಕ ವಸ್ತುಗಳ ಘಟಕದಲ್ಲಿ ಪ್ರಬಲ ಸ್ಫೋಟ ಸಂಭವಿಸಿದ್ದು, ಘಟನೆಯಲ್ಲಿ 12 ಜನ ಸಾವನ್ನಪ್ಪಿದ್ದಾರೆ ಮತ್ತು ಐವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಾಥಮಿಕ ವರದಿಗಳ ಪ್ರಕಾರ, ಬಲಿಕೇಸಿರ್ ಪ್ರಾಂತ್ಯದ ಕರೇಸಿ ಜಿಲ್ಲೆಯ ಸ್ಫೋಟಕ ವಸ್ತುಗಳ ಘಟಕದಲ್ಲಿ ಸಂಭವಿಸಿದ ಸ್ಫೋಟದಲ್ಲಿ 12 ಉದ್ಯೋಗಿಗಳು ಸಾವನ್ನಪ್ಪಿದ್ದಾರೆ ಮತ್ತು ಐವರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸ್ಥಳೀಯ ಗವರ್ನರ್ ಇಸ್ಮಾಯಿಲ್ ಉಸ್ತಾವೊಗ್ಲು ಅವರು ಹೇಳಿದ್ದಾರೆ.



ಕಾರ್ಖಾನೆಯೊಳಗೆ ಯಾವುದೇ ಸಿಬ್ಬಂದಿ ಉಳಿದಿಲ್ಲ ಮತ್ತು ಬೆಂಕಿಯನ್ನು ನಂದಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸ್ಥಾವರದ ಒಂದು ವಿಭಾಗದಲ್ಲಿ ಬೆಳಗ್ಗೆ 8:25ಕ್ಕೆ(0525 GMT) ಸ್ಫೋಟ ಸಂಭವಿಸಿದೆ. ವಸತಿ ಪ್ರದೇಶಗಳಿಂದ ದೂರದಲ್ಲಿರುವ ಈ ಕಾರ್ಖಾನೆಯಲ್ಲಿ ಸಂಭವಿಸಿದ ಸ್ಫೋಟಕ್ಕೆ ಕಾರಣ ಇನ್ನೂ ತಿಳಿದುಬಂದಿಲ್ಲ ಎಂದು ಆಂತರಿಕ ಸಚಿವ ಅಲಿ ಯರ್ಲಿಕಾಯಾ ಅವರು ಹೇಳಿದ್ದಾರೆ. ಸ್ಫೋಟಕ್ಕೆ ಕಾರಣವೇನು ಎಂಬುದನ್ನು ಪತ್ತೆ ಹಚ್ಚಲು ಪ್ರಯತ್ನಿಸುತ್ತಿದ್ದೇವೆ ಎಂದು ಅವರು ತಿಳಿಸಿದ್ದಾರೆ.

ಮೈಸೂರು ಚಳಿಗಾಲದ ರೇಸ್



7ನೇ ದಿನ, ಬುಧವಾರ, 25–12–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಕ್ರಿಸ್‌ಮಸ್ ಪ್ಲೇಟ್–1100 ಮೀ. 2 ವರ್ಷ (ಟರ್ಮ್ಸ್). ಮ.2.00ಕ್ಕೆ
1. ಮೈಸೂರ್ ಪರಾಹ 2. ಆಶೀರ್ವಾದ್ 3. ಪಾರ್ಕ್‌ವೆಸ್ಟ್

II. ಸ್ಕೈಲೈನ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಬ್ರೇಕ್ ಅವೇ 2. ಅಗೇನಸ್ಟ್ ಆಲ್ ಆಡ್ಸ್ 3. ಸೂಪರ್ ಸೆಕ್ಸಿ

III ಪಣಜಿ ಪ್ಲೇಟ್–1100 ಮೀ. ರೇಟೆಡ್ 00 ರಿಂದ 25. ಮ.3.00ಕ್ಕೆ
1. ಅಂಕುಶ್ 2 ಕಂಟ್ರೆಸ್ ಮ್ಯಾಜಿಕ್ 3. ಮೆನಿ ಮೂನ್ಸ್

IV. ಮಾರಿಷಿಸ್ ಪರ್ಲ್ ಪ್ಲೇಟ್ ಡಿII–1100 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಸ್ಟ್ರೀಟ್ ಸೆನ್ಸ್ 2. ಜಸ್ಟ್ ಬ್ಲೂಸ್ 3. ಫೈರ್ ಬೋಲ್ಟ್

V. P.M. ಚನ್ನಬಸವಣ್ಣ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.4.00ಕ್ಕೆ
1. ಸಿಲ್ವರ್ ಸ್ಟ್ರಿಂಗ್ 2. ಹಿರೋಯಿಸಂ 3. ಕೋರ್ಟ್ ಜಸ್ಟರ್

VI. ಮಾರಿಷಿಸ್ ಪರ್ಲ್ ಪ್ಲೇಟ್ ಡಿI–1100 ಮೀ. ರೇಟೆಡ್ 20 ರಿಂದ 45. ಸಂಜೆ 4.30ಕ್ಕೆ
1. ರೋಡ್ ರನ್ನರ್ 2. ಡೇವಿಡ್ಸ್ ಡಿಲೈಟ್ 3. ಮಿಸ್ಟಿಕಲ್ ಮರ್ಲಿನ್

VII. ಕಾರ್ಕಳ ಪ್ಲೇಟ್– 1200 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1 ಸ್ಟೆಂಟ್ ಎಮಿಲಿಯಸ್ 2. ಶ್ಯಾಡೋಸ್ ಏಮ್ 3. ಸ್ಮಾರ್ಟ್‌ಕ್ಯಾಡಿಲಾಕ್

ದಿನದ ಅತ್ಯುತ್ತಮ	ಸಿಲ್ವರ್ ಸ್ಟ್ರಿಂಗ್
ಡಬ್ಬಲ್	ಬ್ರೇಕ್ ಅವೇ, ರೋಡ್ ರನ್ನರ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಸೈಬರ್ ಕ್ರೈಂ ಪ್ರಕರಣಗಳು

● ಮೈಸೂರಲ್ಲಿ 231 ಪ್ರಕರಣ, 49 ಕೋಟಿ ರೂ ವಂಚನೆ ● ಅರಿವು ಮೂಡಿಸಿದರೂ ಎಚ್ಚೆತ್ತುಕೊಳ್ಳದ ವಿದ್ಯಾವಂತರು ● ಕಾಲರ್ ಟ್ಯೂನ್‌ಗಳ ಮೂಲಕವೂ ಜಾಗೃತಿ



ಗಣೇಶ್.ಎ

ಮೈಸೂರು, ಡಿ.24–ಸೈಬರ್ ಕ್ರೈಮ್ ಕುರಿತು ಎಷ್ಟೇ ಅರಿವು ಮೂಡಿಸಿದರೂ ಸೈಬರ್ ಜಾಲದಲ್ಲಿ ಸಿಲುಕುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಆತಂಕವನ್ನುಂಟುಮಾಡಿದೆ.

ಪ್ರಸ್ತುತ ವರ್ಷ ಆನ್‌ಲೈನ್‌ನಲ್ಲಿ ಹಣ ಹೂಡಿಕೆ, ಷೇರು ಮಾರುಕಟ್ಟೆ ಸೇರಿದಂತೆ 231 ಪ್ರಕರಣಗಳು ದಾಖಲಾಗಿದ್ದು, 49,12,20,118 ಕೋಟಿ ರೂ. ಹಣವನ್ನು ಸಾರ್ವಜನಿಕರು ಕಳೆದುಕೊಂಡಿದ್ದಾರೆ. ಪ್ರಮುಖವಾಗಿ ಆನ್‌ಲೈನ್‌ನಲ್ಲಿ ಹಣ ಹೂಡಿಕೆ, ಷೇರು ಮಾರುಕಟ್ಟೆ ವಿಚಾರದಲ್ಲಿ ವಂಚನೆ ಪ್ರಕರಣ ದಾಖಲಾಗಿದೆ. ಅದರಲ್ಲೂ ವಿದ್ಯಾವಂತರೇ ಇಂತಹ ಮೋಸದ ಜಾಲದಲ್ಲಿ ಸಿಲುಕುತ್ತಿರುವುದು ಆತಂಕಕಾರಿಯಾಗಿದೆ.

2023ರಲ್ಲಿ 109 ಪ್ರಕರಣಗಳು ದಾಖಲಾಗಿದ್ದು, 3,72,29,471 ಕೋಟಿ ರೂ. ವಂಚನೆಯಾಗಿದೆ. ಅದರಲ್ಲಿ 10,03,258 ಹಣವನ್ನು ಪೊಲೀಸರು ವಾರಸುದಾರರಿಗೆ ವಾಪಸ್ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. 2022ರಲ್ಲಿ 272 ಪ್ರಕರಣಗಳು ದಾಖಲಾಗಿದ್ದು, 7,54,02,513 ರೂಗಳನ್ನು ಸೈಬರ್ ವಂಚನೆಯಿಂದ ಕಳೆದುಕೊಂಡಿದ್ದು, 67,35,787 ರೂ. ಹಿಂದಿರುಗಿಸಲಾಗಿದೆ. 2023ರಲ್ಲಿ 232 ಪ್ರಕರಣಗಳು ದಾಖಲಾಗಿದ್ದು, 10,55,82,087 ರೂ. ಕಳೆದುಕೊಂಡಿದ್ದಾರೆ. 1,77,85,853 ರೂ. ಹಿಂದಿರುಗಿಸಿದ್ದಾರೆ. ಕೆಲವೊಂದು ಪ್ರಕರಣದಲ್ಲಿ ಹಣ ಹಿಂದಿರುಗಿಸಲು ಸಮಸ್ಯೆ ಇರುವುದರಿಂದ ಆ ಹಣವನ್ನು ತಡೆಹಿಡಿಯಲಾಗಿದೆ.

2021, 22, 23ರ ಸಾಲಿಗಿಂತಲೂ 2024ರಲ್ಲಿ ಅತೀ ಹೆಚ್ಚು ಹಣ ವಂಚನೆಯಾಗಿದ್ದು, ಆನ್‌ಲೈನ್‌ನಲ್ಲಿ ಹಣ ಹೂಡಿಕೆ ಮಾಡಿರುವ 107 ಪ್ರಕರಣ ದಾಖಲಾಗಿವೆ. ಕೆಲಸ ಕೊಡಿಸುವುದು, ಆನ್‌ಲೈನ್ ಟಾಸ್ಕ್ ಎಂಬ ವಂಚನೆ ಪ್ರಕರಣಗಳು 61 ದಾಖಲಾಗಿವೆ. ಆದರೆ, ಕೆವೈಸಿ, ಓಟಿಪಿಯ 4, ಲಕ್ಕಿ ಡ್ರಾ 2, ಫೇಸ್‌ಬುಕ್, ಇನ್‌ಸ್ಟಾಗ್ರಾಂ 4, ಲೋನ್ ವಂಚನೆ 2, ಗ್ರಾಹಕ ಪ್ರತಿನಿಧಿ 2, ಮ್ಯಾಟ್ರಿಮನಿ 2, ಜಾಹೀರಾತು 2, ಕ್ರಿಪ್ಟೋ 1 ಹಾಗೂ ಇತರೆ 43 ಪ್ರಕರಣ ಸೇರಿದಂತೆ 233 ಪ್ರಕರಣ ದಾಖಲಾಗಿದೆ. ಮೈಸೂರು ನಗರದಲ್ಲಿ ಇತ್ತೀಚೆಗೆ ಡಿಜಿಟಲ್ ಅರೆಸ್ಟ್ ಪ್ರಕರಣಗಳು ಹೆಚ್ಚಾಗುತ್ತಿದ್ದು, 82ಕ್ಕೂ ಹೆಚ್ಚು ನಕಲಿ ಅರೆಸ್ಟ್ ಹೆಸರಲ್ಲಿ ವಂಚಕರು ಅಮಾಯಕರನ್ನು ಬೆದರಿಸಿ ಹಣ ವಂಚಿಸಿದ್ದಾರೆ. 233 ಪ್ರಕರಣಗಳಿಂದ ಬರೋಬ್ಬರಿ 49,12,20,118 ಕೋಟಿ ರೂ ವಂಚನೆಯಾಗಿದ್ದು, 3,76, 53,108 ಕೋಟಿ ರೂ. ಹಣವನ್ನು ಹಿಂದಿರುಗಿಸಿದ್ದಾರೆ. 6,12,30,013 ಹಣವನ್ನು ಪೊಲೀಸ್ ಇಲಾಖೆ ಹಿಂದಿರುಗಿಸಲು ಸಮಸ್ಯೆ ಇರುವುದರಿಂದ ಆ ಹಣವನ್ನು ತಡೆ ಹಿಡಿಯಲಾಗಿದೆ.

ಕಾಲರ್ ಟ್ಯೂನ್‌ನಲ್ಲಿ ಜಾಗೃತಿ

ಭಾರತದಲ್ಲಿ ಟೆಲಿಕಾಂ ಇಲಾಖೆಯು ಸೈಬರ್ ಅಪರಾಧ ಜಾಗೃತಿ ಕಾಲರ್ ಟ್ಯೂನ್‌ಗಳನ್ನು ಮೂರು ತಿಂಗಳವರೆಗೆ ಪ್ರತಿದಿನ 8–10 ಬಾರಿ ಕೇಳಿಸುವುದನ್ನು ಕಡ್ಡಾಯಗೊಳಿಸಿದೆ. ಭಾರತೀಯ ಸೈಬರ್ ಕ್ರೈಮ್ ಸಮನ್ವಯ ಕೇಂದ್ರದಿಂದ ನಿರ್ವಹಿಸಲ್ಪಡುವ ಈ ಉಪಕ್ರಮಗಳು, ಸಾರ್ವಜನಿಕ ಜಾಗೃತಿಯನ್ನು ಹೆಚ್ಚಿಸುವ ಮೂಲಕ ಡಿಜಿಟಲ್ ಬಂಧನ ಮತ್ತು ಸುಳ್ಳು–ಮೂಲದ ಅಂತರರಾಷ್ಟ್ರೀಯ ಕರೆಗಳಂತಹ ಹಣಕಾಸಿನ ವಂಚನೆಗಳನ್ನು ತಡೆಯುವ ಗುರಿಯನ್ನು ಹೊಂದಿವೆ.


ತಕ್ಷಣ ಮಾಹಿತಿ ನೀಡಿದರೆ, ಹಣ ಉಳಿಸಬಹುದು

ಪೊಲೀಸ್ ಇಲಾಖೆ ವತಿಯಿಂದ ನಿರಂತರವಾಗಿ ಜಾಗೃತಿ ಮೂಡಿಸುತ್ತಿದ್ದರೂ ವಿದ್ಯಾವಂತರೇ ಈ ಮೋಸದ ಜಾಲಕ್ಕೆ ಬಲಿಯಾಗುತ್ತಿದ್ದಾರೆ. ಲಿಂಕ್‌ಗಳನ್ನು ಕ್ಲಿಕ್ ಮಾಡುತ್ತಿದ್ದಾರೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕಳೆದ ಒಂದು ತಿಂಗಳಿನಿಂದ ಜಾಗೃತಿ ಕಾರ್ಯಕ್ರಮ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ತ್ವರಿತವಾಗಿ ಹಣ ಹಿಂದಿರುಗಿಸಲಾಗಿದೆ. ಸಾರ್ವಜನಿಕರು ಮೊಬೈಲ್‌ಗೆ ಯಾವುದೇ ಸಂದೇಶ, ಕರೆ ಮತ್ತು ಲಿಂಕ್ ಬಂದಾಗ ತಕ್ಷಣ ಸ್ಪಂದಿಸಬಾರದು. ಆಲೋಚನೆ ಮಾಡಿ ಅದರ ಹಿಂದಿನ ಸತ್ಯಾಸತ್ಯತೆ ಅರಿತುಕೊಳ್ಳಬೇಕು. ಬಹುತೇಕ ಪ್ರಕರಣಗಳನ್ನು ಭೇದಿಸಲು ಮುಂದಾದಾಗ ಅವುಗಳ ಸುಳಿವು ಸಿಗುತ್ತಿಲ್ಲ. ಅನೇಕ ನೆಟ್‌ವರ್ಕ್‌ಗಳಿಂದ ವಂಚಕರು ಕಾರ್ಯ ನಿರ್ವಹಿಸುತ್ತಿದ್ದಾರೆ.


ಸಾರ್ವಜನಿಕರು ಅನೇಕ ಪ್ರಕರಣಗಳಲ್ಲಿ ವಂಚನೆಯಾದ ನಂತರ ತಿಂಗಳ ನಂತರ ಬಂದು ದೂರು ನೀಡುತ್ತಾರೆ. ಇದರಿಂದ ಅದನ್ನು ಪತ್ತೆ ಮಾಡುವುದು ಕಷ್ಟಕರ. ಆದ್ದರಿಂದ ವಂಚನೆಯ ಕುರಿತ ಮಾಹಿತಿಯನ್ನು ತಕ್ಷಣ ನೀಡಿದರೆ, ಹಣ ಉಳಿಸಬಹುದು ಎಂದು ಸಲಹೆ ನೀಡಿದ್ದಾರೆ.

ಜಾನ್ ಭಾಸ್ಕೋ ನಿಧನ



ಮೈಸೂರು, ಡಿ.24–ಮೈಸೂರು ರಾಜೀವ್ ನಗರ ನಿವಾಸಿ ದಿವಂಗತ ವಿಲಿಯಮ್ಸ್ ಅವರ ಪುತ್ರ ಜಾನ್ ಭಾಸ್ಕೋ ಇಂದು ನಿಧನರಾದರು. ಇವರು ಪತ್ನಿ, ಪುತ್ರರು, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಡಿ.25) ಪೂರ್ವಾಹ್ನ 11.30ಕ್ಕೆ ಗಾಂಧಿನಗರದ ಸೆಮೆಟ್ರಿಯಲ್ಲಿ ನೆರವೇರಲಿದೆ ಎಂದು ಬಂಧು ಮೂಲಗಳು ತಿಳಿಸಿವೆ.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ದೇವೇಗೌಡ (ಮೀಸೆ ದೇವೇಗೌಡ)


ರಂಗಭೂಮಿ ಕಲಾವಿದರು, ನಟಭಯಂಕರ, ಕೆ.ಜಿ.ಕೊಪ್ಪಲು

ಇವರು ದಿ: 14.12.2024 ಶನಿವಾರ ದೈವಾಧೀನರಾಗಿದ್ದು. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 25.12.2024 ಬುಧವಾರ ಬೆಳಗ್ಗೆ 10.30 ಗಂಟೆಗೆ ಶ್ರೀ ಮರುಳೇಶ್ವರ ದೇವಸ್ಥಾನ, ಶಾಂತಿಧಾಮ ಆವರಣ, ಕಾವೇರಿ ಶಾಲೆ ಎದುರು, ಕುವೆಂಪುನಗರ ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೆ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಭೋಜನ: ಮಧ್ಯಾಹ್ನ 1.00ಕ್ಕೆ, ಸ್ಥಳ: ಶ್ರೀ ಮರುಳೇಶ್ವರ ದೇವಸ್ಥಾನ





unilet® Electronics & More ...

ಮೈಸೂರು: ಕುವೆಂಪುನಗರ (ಸರಸ್ವತಿಪುರಂ) ನಲ್ಲ ಪಾರ್ಕ್ ಹೋಟೆಲ್ ಎದುರು, ದೂ: 82967 72073

ಮೈಸೂರು: ವಿಜಯನಗರ (ಸೂರ್ಯ ಬೇಕರಿ ರಸ್ತೆ) ಬಾಟಾ ಶೋರೂಂ ಎದುರು ದೂ: 76195 55538

ಮೈಸೂರು: ಡಾ|| ರಾಜಕುಮಾರ್ ರಸ್ತೆ (ಶಕ್ತಿನಗರ) ತ್ರಿವೇಣಿ ಸರ್ಕಲ್, ಹಳೆ ಆರ್.ಟಿ.ಓ ದೂ: 99000 09681

LG BEST SHOP **ಮೈಸೂರು:** ಕುವೆಂಪುನಗರ (ಸರಸ್ವತಿಪುರಂ) ಅಕ್ಷಯ ಭಂಡಾರದ ಎದುರು, ದೂ: 91489 99894

ಮಂಡ್ಯ: ವಿದ್ಯಾನಗರ, ವಿಜಯಬ್ಯಾಂಕ್ ಸಮೀಪ ದೂ: 99001 17360

ರಾಮನಗರ: ಐಜೂರು ಪೋಲೀಸ್ ಸ್ಟೇಷನ್ ಸಮೀಪ, ದೂ: 99000 98795

50+ STORES | BENGALURU | MYSORE | TUMKUR | HOSAKOTE | RAMANAGARA | KOLAR | NELAMANGALA | MANDYA | CHITRADURGA | DODDABALLAPURA | SHIVAMOGGA | HASSAN | www.uniletstores.com